ಯಕ್ಷಗಾನದ ಯಕ್ಷರು

ಕೆ. ಪಿ. ರಾಜಗೋಪಾಲ್ ಕನ್ಯಾನ



ಯಕ್ಷಗಾನದ ಯಕ್ಷರು

ಸಂಪಾದಕ

ಕೆ.ಪಿ. ರಾಜಗೋಪಾಲ್ ಕನ್ಯಾನ

ಹರೀಶ್ ಎಂಟರ್‌ಪ್ರೈಸಸ್

YAKSHAGANADA YAKSHARU - Articles and Prasanga on yakshagana Collected by **K.P. RajGopal Kanyana**, Published by **Harish Enterprises,** No. 7/3, 1st Floor, Opp. Janatha Hotel, V.V. Puram, Bangalore - 560 003.

ಮೊದಲ ಮುದ್ರಣ - 2007

ಪುಟಗಳು : viii+136

ಬೆಲೆ : 75/-

ಮುಖಪುಟ ವಿನ್ಯಾಸ :
ಜಿ. ರಾಮು

ಪುಟ ವಿನ್ಯಾಸ :
ಶ್ರೀ ವಿನಾಯಕ ಗ್ರಾಫಿಕ್ಸ್
ಕಾಟನ್‌ಪೇಟೆ ರಸ್ತೆ, ಬೆಂಗಳೂರು
ಮೊಬೈಲ್ : 9886416745 / 9844135379

ಮುದ್ರಕರು :
ಆಶ್ವಿನಿ ಪ್ರಿಂಟರ್ಸ್, ಬೆಂಗಳೂರು.

ಪ್ರಕಾಶಕರ ಮಾತು

ಕರ್ನಾಟಕದ ಗಂಡುಕಲೆಯಾದ ಯಕ್ಷಗಾನ ಇಂದು ವಿಶ್ವ ಮಾನ್ಯತೆ ಪಡೆದಿದೆ. ಅಂತಹ ಈ ಶ್ರೇಷ್ಠ ಕಲಾಕ್ಷೇತ್ರದಲ್ಲಿ ಹೆಸರು ಮಾಡಿದ ಕಲಾವಿದರು, ಕವಿಗಳು ಹಾಗೂ ಸಾಹಿತ್ಯಗಳ ಬಗ್ಗೆ ವಿದ್ವಾಂಸರಾದ ಶ್ರೀ ಕೆ.ಪಿ. ರಾಜಗೋಪಾಲ್ ಕನ್ಯಾನರು ಶ್ರಮವಹಿಸಿ ಸಂಗ್ರಹಿಸಿದ ಈ ಮಾಹಿತಿಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಮಗೆ ಹೆಮ್ಮೆಯೆನಿಸಿದೆ. ಅಲ್ಲದೇ ಈ ಕೃತಿಯಲ್ಲಿ ಮೈಸೂರಿನ ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದ ಎಡತೊರೆ 'ಅರ್ಕಪುಷ್ಕರಣೀ ಮಹಾತ್ಮೆ' ಎಂಬ ಗದ್ಯ ಗ್ರಂಥದ ಆಧಾರದಿಂದ ರಚಿಸಿದ ಸೂರ್ಯೋದಯ ಎಂಬ ಇದೇ ಸಂಪಾದಕರ ಕಥಾ ಸಂಯೋಜನೆಯಲ್ಲಿ ರಚಿತವಾದ ಯಕ್ಷಗಾನ ಪ್ರಸಂಗವೂ ಇದೆ. ಇದರ ಕವಿ ಜಲಜಸಖ ಬೆಳ್ಳಾರೆ ಇವರು. ಈ ಕೃತಿಯನ್ನು ಪ್ರಕಟಿಸಲು ಅನುಮತಿಯಿತ್ತ ಸಂಪಾದಕರಿಗೆ ಕೃತಜ್ಞತೆಗಳು. ಓದುಗರ ಪ್ರೋತ್ಸಾಹವನ್ನು ಬಯಸುತ್ತೇವೆ.

–ಪ್ರಕಾಶಕರು

ಪರಿವಿಡಿ

ಯಕ್ಷಗಾನದ ಯಕ್ಷರು
ವಿದ್ವಾನ್ ಟಿ. ಕೇಶವ ಭಟ್ಟರು

ಬಹುಮುಖ ಜೀವನಮೌಲ್ಯ ಸಾಧನೆಗಳನ್ನು ಮಾಡಿರುವ ವಿರಳ ವಿದ್ವಾಂಸರಲ್ಲಿ ಟಿ. ಕೇಶವ ಭಟ್ಟರು ಎದ್ದು ಕಾಣುವ ವ್ಯಕ್ತಿ. ಬಡ ಬ್ರಾಹ್ಮಣ ಕುಟುಂಬದಲ್ಲಿ ಜನನ. ಕೇವಲ 8ನೆಯ ತರಗತಿ ಉತ್ತೀರ್ಣರಾಗಿ ಪ್ರಾಥಮಿಕ ಶಾಲಾಧ್ಯಾಪಕರಾಗಿ ಸ್ವಪರಿಶ್ರಮದಿಂದ ಕಲಿತು ವಿದ್ವಾನ್, ವಿಶಾರದ, ಬಿ.ಒ.ಎಲ್, ಎಂ.ಎ. ಪದವೀಧರರಾಗಿ ಕಾಲೇಜು ಪ್ರಾಧ್ಯಾಪಕರಾಗಿ ನಿವೃತ್ತರಾದುದು ಅವರ ಶಿಕ್ಷಣ ಕ್ಷೇತ್ರದ ಮಹತ್ಸಾಧನೆ. ಶಿಕ್ಷಣ ಅವರ ವೃತ್ತಿಕ್ಷೇತ್ರ. ಜೀವನ ಪ್ರಾರಂಭ ದಶೆಯಲ್ಲಿ ಅಡಕೆ ತೋಟದ ಕೃಷಿಯೇ ವೃತ್ತಿ. ಹೀಗೆ ಅವರು ಕೃಷಿ, ಶಿಕ್ಷಣ, ಸಾಹಿತ್ಯ, ಕಲೆ (ಯಕ್ಷಗಾನ ಮತ್ತು ಗಮಕ), ದೇಶಭಕ್ತಿ, ದೇವಭಕ್ತಿ ಎಂಬ ಪ್ರಮುಖ ಆರು ಕ್ಷೇತ್ರಗಳಲ್ಲಿ ಬಾಳಿನ ಉಳುಮೆಯನ್ನು ಮಾಡಿ, ಈಗ ಎಂಬತ್ತರ ತಾರುಣ್ಯದಲ್ಲಿ ನಮ್ಮ ಮುಂದಿದ್ದಾರೆ. ಈ ಒಂದೊಂದು ಕ್ಷೇತ್ರಕ್ಕೂ ಅವರ ಕೊಡುಗೆ ಅಪಾರವಾಗಿಯೇ ಇದೆ. ಕನ್ನಡ ಭಾಷೆ-ಛಂದಸ್ಸು-ವ್ಯಾಕರಣಗಳ ಬಗ್ಗೆ ''ಇದಮಿತ್ಥಂ'' ಎಂದು ಅಧಿಕಾರಯುತವಾಗಿ ಮಾತಾಡಬಲ್ಲ ಕೇವಲ ಬೆರಳೆಣಿಕೆಯಷ್ಟು ವಿರಳ ವಿದ್ವಾಂಸರಲ್ಲಿ ಶ್ರೀಯುತ ಕೇಶವ ಭಟ್ಟರು ಅಗ್ರಪಂಕ್ತಿಯವರು. ಅಂತಹವರ ಮಧ್ಯೆ ನಾವಿದ್ದುದೇ ಒಂದು ಸೌಭಾಗ್ಯದ ಸಂಗತಿ ಎಂದು ಕನ್ನಡದ ಶ್ರೇಷ್ಠ ಏಕೈಕ ಶತಾವಧಾನಿ ಡಾ. ಆರ್. ಗಣೇಶರು ಹೇಳುತ್ತಾರೆ. ಸುಮಾರು 40 ವರ್ಷಗಳ ಕಾಲ ದೇಶ ಸೇವೆಯನ್ನು ಮಾಡಿದ್ದಾರೆ. ನೂರಾರು ಉಪನ್ಯಾಸ ಹಾಗೂ ಶಿಕ್ಷಣ ಶಿಬಿರ, ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಹಲವು ಪ್ರಾಚೀನ ಕಾವ್ಯಗಳನ್ನು ಸಂಪಾದಿಸಿದ್ದಾರೆ; ರಚಿಸಿದ್ದಾರೆ. ಕಾವ್ಯ, ನಾಟಕ, ಯಕ್ಷಗಾನ, ಜಾನಪದ ನಿಘಂಟು, ಸಂಶೋಧನೆ, ಅಂಕಣ ಬರಹ, ಕವನ ವಿಮರ್ಶೆ, ಅನುವಾದ, ಪ್ರಬಂಧ ಸ್ಮರಣಿಕ, ಶೈಕ್ಷಣಿಕ, ಧಾರ್ಮಿಕ, ಬಾಲ ಸಾಹಿತ್ಯವೇ ಮೊದಲಾದ ಪ್ರಕಾರಗಳಲ್ಲಿ 50ಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಹಲವು ಬೃಹತ್ ಪುಸ್ತಕ ಪ್ರಕಟಣಾ

ಸಮಿತಿಗಳಲ್ಲಿ ದುಡಿದಿದ್ದಾರೆ. ಕನ್ನಡ ಪರಿಷತ್‌ಪತ್ರಿಕೆ, ಕರ್ನಾಟಕ ಲೋಚನ, ಭೃಗುವಾಣಿ ಪತ್ರಿಕೆಗಳ ಸಂಪಾದಕರಾಗಿದ್ದು ಸೇವೆ ಸಲ್ಲಿಸಿದ್ದಾರೆ. 'ಧರ್ಮಭಾರತಿ' ಮಾಸಿಕದ ಸಂಪಾದಕ ಮಂಡಲಿಯಲ್ಲಿದ್ದರು ಅವರ ಹಲವು ಕೃತಿಗಳಿಗೆ ಬಹುಮಾನ-ಪುರಸ್ಕಾರಗಳು ದೊರೆತಿದ್ದು ಹತ್ತಾರು ಕಡೆ ಸನ್ಮಾನ-ಬಿರುದುಗಳಿಗೆ ಭಾಜನರಾಗಿದ್ದಾರೆ. ಪ್ರಕೃತ ಯಕ್ಷಗಾನಕ್ಕೆ ಅವರ ಕೊಡುಗೆಯನ್ನು ಕುರಿತು ಅವಲೋಕಿಸಲಾಗುವುದು.

ಕಾಸರಗೋಡು ತಾಲೂಕಿನ ಭಾಗ ಯಕ್ಷಗಾನದ ತೆಂಕುತಿಟ್ಟಿನ ಪ್ರಭೇದದ ಉಜ್ವಲತೆಗೆ ಹೆಸರಾದುದು. ಪಾರ್ತಿಸುಬ್ಬ, ಸಂಕಯ್ಯ ಭಾಗವತರು, ಜತ್ತಿ ಈಶ್ವರ ಭಾಗವತರು ಇವರೆಲ್ಲ ಪ್ರಸಂಗಕಾರರಾದರೆ, ಬಲಿಪ ನಾರಾಯಣ ಭಾಗವತರು, ಕುಂಡೆಚ್ಚ ಭಾಗವತರು, ಮಾಂಬಾಡಿ ಭಾಗವತರು, ಪದ್ಯಾಣ ಪುಟ್ಟು ನಾರಾಯಣ ಭಾಗವತರು, ಅಣ್ಣಿ ಭಾಗವತರು, ಮೈಂದಪ್ಪರೈ ಮುಂತಾದವರು ಯಕ್ಷಗಾನ ಹಾಡುಗಾರರು. ಕೆಮ್ಮಣ್ಣುನಾರ್ಣಪ್ಪಯ್ಯ, ಕುದ್ರೆಕೂಡ್ಲುರಾಮಭಟ್ಟು, ನೆಡ್ಲೆನರಸಿಂಹ ಭಟ್ಟು, ಮುಂತಾದವರು ಚೆಂಡೆಮದ್ದಳೆಗಾರರಾಗಿದ್ದಾರೆ. ಶೇಣಿ ಗೋಪಾಲಕೃಷ್ಣಭಟ್ಟ, ಬರೆಕೇಶವ ಭಟ್ಟ, ಕೀರಿಕ್ಕಾಡು ವಿಷ್ಣು ಮಾಸ್ತರ್, ಕುರಿಯ ವಿಠಲ ಶಾಸ್ತ್ರಿ, ಕುರಿಯ ವಿಠಲ ಶಾಸ್ತ್ರಿ,ಬಣ್ಣದ ಮಾಲಿಂಗ, ಚಂದ್ರ ಗಿರಿ ಅಂಬು ಮುಂತಾದವರು ಅರ್ಥಧಾರಿಗಳು, ವೇಷಧಾರಿಗಳು, ಯಕ್ಷಗಾನ ಕವಿಗಳು ಎಂಬ ವರ್ಗದಲ್ಲಿ ಹೆಸರಾಂತ ಕಲಾವಿದರು ಈ ಪ್ರದೇಶದವರೆನ್ನಬಹುದು. ಈ ತೆಂಕುತಿಟ್ಟಿನ ಯಕ್ಷಗಾನ ಕಲೆ ಉಳಿದೆಡೆಯ ಕಲೆಗಳಿಗಿಂತ ಹೆಚ್ಚು ಪ್ರಬುದ್ಧವಾದುದೇ ಸರಿ. ಅದಕ್ಕೆ ಕಾರಣಗಳನ್ನು ಕೊಟ್ಟು ವಿವರ ಪಡಿಸುವುದೆಂದರೆ, ಹತ್ತಾರು ಪುಟಗಳಾಗಬಹುದು. ಅದಿಲ್ಲಿ ಪ್ರಸ್ತುತವಲ್ಲ. ಕೇಶವ ಭಟ್ಟರು ಅಂತಹ ತೆಂಕುತಿಟ್ಟಿನ ಯಕ್ಷಗಾನದಲ್ಲಿ ಹಿಮ್ಮೇಳದವರಾಗಿ ಅಂದರೆ ಮದ್ದಳೆಗಾರರಾಗಿ (ಮದ್ದಳೆವಾದಕರಾಗಿ) ಇತರ ಭಾಗವತಿಕೆ ಅರ್ಥಧಾರಿಕೆಗಳಿಗಿಂತ ಹೆಚ್ಚಾಗಿ ರಯ್ಯಿಸಿದವರಾಗಿದ್ದಾರೆ.

ಇವರ ತಂದೆ ಗೋವಿಂದಭಟ್ಟರು ಯಕ್ಷಗಾನ ಪದ (ಪದ್ಯ) ರಚನಾ ಪರಿಣತರು, ಮದ್ದಳೆ, ಚೆಂಡೆ ವಾದನಗಳನ್ನು ಸ್ವಲ್ಪ ಮಟ್ಟಿಗೆ ಬಲ್ಲವರು. ಆದರೆ ಅರ್ಥಧಾರಿಯಾಗಿದ್ದರು. ಚಿಕ್ಕಪ್ಪಂದಿರಲ್ಲಿ (ಶಂಕರ ಭಟ್ಟರು) ಪ್ರಸಿದ್ಧ ಭಾಗವತರು. (ಮೇಳಕ್ಕೆ ಹೋದವರಲ್ಲ). ಇನ್ನಿಬ್ಬರು ನಾರಾಯಣ ಭಟ್ಟರು ಮತ್ತು ಸುಬ್ಬಣ್ಣ ಭಟ್ಟರು ಚೆಂಡೆ ಮದ್ದಳೆ ವಾದನ ಪಟುಗಳಾಗಿದ್ದರು. ಕೇಶವ ಭಟ್ಟರ ಹಿರಿಯಣ್ಣ ಭಾಗವತಿಕೆ ಅಭ್ಯಾಸ ಮಾಡಿದವರು. ಹೀಗಾಗಿ ಕೇಶವ ಭಟ್ಟರ ಕುಟುಂಬ ಯಕ್ಷಗಾನ ಕಲೆಯದು.

ಬಾಲ್ಯದಲ್ಲಿಯೇ ಅಲ್ಲಲ್ಲಿ ಜರುಗುತ್ತಿದ್ದ ತಾಳಮದ್ದಳೆ ಬಯಲಾಟಗಳಿಗೆ ತಪ್ಪದೆ ಉತ್ಸಾಹದಿಂದ ಇತರ ಹಿರಿಯರೊಂದಿಗೆ ಹೋಗಿ ಅಲ್ಲಿ ರಾತ್ರಿ 9 ಗಂಟೆಯಿಂದ ಬೆಳಿಗ್ಗೆ6 ಗಂಟೆಯವರೆಗೆ ಜರುಗುತ್ತಿದ್ದ ಯಕ್ಷಗಾನದ ಪ್ರೇಕ್ಷಕರೂ, ಶ್ರೋತೃವರ್ಗದವರೂ ಆಗುತ್ತಿದ್ದರು. ಈ ಯಕ್ಷಗಾನಾಭಿರುಚಿಯೇ ಇವರಿಗೆ ಭಾರತ-ರಾಮಾಯಣ-ಪುರಾಣ ಕಥೆಗಳಿಗೆ ಹಾಗೂ ಆ ಕಥೆಗಳ ನೀತಿ ಪರಿಶೀಲನೆಗೆ ಕಾರಣವಾಗಿ ಸಾಹಿತ್ಯ ವಿದ್ಯಾಭಿವೃದ್ಧಿಗೆ ಕಾರಣವಾಯಿತು.

ಪ್ರಾಥಮಿಕ ಶಾಲಾ ಅಧ್ಯಾಪಕರಾಗುವುದಕ್ಕೂ ಮೊದಲೇ ಪ್ರಸಿದ್ಧ ಚಂಡೆ ಮದ್ದಳೆಗಾರರಾಗಿದ್ದ ಕುದ್ರೆಕೋಡ್ಲು ರಾಮಭಟ್ಟರ ಶಿಷ್ಯರಾಗಿ ಅವರಿಂದ ರಾಗ-ತಾಳ ಬದ್ಧರಾಗಿ ಯಕ್ಷಗಾನ ಪದ ಹೇಳಲು ಅಭ್ಯಾಸ ಮಾಡಿದರು. ತಾಳಮದ್ದಳೆ ಕಾರ್ಯಕರ್ಮದ ಪ್ರಾರಂಭದಲ್ಲಿ ಹಾಡತಕ್ಕ ನಾಂದೀಪದ್ಯಗಳು, (ಗಜಮುಖದವಗೆ ಗಣಪಗೇ ಇತ್ಯಾದಿ) ಮಾತ್ರವಲ್ಲದೆ, ಅಷ್ಟತಾಳ, ಆದಿತಾಳ, ಚೌತಾಳದ ಪದಗಳು ಅಭ್ಯಾಸವಾದವು. ಶ್ರೀ ಕೃಷ್ಣಸಂಧಾನ ಪ್ರಸಂಗ ಪದಗಳನ್ನು ಆಮೂಲಾಗ್ರ ಕಂಠಪಾಠ ಮಾಡಿದುದಲ್ಲದೆ, ಅದರಲ್ಲಿರುವ ಎಲ್ಲಾ ಪದಗಳನ್ನು ಸನ್ನಿವೇಶಕ್ಕನುಗುಣವಾದ ರಾಗಗಳ ಬಳಕೆಯಿಂದ ತಾಳ ಹಾಕಿ ಹಾಡಲು ಕಲಿತಿರುತ್ತಾರೆ.

ಭಾಗವತರಾಗಿ ಕಂಡುಕೊಂಡುದು ಕಡಿಮೆ. ಮದ್ದಳೆಗಾರರಾಗಿಯೇ ಕಲಾ ಪ್ರದರ್ಶನವನ್ನು ವಿಶೇಷವಾಗಿ ಮಾಡಿದ್ದಾರೆ. ಅತಿ ಶ್ರೇಷ್ಠ ಭಾಗವತರಾಗಿದ್ದ ಬಲಿಪ ನಾರಾಯಣ ಭಾಗವತರ ಹಾಡುಗಾರಿಕೆಗೂ ಸೂಕ್ತವಾಗಿ ಮದ್ದಳೆ ಬಾರಿಸಿರುತ್ತಾರೆ. ಇನ್ನಿತರರಾದ ತಾಳ್ತಜೆ ಶಂಕರಭಟ್ಟರು (ಇವರ ಚಿಕ್ಕಪ್ಪ), ಮಾಂಬಾಡಿ ನಾರಾಯಣ ಭಾಗವತರು (ಗುರು), ಕೆದುಮೂಲೆ ಮಹಾಬಲ ಮಾಸ್ತರರು (ಇವರ ಅಕ್ಕನ ಗಂಡ), ಪದ್ಯಾಣ ಪುಟ್ಟುನಾರಾಯಣ ಭಾಗವತರು, ಅಗರಿ ಭಾಗವತರು, ಮೈಂದಪ್ಪರೈಗಳು, ಮುಚ್ಚಿರಪದವು ಶಂಕರ ಮಾಸ್ತರರು, ತಲೆಂಗಳ ಚಕ್ಕುಲಿ ಭಾಗವತರು, ಹೊಸತೋಟ ಮಂಜುನಾಥ ಭಾಗವತರು ಮುಂತಾದ ಪ್ರಸಿದ್ಧ ಭಾಗವತರೆಲ್ಲ ಇವರ ಮದ್ದಳೆಗಾರಿಕೆಯ ಒಡನಾಟದಿಂದ ಸಂತೋಷಪಟ್ಟವರಾಗಿದ್ದರು. ದಿ. ಮಲ್ಪೆ ಶಂಕರನಾರಾಯಣ ಸಾಮಗರ ಹರಿಕಥೆ, ತಾಳಮದ್ದಳೆಗಳಿಗೂ ಮದ್ದಳೆ ಸಾಥಿಯನ್ನು ನೀಡಿದ್ದಾರೆ. ಅಷ್ಟೇ ಅಲ್ಲ, ಈ ಯಕ್ಷಗಾನದ ತಾಳವಾದನವನ್ನು ಅನೇಕರಿಗೆ ಕಲಿಸಿಕೊಟ್ಟಿರುವುದೂ ಉಂಟು. ಮುಖ್ಯವಾದುದೆಂದರೆ, ಇವರು ಬಾಯಾರು ಪೆರೋಡಿ ಶಾಲೆಯಲ್ಲಿ ಅಧ್ಯಾಪಕರಾಗಿದ್ದಾಗ, ನೆರೆಯ ಗ್ರಾಮವಾದ ಚಿಪ್ಪಾರಿಗೆ ಸಂಜೆ ಹೋಗಿ ಅಲ್ಲಿ ಅನೇಕರಿಗೆ ಕಲಿಸಿದ್ದಾರೆ. ಅವರಲ್ಲಿ ಮುಖ್ಯರೆಂದರೆ ಪ್ರಕೃತ ಯಕ್ಷಗಾನ

ಚೆಂಡೆ ಮದ್ದಳೆವಾದನಗಳಲ್ಲಿ ಅದ್ವಿತೀಯರೆನಿಸಿ ಹಲವು ದಶಕಗಳಿಂದಲೆ ಧರ್ಮಸ್ಥಳ ಮೇಳದ ಹಿಮ್ಮೇಳದವರಾಗಿ ಮೆರೆಯುತ್ತಿರುವ ಚಿಪ್ಪಾರು ಕೃಷ್ಣಯ್ಯ ಬಲ್ಲಾಳರು. ಅವರು ಪ್ರಾರಂಭದ ಅಭ್ಯಾಸವನ್ನು ಕೇಶವ ಭಟ್ಟರಿಂದ ಮಾಡಿದವರಾಗಿರುತ್ತಾರೆ. ಒಂದು ನವರಾತ್ರಿ ವೇಳೆ ಧರ್ಮಸ್ಥಳದಲ್ಲಿ ಇವರ ಭಾಗವತಿಕೆಯಲ್ಲಿ ಶ್ರೀ ಮಂಜುನಾಥ ದೇವಸ್ಥಾನದಲ್ಲಿ ಯಕ್ಷಗಾನ ಪ್ರದಕ್ಷಿಣೆ ಸೇವೆ ಜರುಗಿದ್ದು ಧರ್ಮಾಧಿಕಾರಿ ಮಂಜಯ್ಯ ಹೆಗ್ಗಡೆಯರ ಪ್ರಶಂಸೆಗೆ ಭಾಗಿಯಾಗಿದ್ದರು.

ಮುಂದೆ ಇವರು ಪೆರ್ಲ ಸತ್ಯನಾರಾಯಣ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದ ಕಾಲದಲ್ಲಿ (1945-48) ಆ ಕಡೆಗಳಲ್ಲಿ ಅದೆಷ್ಟೋ ಯಕ್ಷಗಾನ ತಾಳಮದ್ದಳೆಗಳಲ್ಲಿ ಭಾಗವಹಿಸಿದ್ದಾರೆ. ಸಮೀಪದಲ್ಲಿಯೇ ಒಂದು ಮೈದಾನದಲ್ಲಿ ಮೈಂದಪ್ಪ ರೈಗಳ ಭಾಗವತಿಕೆಯ ಬಯಲಾಟ ನೋಡಲೆಂದು ಇವರು ಹೋದಾಗ, ಅಲ್ಲಿ ಆ ಭಾಗವತರಿಗೆ ಸರಿಯಾದ ಮದ್ದಳೆಗಾರರಿಲ್ಲವಾಗಿತ್ತು. ಪ್ರೇಕ್ಷಕರಾಗಿದ್ದ ಇವರನ್ನೇ ಒತ್ತಾಯಿಸಿ ಮದ್ದಳೆ ಬಾರಿಸಲು ಏರ್ಪಡಿಸಿದ್ದರು. ಆ ದಿನ ಇವರದೇ ಮದ್ದಳೆಗಾರಿಕೆಯಾಗಿತ್ತು. ಪೆರ್ಲದಲ್ಲಿರುವಾಗಲೇ ಪಡ್ರೆ ಪುರುಷೋತ್ತಮಭಟ್ಟರೆಂಬ ಗಾನ ವಿದ್ವಾಂಸರಿಂದ ಇವರು ಗಾನಾಭ್ಯಾಸವನ್ನು ಮಾಡಿಕೊಂಡರು.

ಮುಂದೆ ಕೇಶವಭಟ್ಟರು ಮಡಿಕೇರಿಯ ಸರಕಾರಿ ಹೈಯರ್ ಸೆಕೆಂಡರಿ ಶಾಲಾಧ್ಯಾಪಕರಾಗಿದ್ದರು. ಕೊಡಗಿನಲ್ಲಿಯೂ ಯಕ್ಷಗಾನ ಕಲಾ ಪ್ರದರ್ಶಕರಲ್ಲಿ ಒಬ್ಬರಾಗಿದ್ದರು. ಮಡಿಕೇರಿಯ ಪುರಭವನದಲ್ಲಿ ಇವರ ಭಾಗವತಿಕೆಯಿಂದ ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮಗಳಾಗಿರುವುದನ್ನು ಅಲ್ಲಿಯ ಹಿರಿಯರು ಈಗಲೂ ನೆನೆಸಿಕೊಳ್ಳುತ್ತಾರೆ. ಮಡಿಕೇರಿಯಲ್ಲಿರುವಾಗಲೇ ಗಮಕಿ ಎಂ.ಎಸ್. ಅನಂತಪದ್ಮನಾಭರಿಂದ ಗಮಕ ವಾಚನವನ್ನು ಅಭ್ಯಾಸ ಮಾಡಿಕೊಳ್ಳಲು ಇವರಿಗೆ ಯಕ್ಷಗಾನ ರಾಗ ಪರಿಣತಿ ವಿಶೇಷ ಉಪಯುಕ್ತವಾಯಿತು.

1963ರಲ್ಲಿ ಬೆಂಗಳೂರಿನಲ್ಲಿ ಕಾಲೇಜು ಅಧ್ಯಾಪಕರಾದ ಮೇಲೆ ಬೆಂಗಳೂರಿನ ಎಷ್ಟೋ ತಾಳಮದ್ದಳೆ ಕೂಟಗಳಲ್ಲಿ ಮದ್ದಳೆಗಾರರಾಗಿ ಸೇವೆ ಸಲ್ಲಿಸಿರುತ್ತಾರೆ. ರಾಜಾಜಿನಗರದ ಶ್ರೀ ಪದ್ಮಾನಂದ ಗುರೂಜಿಯವರ ಆಶ್ರಮದಲ್ಲಿ ವರ್ಷವಿಡೀ ಪ್ರತಿ ಭಾನುವಾರ ಜರಗುತ್ತಿದ್ದ ತಾಳಮದ್ದಳೆ ಕೂಟಗಳಲ್ಲಿ ಕೇಶವ ಭಟ್ಟರೇ ಪ್ರಮುಖವಾಗಿ ಮದ್ದಳೆವಾದಕರಾಗಿದ್ದರು. ಅದಲ್ಲದೆ, ಶ್ರೀರಾಮೋತ್ಸವ, ಗಣೇಶೋತ್ಸವಾದಿಗಳಲ್ಲಿ ಯಕ್ಷಗಾನ ಕೂಟಗಳಲ್ಲಿ ಇವರಿರುತ್ತಿದ್ದರು. ತುಳು ಕೂಟವೆಂಬ

ಸಂಸ್ಥೆ ಪ್ರಾರಂಭವಾದ ನಂತರ ಆ ಕೂಟದ ಆಶ್ರಯದಲ್ಲಿ ಎಷ್ಟೋ ತಾಳಮದ್ದಳೆಗಳಾಗಿವೆ. ಸಂದರ್ಭಾನುಸಾರ, ಅರ್ಥಧಾರಿಗಳಾಗಿಯೂ ಮಿಂಚಿದ್ದಾರೆ. ಗೋಖಲೆ ಸಾರ್ವಜನಿಕ ಸಂಸ್ಥೆ, ದೇವಗಿರಿ ವೆಂಕಟೇಶ್ವರ ದೇವಸ್ಥಾನ ಮುಂತಾದ ಕಡೆಯೂ ಇವರ ಸೇರುವಿಕೆಯ ಯಕ್ಷಗಾನ ಕಾರ್ಯಕ್ರಮಗಳಾಗಿವೆ. ಬೆಂಗಳೂರು ಬಾನುಲಿಯಲ್ಲೂ ಕೆಲವು ಬಾರಿ ಯಕ್ಷಗಾನ ಪ್ರಸಾರವಾಗಿದೆ. ಶ್ರೀಯುತರು ಡಾ. ಕಬ್ಬಿನಾಲೆ ವಸಂತ ಭಾರಧ್ವಾಜರ ಯಕ್ಷಗಾನ ಅಷ್ಟಾವಧಾನದಲ್ಲಿಯೂ ಪೃಚ್ಛಕರಾಗಿ ಭಾಗವಹಿಸಿರುತ್ತಾರೆ.

ಯಕ್ಷಗಾನ ಕಲಾ ಪ್ರದರ್ಶಕ ಕಾರ್ಯಕ್ರಮಗಳಲ್ಲಿ ಮಾತ್ರವಲ್ಲದೆ, ಅದೇ ಕಲೆಗೆ ಸಂಬಂಧಪಟ್ಟಂತೆ ಇವರ ಕೊಡುಗೆ ಅನೇಕ ವಿಧವಾಗಿದೆ. ಸ್ವತಃ ಕವಿಯೂ ಆಗಿರುವ ಇವರು ಅಫಜುಲಖಾನ ವಧೆ (ವ್ಯಾಪ್ರನಖ), ಯುಗಾದಿ ವೈಭವ ಎಂಬ ಯಕ್ಷಗಾನ ಪ್ರಸಂಗ ರಚನೆ ಮಾಡಿರುತ್ತಾರೆ. ಯುಗಾದಿ ವೈಭವ ಯಕ್ಷಗಾನ ಆ ವರ್ಷದ (1998) ಯುಗಾದಿಯಂದು ಬೆಂಗಳೂರು ಆಕಾಶವಾಣಿಯಿಂದ ಹಾಗೂ ಬಯಲಾಟವಾಗಿ ದೂರದರ್ಶನದಲ್ಲೂ (2000) ಪ್ರಸಾರಿತವಾಗಿರುತ್ತದೆ. ಸಂಪಾದಕರಾಗಿ ಬಾಯಾರು ಸಂಕಯ್ಯ ಭಾಗವತರ ತುಳು ಪಂಚವಟಿ ವಾಲಿ ಸಂಹಾರ ಎಂಬ ಯಕ್ಷಗಾನ ಕೃತಿಯ ಮರುಮುದ್ರಣಕ್ಕೆ ಕಾರಣರಾಗಿರುತ್ತಾರೆ. ಹತ್ತಾರು ಕಡೆಗಳಲ್ಲಿ ಯಕ್ಷಗಾನವನ್ನು ಕುರಿತು ಪ್ರಾಯೋಗಿಕವಾಗಿ ಉಪನ್ಯಾಸ ಮಾಡಿದ್ದಾರೆ. ಬೆಂಗಳೂರು ಗಾಯನ ಸಮಾಜದಲ್ಲಿ ಯಕ್ಷಗಾನದಲ್ಲಿ ತಾಳ ಮತ್ತು ಲಯ ಎಂಬ ಇವರ ಉಪನ್ಯಾಸವು ಸಂಗೀತ ವಿದ್ವಾಂಸರ ಮೆಚ್ಚುಗೆಗೆ ಭಾಗಿಯಾಗಿದೆ. ಇನ್ನೊಂದು ಸಂಗೀತೋತ್ಸವದಲ್ಲಿ ಯಕ್ಷಗಾನದಲ್ಲಿ ಸಂಗೀತ ಎಂಬ ವಿಷಯದ ಮೇಲೆ ಭಾಷಣ ಮಾಡಿದ್ದಾರೆ. ಮೈಸೂರಿನ ವಿಖ್ಯಾತ ಸಂಗೀತ ವಿಮರ್ಶಕ ಡಾ. ರಾ. ಸತ್ಯನಾರಾಯಣರು ಇವರನ್ನು ತುಂಬಾ ಮೆಚ್ಚಿಕೊಂಡವರಲ್ಲಿ ಒಬ್ಬರು. ಬನಶಂಕರಿಯ 2ನೇ ಹಂತದ ನಿವಾಸಿಯಾಗಿರುವ ಇವರು ಶ್ರೀ ವೆಂಕಟೇಶ ಯಕ್ಷಗಾನ ಕಲಾವೃಂದ ಎಂಬ ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾಗಿಯೂ ಕಾರ್ಯತತ್ಪರತೆ ತೋರಿಸಿದ್ದಾರೆ. ತಮ್ಮ ಮನೆಯನ್ನೇ ಯಕ್ಷಗಾನ ಗಮಕ ಕಲಾ ಕೇಂದ್ರದ ನೆಲೆಯಾಗಿ ಮಾಡಿದ್ದು, ತಮ್ಮ ಸಾಹಿತ್ಯ ರಚನೆಗಳೊಂದಿಗೆ, ಈ ಎರಡು ಕಲೆಗಳನ್ನೂ ಜೊತೆಗೂಡಿಸಿ ಮುಂದುವರಿಯುತ್ತಿದ್ದುದು ಲೋಕ ಮೆಚ್ಚಬೇಕಾದ ಸಂಗತಿ. ಮದ್ದಳೆ ಬಾರಿಸುವುದರಲ್ಲಿ ವಿಷಮ ಪೆಟ್ಟುಗಳ ಪ್ರಯೋಗದಲ್ಲಿ ಇವರು ನಿಪುಣರೆಂದು ವಿಖ್ಯಾತ ಚೆಂಡೆಮದ್ದಳೆ ವಾದಕರಾಗಿರುವ ಶ್ರೀ ನೆಡ್ಲೆ ನರಸಿಂಹ ಭಟ್ಟರ ಅಂಬೋಣವಾಗಿತ್ತು. ಡಾ. ಪ್ರಭಾಕರ ಜೋಶಿ, ಅಮೃತ ಸೋಮೇಶ್ವರ, ಕ.ಪು. ಸೀತಾರಾಮ ಕೆದಿಲಾಯ, ದಿ. ಕುಕ್ಕಿಲ

ಕೃಷ್ಣ ಭಟ್ಟ, ಶೀಮಂತೂರು ನಾರಾಯಣ ಶೆಟ್ಟಿ, ಡಾ. ಆರ್. ಗಣೇಶ್ ಮುಂತಾದವರೊಂದಿಗೆ ಇವರು ಪಾಂಡಿತ್ಯಪೂರ್ಣವಾದ ಸಂಪರ್ಕ ವಿರಿಸಿಕೊಂಡಿದ್ದರು ಯಕ್ಷಗಾನೀಯವಾದ ಹತ್ತು ಹಲವು ತಾಡ ಓಲೆಗಳು, ಕೃತಿಗಳನ್ನು ಸಂಗ್ರಹಿಸಿದ್ದರು. ಆದರಲ್ಲಿ ಯಕ್ಷಗಾನ ಸಭಾ ಲಕ್ಷಣವನ್ನು ಮೈಕ್ರೋ ಫಿಲಂ ಮಾಡಿ ಕಾಪಿಟ್ಟಿದ್ದರು

ಯಕ್ಷಗಾನ ಕಲೆಗೆ ಸಂಬಂಧಿಸಿದಂತೆ ವಿವರಣಾತ್ಮಕವೂ, ಸಂಶೋಧನಾತ್ಮಕವೂ, ಆಗಿರುವ ಲೇಖನಗಳು ಸುಮಾರು ಐವತ್ತಕ್ಕೂ ಮಿಕ್ಕಿದ ಸಂಖ್ಯೆಯಲ್ಲಿ ಇವರು ಬರೆದಿದ್ದಾರೆ. ಡಾ. ಶಿವರಾಮ ಕಾರಂತರ 'ಯಕ್ಷಗಾನ ಬಯಲಾಟ' ಎಂಬ ಉದ್ಗ್ರಂಥದ ನಿಷ್ಪಕ್ಷಪಾತ ವಿಮರ್ಶೆಯನ್ನು ಇವರು ಬರೆದಿರುವುದು ಪ್ರಬುದ್ಧ ಕರ್ನಾಟಕ ಪತ್ರಿಕೆಯ ಸುವರ್ಣ ಸಂಪುಟದಲ್ಲಿ ಪ್ರಕಾಶಿತವಾಗಿದೆ. ಇತ್ತೀಚೆಗೆ ತಮ್ಮ ಯಕ್ಷಗಾನ ವಿಷಯದ ಲೇಖನಗಳಿಂದ ಆಯ್ದ ಲೇಖನ ಸಮುಚ್ಚಯ ಕೃತಿಯಾಗಿ 'ಯಕ್ಷಗಾನ ಕಲಾದರ್ಶನ' ಎಂಬುದು ಉಲ್ಲೇಖನೀಯವಾದುದು.

ಇವರ ಪ್ರಕಾಶನದ 'ತುಂಡು ಪದ ಸಂಚಯ' ಎಂಬುದು ಪ್ರಮುಖವಾಗಿ ಯಕ್ಷಗಾನದಲ್ಲಿ ಹಾಡತಕ್ಕ ಮತ್ತು ಈಗೀಗ ಲುಪ್ತವಾಗುತ್ತಿರುವ ಸ್ತುತಿ ಪದ್ಯಗಳ ಸಂಚಯವೇ ಆಗಿರುತ್ತದೆ. 'ಭಕ್ತಿ ನೀತಿ ಗಮಕ ಕೃತಿಗಳು' ಪ್ರಮುಖವಾಗಿ ಗಮಕದಲ್ಲಿ ಹಾಡಲು ತಕ್ಕುದಾದ ಪದ್ಯಗಳಿಂದ ಕೂಡಿದೆ. ಇವರು ಕರ್ಣಾಟಕ ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಪದವಿಗಾಗಿ, ಪ್ರೊ ಸ.ಸ. ಮಾಳವಾಡರ ಮಾರ್ಗದರ್ಶನದಲ್ಲಿ ದ.ಕ. ಜಿಲ್ಲೆಯ ಜನಪದ ಗೀತೆಗಳು ಎಂಬ ಸಂಶೋಧನಾತ್ಮಕ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಅದರ ದೊಡ್ಡದೊಂದು ಅಧ್ಯಾಯ 'ಗಂಡುಸರ ಹಾಡುಗಳು' ಎಂಬುದು ಯಕ್ಷಗಾನ ಕಲೆ ಸಾಹಿತ್ಯ, ವಿಚಾರಾತ್ಮಕವಾಗಿದೆ. ಇದರಲ್ಲಿ ಬಡಗು, ತೆಂಕು ಎಂಬ ಎರಡೂ ತಿಟ್ಟುಗಳ ಪ್ರಭೇದದ ವಿವರಣೆ ವಿಶೇಷತೆಗಳು ಸಂಲಗ್ನವಾಗಿದೆ.

ಇತ್ತೀಚೆಗೆ ಶ್ರೀ ಶೀಮಂತೂರು ನಾರಾಯಣ ಶೆಟ್ಟಿಯವರ ಪ್ರತಿಪಾದನೆಯ ಯಕ್ಷಗಾನ ತಾಳ ಛಂದಸ್ಸುಗಳ ವಿಚಾರವಾಗಿ ಹಲವು ಸ್ವಾರಸ್ಯಕರ ಪ್ರಶ್ನೋತ್ತರ ಚರ್ಚೆಗಳು ಇವರೊಳಗೆ ನಡೆದಿವೆ. ಯಕ್ಷಗಾನ ಕಲಾ ವಿಚಕ್ಷಣರಾಗಿದ್ದ ದಿ. ಕುಕ್ಕಿಲ ಕೃಷ್ಣ ಭಟ್ಟರ ಸಮೀಪ ಸಹವಾಸ ಇವರಿಗಿದ್ದಿತು. ಅವರ ವಿಷಯ ವಿಚಾರಗಳಲ್ಲಿ ಇವರು ಸಹಮತ ಉಳ್ಳವರು. ಹಿಂದೆ ನೀರ್ಕಜೆಯಲ್ಲಿ ಜರಗಿದ ಒಂದು ತಾಳಮದ್ದಳೆಯಲ್ಲಿ ಅವರ ಭಾಗವತಿಕೆಗೆ ಶ್ರೀಯುತ ಭಟ್ಟರು ಮದ್ದಳೆ ಬಾರಿಸಿದ್ದರು. ವಿಖ್ಯಾತ ವಿದ್ವಾಂಸ ದಿ. ಮುಳಿಯ ತಿಮ್ಮಪ್ಪಯ್ಯನವರ ಒಡನಾಡಿಯೂ ಆಗಿದ್ದರು.

ಯಕ್ಷಗಾನ ಎಂದೊಡನೆ ಶಬ್ದೋಚ್ಚಾರಗೊಳ್ಳುವಂತೆ ಕೇಳುವವರಿಗೆ ಅದೊಂದು ಬಗೆಯ ಗಾನ ಅರ್ಥಾತ್, ಹಾಡುವಿಕೆ ಎಂದು ಅರ್ಥವಾಗುವುದು. ಹಾಡುವಿಕೆಯೂ ಯಕ್ಷಗಾನದ ಅಂತರ್ಗತ ವಿಷಯಗಳಲ್ಲಿ ಒಂದಾಗಿರುವುದು ನಿಜ. ಆದರೆ, ಹಾಡುವಿಕೆಯೊಂದೇ ಅಲ್ಲ, ಆ ಹಾಡುವಿಕೆಗೆ ಬೇಕಾಗಿರುವ ಗೇಯ ಸಾಹಿತ್ಯವಿರಲೇಬೇಕು. ಅದನ್ನು ಯಕ್ಷಗಾನ ಪ್ರಸಂಗ ಎನ್ನುತ್ತಾರೆ. ಹಾಗೆ ಹಾಡುವುದು ಕೇವಲ ಗಮಕದಂತಿರದೆ, ಆ ಗಾನವು ತಾಳಬದ್ಧವಾಗಿದ್ದು, ತಾಳಗತಿಯೂ ಇರುವುದರಿಂದ ವಾದನ (ಮದ್ದಳೆ, ವೀರ ರೌದ್ರ ಪ್ರಸಂಗ ಸನ್ನಿವೇಶವಾಗಿದ್ದರೆ ಚಂಡೆ ಕೂಡ) ಇದ್ದೇ ಇರುತ್ತದೆ. ಹಾಗೆ ಹಾಡಿದ ನಂತರ ಆ ಕಥಾ ಪಾತ್ರ ಸಂವಾದವಿರುತ್ತದೆ. ಇದನ್ನು ಅರ್ಥಗಾರಿಕೆ ಎನ್ನುತ್ತಾರೆ. ತಾಳಮದ್ದಳೆಯಲ್ಲಾದರೆ ಕುಳಿತುಕೊಂಡೇ ಅರ್ಥಧಾರಿಗಳು ಆಯಾ ಪಾತ್ರೋಚಿತ ಸಂವಾದ ನಡೆಸುತ್ತಾರೆ. ಬಯಲಾಟವೆಂದರೆ ಅದರಲ್ಲಿ ಪಾತ್ರೋಚಿತ ವೇಷಭೂಷಣಗಳಿರುತ್ತವೆ. ಗಾನ ವಾದನಗಳ ವೇಳೆ ಈ ವೇಷಧಾರಿಗಳ ನೃತ್ಯ (ಕುಣಿತ) ಅಭಿನಯವಿರುತ್ತದೆ. ಹೀಗೆ ಯಕ್ಷಗಾನದ ಒಂದು ಪರಿಪೂರ್ಣ ಸ್ವರೂಪವು ಬಯಲಾಟವಾಗಿದ್ದು, ಅದನ್ನು ಲಕ್ಷಿಸಿದಾಗ ಯಕ್ಷಗಾನದಲ್ಲಿ ಹಲವು ಕಲೆಗಳ ಮೇಳ ಕಾಣಿಸುತ್ತದೆ. ಗಾನ, ವಾದನ, ನೃತ್ಯ, ಪಾತ್ರಸಂವಾದ, ಪಾತ್ರಗಳ ವೇಷ (ಬಣ್ಣಗಾರಿಕೆ), ಪ್ರಸಂಗ (ಗೇಯ ಸಾಹಿತ್ಯ ಅಂದರೆ, ಯಕ್ಷಗಾನ ಪದ) ಹೀಗೆ ಆರು ಲಲಿತ ಕಲೆಗಳ ಸಮ್ಮಿಶ್ರ ಕಲೆಯಾಗಿರುವುದರಿಂದ ಯಕ್ಷಗಾನಕ್ಕೆ ಎಣೆಯಾದ ಲಲಿತಕಲೆ ಇನ್ನೊಂದಿಲ್ಲ. ಯಕ್ಷಗಾನ ಸಾಹಿತ್ಯವು ಪದ್ಯಾತ್ಮಕವಾಗಿರುವುದರಿಂದ ಛಂದಸ್ಸು ಅದರಲ್ಲಿದೆ. ಪದಗಳನ್ನು ಹಾಡುವುದು ಅರ್ಥಯತಿಗೆ ಅನುಗುಣವಾಗಿರಬೇಕಾದುದರಿಂದ ಗಮಕ ಕಲೆಯನ್ನೂ ಯಕ್ಷಗಾನವು ಒಳಗೊಳ್ಳುತ್ತದೆ. ಅದುದರಿಂದ ಎಂಟು ಅಂಗಗಳಿಂದ, ಅಷ್ಟ ಪ್ರಧಾನರಿಂದ ಕೂಡಿ ಮಹಾರಾಜನಿರುವಂತೆ ಈ ಯಕ್ಷಗಾನ ಎಂಬುದೊಂದು ರಾಜ ಕಲೆಯಾಗಿದೆ ಎನ್ನಲು ಅಡ್ಡಿಯಿಲ್ಲ. ಇಂತಹ ರಾಜ ಕಲೆಯಾದ ಯಕ್ಷಗಾನದ ವೇಷಗಾರಿಕೆ ನೃತ್ಯಗಾರಿಕೆಗಳನ್ನು ಹೊರತುಪಡಿಸಿ, ಇತರ ಅಂಗಗಳ ಸೂಕ್ಷ್ಮಜ್ಞ ವಿಶೇಷಜ್ಞರಾದ ಶ್ರೀಯುತ ಭಟ್ಟರಿಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹತ್ತು ಹಲವು ಪ್ರಶಸ್ತಿ ಸನ್ಮಾನಗಳು ದೊರಕಿದ್ದರೂ, ಯಕ್ಷಗಾನ ಕ್ಷೇತ್ರವು ಅವರನ್ನು ಅಷ್ಟೊಂದು ಗುರುತಿಸದಿರುವುದು ಒಂದು ಸೋಜಿಗವೇ ಸರಿ. ಶ್ರೀಯುತರು ತಾ. 20.8.2005ರಂದು ದೈವಾಧೀನರಾದರು. ಸುಕೃತಿಯೆಂಬ ಸಂಸ್ಮರಣ ಗ್ರಂಥವು ಉಡುಪಿಯ ಗೋವಿಂದಪೈ ಕೇಂದ್ರದಿಂದ ಪ್ರಕಟಣೆಗೊಂಡಿದೆ.

ಉ.ಕ. ಜಿಲ್ಲೆಯ ಯಕ್ಷಗಾನ ಮುತ್ತೈದೆ ದಿ. ಕೆರೆಮನೆ ಗಜಾನನ ಹೆಗಡೆ

"Stars that shoot across the sky shine bright as they fall from high" ಕವಿ ಬೈರನ್ಸ್ ಹೇಳಿದಂತೆ, ಯಕ್ಷಗಾನ ರಂಗದಲ್ಲಿ ಸ್ತ್ರೀ ವೇಷಧಾರಿಯಾಗಿ ಮಿಂಚಿ ಮೆರೆದು, ಲಕ್ಷಾಂತರ ಅಭಿಮಾಗಿಳನ್ನು ಗಳಿಸಿದ ಕೆರೆಮನೆ ಗಜಾನನ ಹೆಗಡೆಯುವರು ತಮ್ಮ 33ನೇ ವಯಸ್ಸಿನಲ್ಲಿಯೇ ಆಚಾರ್ಯ ಶಂಕರರಂತೆ ಮಿಂಚಿ ಮರೆಯಾದರು. ಹದಿನೈದು ವರ್ಷಗಳ ಕಾಲ ಭಾರತದ ಉದ್ದಗಲಕ್ಕೂ ಸಂಚರಿಸಿ, ತನ್ನ ಕಲಾ ಪ್ರತಿಭೆಯನ್ನು ಪ್ರದರ್ಶಿಸಿ, ಯಕ್ಷಗಾನ ರಂಗದ ಸ್ತ್ರೀ ಪಾತ್ರಕ್ಕೊಂದು ವಿಶೇಷ, ವಿಶಿಷ್ಟ ಸ್ಥಾನ, ಗೌರವಗಳನ್ನು ತಂದಿತ್ತರು. ಯಕ್ಷಗಾನ ರಂಗದಲ್ಲಿ ತಮ್ಮ ರಂಗ ಪ್ರವೇಶದಿಂದ ಬರೀ ಹೊಸತನವನ್ನು ತಂದುದಲ್ಲದೆ, ಅದು ಉತ್ತರಕನ್ನಡ ಪರಂಪರೆಯ ಮುಂದರಿಕೆಯೂ ಆಗಿತ್ತು. ಗಜಾನನರ ಪ್ರವೇಶ ಪೂರ್ವದಲ್ಲಿ ದಕ್ಷಿಣ ಕನ್ನಡದಿಂದ ಸ್ತ್ರೀ ವೇಷಧಾರಿಗಳನ್ನು ಕರೆತಂದು ಉತ್ತರ ಕನ್ನಡ ಕೊರತೆಯನ್ನು ನೀಗಿಸಿಕೊಳ್ಳುತ್ತಿತ್ತು. ಹಾಗೆ ಬಂದವರಲ್ಲಿ ಶ್ರೀಗಳಾದ ಕೊಕ್ಕರಣೆ ನರಸಿಂಹ ಕಾಮತ್, ಗೋವಿಂದ ಶೇರಿಗಾರ, ಹೆರಂಜಾಲು ವೆಂಕಟರಮಣ ಮುಂತಾದವರು ಪ್ರಮುಖರು. ಅದೇ 1940ರ ದಶಕದಲ್ಲಿ ಶ್ರೀ ಮೂರೂರು ಕೃಷ್ಣಹೆಗಡೆ, 1965ರಲ್ಲಿ ಹುಲಿಮನೆ ಸೀತಾರಾಮ ಶಾಸ್ತ್ರಿಗಳು ಉ.ಕ.ದಲ್ಲಿ ಪ್ರಮುಖ ಸ್ತ್ರೀ ವೇಷಧಾರಿಗಳಾಗಿದ್ದರು. 1970ರ ಪ್ರಾರಂಭದಲ್ಲಿ ಒಂದು ರೀತಿಯ ಶೂನ್ಯ ಆವರಿಸಿದ್ದ ವೇಳೆಯಲ್ಲಿಯೇ ಶ್ರೀ ಕೆರೆಮನೆ ಗಜಾನನರು ಪೂರ್ಣ ಸ್ತ್ರೀ ವೇಷಧಾರಿಯಾಗಿಯೇ ತನ್ನ ಕಾಯಕವನ್ನು ಮುಂದುವರಿಸಿ, ಆ ಶೂನ್ಯವನ್ನು ತುಂಬಿದರು. ''ಸದಾ ಅರಳಿದ ಪ್ರಸನ್ನ ಮುಖ, ಕಡಾವಿನಲ್ಲಿ ಕಡೆದಂತಿದ್ದ ಸೊಗಸಾದ ಶರೀರ, ಹಳದಿ ಗುಲಾಬಿ ಮಿಶ್ರಿತ ಮೈ ಬಣ್ಣ, ತಿದ್ದಿದ ಹುಬ್ಬು, ತೀಡಿದ ತುಂಬು ಕ್ರಾಪು, ಅಚ್ಚುಕಟ್ಟಾದ ಒಳ್ಳೆಯ ಉಡುಪು, ಚಿಮ್ಮುವ ಯೌವನ, ಲವಲವಿಕೆಯ ವ್ಯಕ್ತರೂಪ ರಂಗದಲ್ಲಿ ಹೆಣ್ಣನ್ನೂ ನಾಚಿಸುತ್ತಿದ್ದ ದಿ. ಹೆಗಡೆಯವರು, ನಿಜರೂಪದಲ್ಲಿ ಗಂಡು–ಹೆಣ್ಣು ಇಬ್ಬರನ್ನು ನಾಚಿಸುವ ವ್ಯಕ್ತಿತ್ವವುಳ್ಳವರಾಗಿದ್ದರು. (ಡಾ. ಪ್ರಭಾಕರ ಜೋಷಿ). ಹರ್ಷ, ದುಃಖ, ಶೃಂಗಾರ, ಕ್ರೋಧ ಮುಂತಾದ ವಿಭಿನ್ನ ಸಂದರ್ಭಗಳಲ್ಲಿ ಶ್ರೀಯುತರು ಪ್ರಕಟಿಸುತ್ತಿದ್ದ ಭಾವಾಭಿವ್ಯಕ್ತಿ, ಅವರದ್ದೇ ಆದ ಪ್ರತ್ಯೇಕತೆಯಿಂದ ಅನುಕರಣೀಯವಾಗಿ

ಮರೆಯುತ್ತಿತ್ತು. ಕೇವಲ ದೃಷ್ಟಿ ವಿಕ್ಷೇಪದಿಂದಲೇ ಅಂತರ್ಗತವಾದ ಗೂಢ ಭಾವನೆಗಳನ್ನು ಪರಿಣಾಮಕಾರಿಯಾಗಿ ಅವರು ಹೊರಗೆಡಹುತ್ತಿದ್ದರು. ಚಂಚಲ ಸ್ವಭಾವದ ಎಳೆ ವಯಸ್ಸಿನ ಮುಗ್ಧೆ, ಪ್ರಗಲ್ಭೆಯಾದ ಗೃಹಿಣಿ, ದುಃಖ, ದೈನ್ಯ, ಸಂಕಟಗಳಿಗೆ ಈಡಾಗಿ, ಅಸಹಾಯಕ ಸ್ಥಿತಿಯಲ್ಲಿ ಲೋಕವನ್ನೇ ಸುಟ್ಟುರುಹುವ ಸಾಮರ್ಥ್ಯವುಳ್ಳ ಸಾಕ್ಷಾತ್ ದುರ್ಗಾ ದೇವೀ ಅವರಾಗಿದ್ದರು. ಬಣ್ಣಗಾರಿಕೆ ಮತ್ತು ವೇಷ ಭೂಷಣಗಳಲ್ಲಿ ತುಂಬು ಜಾಗರೂಕತೆ ವಹಿಸಿ ಕೆಲಸ ಮಾಡುತ್ತಿದ್ದ ಗಜಾನನ ಹೆಗಡೆಯವರು ಪಾತ್ರಗಳ ''ಪೌರಾಣಿಕ ಕಲ್ಪನೆ'' ಕಾಣುವಂತೆ ಎಚ್ಚರ ವಹಿಸುತ್ತಿದ್ದರು. ಭೀಷ್ಮ ವಿಜಯದ 'ಅಂಬೆ' ಅವರ Master Peice ಆಗಿತ್ತು. ಕರ್ಣ ಭೇದನದ 'ಕುಂತಿ', ಸತ್ಯ ಹರಿಶ್ಚಂದ್ರದ 'ಚಂದ್ರಮತಿ', ಪ್ರಚಂಡ ವಿಶ್ವಾಮಿತ್ರದ 'ಮೇನಕೆ', ಭರತಾಗಮನದ 'ಕೈಕೆಯೀ', ಚಂದ್ರಹಾಸದ 'ವಿಷಯೆ', ಕೀಚಕ ವಧೆಯ 'ಸುಧೇಷ್ಣೆ-ಸೈರಂಧ್ರಿ', ಕೃಷ್ಣಾರ್ಜುನ ಕಾಳಗದ 'ಸುಭದ್ರೆ', ಸುಭದ್ರಾ ಕಲ್ಯಾಣದ 'ಸತ್ಯಭಾಮೆ', ಸುಧನ್ವಾರ್ಜುನದ ಪ್ರಭಾವತಿ, ದಕ್ಷಾಧ್ವರದ 'ದಾಕ್ಷಾಯಣಿ' ಮುಂತಾದ ಪಾತ್ರಗಳು ಅವರಿಗೆ ಹಿರಿಮೆಯನ್ನು, ಗರಿಮೆಯನ್ನು ತಂದಿತ್ತವು. ಇವುಗಳೊಂದಿಗೆ ದ್ರೌಪದಿ, ಮೇನಕೆ, ಮಾಯಾ ಹಿಡಿಂಬೆ, ಭಾಸವತಿ, ಸುಶೀಲೆ, ದಮಯಂತಿ, ಚಿತ್ರಾಂಗದೆ, ಸುಹಾಸಿನಿ, ಶೀಲವತಿ, ಮೋಹಿನಿ, ರಂಭೆ ಮುಂತಾದ ಪಾತ್ರಗಳಲ್ಲೂ ಮೆರೆದು, ತನ್ನದೇ ಆದ ಛಾಪನ್ನು ಒತ್ತಿದರು.

ರಾಷ್ಟ್ರ ಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿ ವಿಜೇತ ಕೆರೆಮನೆ ಶಿವರಾಮ ಹೆಗಡೆಯವರ ದ್ವಿತೀಯ ಪುತ್ರನಾಗಿ ಶ್ರೀಗಜಾನನ ಹೆಗಡೆಯವರು ತಾ. 28-4-1943ರಲ್ಲಿ ಜನಿಸಿದರು. ಪ್ರಥಮ ಪುತ್ರ ಇಂದಿನ ವಿಖ್ಯಾತ ವೇಷಧಾರೀ ಸಂಘಟಕ ಕೆರೆಮನೆ ಶಂಭು ಹೆಗಡೆಯವರು ಶಂಭು ಹೆಗಡೆಯವರ ಮಗನೇ ಸ್ತ್ರೀ ವೇಷಧಾರಿ ಶಿವಾನಂದ ಹೆಗಡೆಯವರು. ಚಿಕ್ಕಪ್ಪ ಖ್ಯಾತಿವೆತ್ತ ಮಹಾಬಲ ಹೆಗಡೆಯವರು. ತಾಯಿ ಶ್ರೀಮತಿ ಮೂಕಾಂಬಿಕಾ ಅಮ್ಮನವರು. ಪತ್ನಿ ಶಾಂತಾ ಹೆಗಡೆ. ಇಬ್ಬರು ಪುತ್ರರು ಹಾಗೂ ಒಬ್ಬಳೇ ಮಗಳು. ಪ್ರಥಮ ಪುತ್ರ ಶಿವರಾಮ ಹೆಗಡೆ ಹವ್ಯಾಸಿ ವೇಷಧಾರಿಯಾದರೆ, ಎರಡನೇ ಮಗ ಶ್ರೀ ನಿರಂಜನ ಹೆಗಡೆ ಎಂಆರ್‌ಪಿಲ್ ಕಂಪೆನಿಯಲ್ಲಿ ಉದ್ಯೋಗಿಯಾಗಿದ್ದಾರೆ. ಮಗಳು ಗೃಹಿಣಿಯಾಗಿ ಹುಬ್ಬಳ್ಳಿಯಲ್ಲಿ ನೆಲಸಿದ್ದಾರೆ.

ಅರೆಅಂಗಡಿಯ ಸಾಲಕೋಡಿನ ಶ್ರೀಕರಿಕಾನ ಪರಮೇಶ್ವರೀ ಹೈಸ್ಕೂಲಿನಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾಭ್ಯಾಸವನ್ನು ಮಾಡಿದ ಶ್ರೀ ಗಜಾನನರು ಡ್ರಾಯಿಂಗ್ ಪರೀಕ್ಷೆಯನ್ನು ಹೈಸ್ಕೂಲಿನಲ್ಲಿ ಪಾಸು ಮಾಡಿದರು. ಅನಂತರ ಮಂಕಿಯ ಹೈಸ್ಕೂಲಿನಲ್ಲಿ

ಕ್ಲಾರ್ಕ್-ಕಂ-ಡ್ರಾಯಿಂಗ್ ಶಿಕ್ಷಕ ವೃತ್ತಿಯನ್ನು ಮೂರು ವರ್ಷಗಳ ಕಾಲ ಮಾಡಿದರು. ಒಟ್ಟಿಗೇ ಕನ್ನಡ ಭಾಷೆಯನ್ನು ಚೆನ್ನಾಗಿ ಕಲಿಸುತ್ತಿದ್ದರು. ಕಡೆಗೂ ಅವರನ್ನು ಯಕ್ಷಗಾನ ರಂಗಭೂಮಿ ಕೈಬೀಸಿ ಕರೆಯಿತು. 1963ರಲ್ಲಿ ಪ್ರಥಮ ಬಾರಿಗೆ ರಂಗ ಪ್ರವೇಶಿಸಿದರು. 1970ರ ತನಕ ಹೆಚ್ಚು ಕಡಿಮೆ ಪುರುಷ ವೇಷಧಾರಿಯಾಗಿಯೇ ಮೆರೆದರು. ಆರಂಭದಲ್ಲಿ ಕೃಷ್ಣ ಲಕ್ಷ್ಮಣ, ಅಭಿಮನ್ಯು, ಚಂದ್ರಹಾಸ, ಏಕಲವ್ಯ ಹಾಗೂ ಭೀಮನ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. 1968ರಲ್ಲಿ ಅವರು ಸಾಲಿಗ್ರಾಮ ಮೇಳಕ್ಕೆ ಸೇರಿಕೊಂಡರು. ಆಗ ಅದರ ಸಂಚಾಲಕ ಪಿ. ಶ್ರೀಧರ ಹಂದೆಯವರು. 1969ರಲ್ಲಿ ಶ್ರೀ ಪಿ. ಸೋಮನಾಥ ಹೆಗ್ಡೆಯವರ ಕೈಗೆ ಬಂತು. 1970ರಿಂದ ಗಜಾನರು ಸ್ತ್ರೀ ವೇಷಧಾರಿಯಾಗಿಯೇ ಕಾಣಿಸಿಕೊಂಡರು.

ಜಲಕೇಳಿ, ಹೂಕೊಯ್ಯುವಿಕೆಯ ನೃತ್ಯ, ವನವಿಹಾರ, ಅಗ್ನಿ ಪ್ರವೇಶಗಳ ನೃತ್ಯ ಭಾಗವಂತೂ ಅವರಿಗೆ ಮೀರುವವರನ್ನು ಕಾಣಿಸುವುದು ಕಷ್ಟವಾಗಿತ್ತು. ಅವರ ನೃತ್ಯಕ್ಕೂ ಒಂದು ಭಾಷೆಯಿತ್ತು. ಲಯ ಶುದ್ಧಿ, ಪಾತ್ರೋಚಿತ ರುಚಿಶುದ್ಧಿ - ಸಿದ್ಧಿ ಇತ್ತು. ಭಾವಾಭಿನಯಕ್ಕೆ ಪೂರಕವಾಗಬಲ್ಲ ನೃತ್ಯಗತಿಯಿತ್ತು. ಯಕ್ಷಗಾನ ಪರಂಪರೆಯ ಉಡಿಗೆ ತೊಡುಗೆಗಳನ್ನು ತೊಟ್ಟು ರಂಗಕ್ಕೆ ಬರುತ್ತಿದ್ದ ಅವರು ಪ್ರಸಾದನ ಪರಿಕರಗಳ ಬಗ್ಗೆ ವರ್ಣ ಸಂಯೋಜನೆಯ ಬಗ್ಗೆ ಚೌಕಿಯಲ್ಲಿ ಹೆಚ್ಚಿನ ಗಮನವೀಯುತ್ತಿದ್ದರು. ಚಿತ್ರಕಲಾ ಶಿಕ್ಷಕರಾಗಿದ್ದ ಅವರ ಕಲಾದೃಷ್ಟಿ ಸ್ವಯಂ ಶೃಂಗಾರದಲ್ಲಿ ಎದ್ದು ಕಾಣುತ್ತಿತ್ತು. ಹೆಗಡೆಯವರ ದೇಹದ ಎತ್ತರದ ನಿಲುವು, ದನಿಯ ಗಡುಸು, ಸ್ತ್ರೀ ಪಾತ್ರಕ್ಕೆ ಕೊಂಚ ಕೊರತೆಯಾಗಿ ತೋರುತ್ತಿದ್ದರೂ, ಆ ಕೊರತೆಯನ್ನು ಅವರ ಅಭಿನಯ ಕೌಶಲ ಮರೆ ಮಾಡುತ್ತಿತ್ತು. ಆಗ ತೆಂಕು ತಿಟ್ಟಿನ ಯಕ್ಷಗಾನ ಮಂಡಳಿಗಳೊಂದಿಗೆ ಸ್ಪರ್ಧಿಸುವುದು ಬಡಗು ಮೇಳಗಳಿಗೆ ಸಾಮಾನ್ಯದ ಮಾತಾಗಿರಲಿಲ್ಲ. ಆದರೆ ಶ್ರೀ ಗಜಾನನ, ಇಡೀ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಜನತೆಯ ಕಣ್ಮಣಿಯಾದ.

ಕೆರೆಮನೆ ಮೇಳ ಕರ್ನಾಟಕಾದ್ಯಂತ ಸಂಚರಿಸಿ, ರಂಗ ಮಾಧ್ಯಮದಲ್ಲಿ ಚೆಲುವಾದ ಹಲವಾರು ಬದಲಾವಣೆಗಳನ್ನು Revolution ಅಲ್ಲವಾದರೂ (ಕ್ರಾಂತಿ ಅಲ್ಲ ವಿಕಾಸ ಮಾತ್ರ) ಮಾಡಿಕೊಳ್ಳುತ್ತಾ ಬಂದಿದೆ. ಈ Evolutionಗೆ ಗಜಾನನ ಹೆಗಡೆಯವರ ಕೊಡುಗೆಯೂ ಅನನ್ಯ. ನಾಟ್ಯಕಲಾ ಪ್ರೇರಣೆಗಳ (Stimulation of Art) ಸತ್ವ ಶಾಲಿತ್ವವಿರುವುದು ನಿಮಿಷಾರ್ಧದಲ್ಲಿ ಪ್ರೇಕ್ಷಕರನ್ನು ಮೈ ಮರೆಸುವ ಅಭಿನಯ ಚಮತ್ಕಾರದಲ್ಲಿ, ಅದರಲ್ಲೂ ಹೃದಯ ದ್ರವಣಕಾರಿಯಾದ ಪ್ರೇಮ, ಕರುಣೆ, ಉದಾತ್ತ ಭಾವಗಳ ನಯ, ನಾಜೂಕು, ಶುಚಿ ರುಚಿಗಳನ್ನು

ಬಿಂಬಿಸುವಲ್ಲಿ. ಗಜಾನರು "He lived to show the glory of Yakshagana". ಸಾಲಿಗ್ರಾಮ ಮೇಳದಲ್ಲಿ ವಿಖ್ಯಾತರಾದ ಶ್ರೀ ಶಂಕರನಾರಾಯಣ ಸಾಮಗ ಮಲ್ಪೆ, ವೀರಭದ್ರನಾಯಕ, ಮಹಾಬಲ ಹೆಗಡೆ, ಸಿರಿಯಾರ ಮಂಜು ನಾಯಕರೊಂದಿಗೆ "Challenging" ಆಗಿ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ತಾಳಮದ್ದಳೆಗಳಲ್ಲಿ ಅರ್ಥಧಾರಿಯಾಗಿಯೂ ಕಾಣಿಸಿಕೊಂಡ ಶ್ರೀ ಗಜಾನನರು ನಾಟಕ, ಸಂಗೀತ, ಚಿತ್ರಕಲೆಗಳ ಬಗೆಗೂ ಅಭಿರುಚಿಯಿದ್ದ ರಸಿಕ. ಹಾರ್ಮೋನಿಯಂ, ತಬಲಾ, ಪಿಟೀಲು, ಕೊಳಲು, ಮೃದಂಗ, ಚೆಂಡೆ ಎಲ್ಲಾ ವಾದ್ಯಗಳನ್ನು ನುಡಿಸಬಲ್ಲವರಾಗಿದ್ದರು. ಉತ್ತಮ ಗವಾಯಿಗಳೂ ಆಗಿದ್ದರು. ಚಿತ್ರಕಲೆಯಂತೂ ಅವರಿಗೆ ಸರಾಗವಾಗಿ ಒಲಿದಿತ್ತು. ಉತ್ತಮ ಸ್ನೇಹ ಜೀವಿಯೂ ಸಹಾ, ನಿಗರ್ವಿ. ಏನೋವಿದ್ದರೂ ಇಂಗದ ಓಮವ ಹುಚ್ಚು ಅವರಿಗಿತ್ತು.

1977ರಲ್ಲಿ ಅವರಿಗೆ ಹೃದಯ ಬೇನೆಯಿರುವುದು ಪತ್ತೆಯಾಯಿತು. ತಾ.9-11-77ರಂದು ಶ್ರೀಮಾನ್ ಗೋಪಾಲ ಕೃಷ್ಣ ಪಿ. ನಾಯಕ ಮತ್ತು ಗೌರೀಶ ಕಾಯ್ಕಿಣಿಯವರೊಂದಿಗೆ 'ನನಗಿನ್ನೂ 33 ವರ್ಷ' ಎಂದು ಗದ್ಗದಿತರಾಗಿ ನುಡಿದರಂತೆ. ಅವರ ಬದಲಿಗಿದ್ದ ಸ್ತ್ರೀ ವೇಷಧಾರಿ ಶ್ರೀಪುಂಡರೀಕ ಉಪಾಧ್ಯಾಯರಲ್ಲಿ 'ನಮ್ಮ ಮೇಳದ ಹೆಸರನ್ನು ಉಳಿಸು' ಎಂದು ತಬ್ಬಿ ನುಡಿದರಂತೆ. ದಿನಾಂಕ 11-1-1977ರಲ್ಲಿ ಶ್ರೀ ಕೆರೆಮನೆ ಗಜಾನನ ಹೆಗಡೆಯವರ ಸಾವಿನೊಂದಿಗೆ ಉತ್ತರಕನ್ನಡದ ಯಕ್ಷರಂಗದ ಮುತ್ತೈದೆ ಇನ್ನಿಲ್ಲವಾದರು. ಶ್ರೀ ಮಹಾಬಲ ಹೆಗಡೆಯವರು, ''ಕೊನೆಗೂ ಅಂಬೆಯನ್ನು ಉಳಿಸಿಕೊಳ್ಳಲಾಗಿಲ್ಲ'' ವೆಂದು ಗದ್ಗದಿತರಾಗಿ ಉದ್ಗರಿಸಿದರಂತೆ!

'ಪುರುಷವೇಷ ಕೇದಿಗೆ ಮುಂದೆಲೆಯಿಂದ ಕೆಳಕ್ಕೆ ಇಳಿ ಬಿಟ್ಟು ಸೊಂಟದ ಇಕ್ಕೆಲಗಳಲ್ಲಿ ಸಿಕ್ಕಿಸುವ ದೋತ್ರದ ರೀತಿಯಲ್ಲಿ, ಸ್ತ್ರೀ ವೇಷಕ್ಕೂ ಶಿರೋಭೂಷಣದಿಂದ ಇಳಿ ಬಿಡುವ ವ್ಯವಸ್ಥೆ ಕಲಾತ್ಮಕತೆಯನ್ನು ಹೆಚ್ಚಿಸೀತು' ಎಂದು ಅಂದುಕೊಳ್ಳುತ್ತಿದ್ದ ಹೆಗಡೆಯವರು, ಅವರ ನಿಧನಾನಂತರ ಶ್ರೀ ಕೋಳ್ಯೂರು ರಾಮ ಚಂದ್ರರಾಯರು ಕರ್ನಾಟಕ ಮೇಳದಲ್ಲಿ ಅದನ್ನು ಮಾಡಿ ತೋರಿಸಿದರಂತೆ. ಕಲೆಯ ಬಗ್ಗೆ ಆಳವಾದ ಚಿಂತನೆ - ಅಧ್ಯಯನ, ತನ್ನ ಪಾತ್ರದೊಂದಿಗೆ ಇಡಿಯ ಪ್ರದರ್ಶನವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಹೇಗೆ ಮಾಡಬಹುದೆಂಬ ಯೋಚನೆ, ಪ್ರತಿಯೊಂದು ಸಂವಾದ, ಸನ್ನಿವೇಶ, ಪದ್ಯದ ಬಗ್ಗೆ ವಿವರವಾಗಿ ಯೋಚಿಸುತ್ತಿದ್ದರು. ಅಭ್ಯಾಸದ ಕಾಳಜಿ ಅವರಲ್ಲಿತ್ತು. ಮುಕ್ತವಾದ ವಿಚಾರ ವಿನಿಮಯ ವಿಮರ್ಶೆ, ಸಲಹೆ ಸೂಚನೆಗಳನ್ನು ಪ್ರಾಯಭೇದ ಮರೆತು ಮುಕ್ತ ಮನಸ್ಸಿಂದ ಸ್ವೀಕರಿಸುತ್ತಿದ್ದರು.

'ಕೀಚಕ-ಭಸ್ಮಾಸುರ-ದುಷ್ಟಬುದ್ಧಿ ಮೊದಲಾದ ಪಾತ್ರಗಳನ್ನು ಈ ವರ್ಷ ಮಾಡುವೆನು' ಎಂದು ತನ್ನ ಕಡೆಗಾಲದಲ್ಲಿ ನುಡಿಯುತ್ತಿದ್ದ ಶ್ರೀಯುತರ ವೈವಿಧ್ಯಮಯ ಪಾತ್ರಗಳನ್ನು ನೋಡುವ ಭಾಗ್ಯ, ಯಕ್ಷಗಾನ ಪ್ರೇಮಿಗಳಿಗೆ ಕಡೆಗೂ ದೊರಕದಾಯಿತು. ಆತ ಭೀಮನಾಗಿ ಅಬ್ಬರಿಸಿ ಅಟ್ಟಹಾಸದಲ್ಲಿ ಗದೆ ಬೀಸುತ್ತಾ ರಂಗದಲ್ಲಿ ರೌದ್ರವಾಗಿ ತಾಂಡವವಾಡಿದ. ಮೋಹಿನಿಯಾಗಿ ಮುದ್ದು ಮಾಟದಲ್ಲಿ ಶೃಂಗಾರದ ಕಾರಂಜಿಯಂತೆ ಅದೇ ರಂಗದಲ್ಲಿ ಲಾಸ್ಯವಾಡಿದ. ಅಭಿಮನ್ಯುವಾಗಿ, ಚಂದ್ರಹಾಸನಾಗಿ ಮೆರೆದಾಡಿದ. ಚಂದ್ರಮತಿಯಾಗಿ, ಸೈರಂಧ್ರಿಯಾಗಿ ಕರುಳು ಕರಗಿಸುವಂತೆ ಕರುಣಾ ಮೂರ್ತಿಯಾಗಿ ಗೋಗರೆದ, ಪ್ರಭಾವತಿಯಾಗಿ, ಭಾಸವತಿಯಾಗಿ ಕಣ್ಣಗೊಂಬೆಯಂತೆ ಎದೆ ನಟ್ಟಿ ಚಿನ್ನದ ಜಿಂಕೆಯಂತೆ ಕುಣಿದ, ಮತ್ತು ಕುಣಿಕುಣಿಯುತ್ತಲೆ ನೀಲಾಂಜನೆಯಂತೆ ಭೋಂಕನೆ ಒಮ್ಮೆಲೆ ಕೊನೆಯದಾಗಿ ತೆರೆಮರೆಯಾಗಿ ಬಿಟ್ಟ. ಗುಣವಂತೆ ಗ್ರಾಮದ ಗುಣವಂತರ ಮನೆಯ ಕಲಶಕಿರೀಟದ ತಾರಾರತ್ನವೊಂದು ದಿನಾಂಕ 11-1-1977ರಂದು ಕಣ್ಮರೆಯಾಗಿ ಹೋಯಿತು.

ಯಕ್ಷ ಲೋಕದ ಪಾತಾಳ ಕನ್ನಿಕೆ
ಶ್ರೀವೆಂಕಟರಮಣ ಭಟ್ ಪಾತಾಳ

1951ರಲ್ಲಿ ಕಾಂಚನ ಸುಬ್ರಹ್ಮಣ್ಯ ಅಯ್ಯರರಿಂದ ಸಂಗೀತಾಭ್ಯಾಸ ಹಾಗೂ ಕೃಷ್ಣ ಅಯ್ಯರರಿಂದ ಮೃದಂಗಾಭ್ಯಾಸವಾದರೂ, ಅದು ಅವರಿಗೆ ಹತ್ತಲಿಲ್ಲ. ಮಾಡಂಗಾಯಿ ಕೃಷ್ಣಭಟ್ಟ(ಪುತ್ತೂರು ಕೃಷ್ಣ ಭಟ್ಟ) ಹಾಗೂ ಮಿತ್ರರಿಂದ ಪ್ರಾರಂಭವಾದ 'ಲಕ್ಷ್ಮೀ ನಾರಾಯಣ ಯಕ್ಷಗಾನ ನಾಟಕ ಸಭೆ (ರಿ)' ಕಾಂಚನ ಮೇಳದಲ್ಲಿ ಪುರುಷ ಪಾತ್ರಧಾರಿಯಾಗಿ ಸೇರಿ, ಕೊರತೆಯಾಗಿದ್ದ ಸ್ತ್ರೀವೇಷಕ್ಕೆ ಮುಂದೆ ಭಡ್ತಿ ಹೊಂದಿದರು. ಅನಂತರ ಬಡಗುತಿಟ್ಟಿನ ಸೌಕೂರು ದುರ್ಗಾಪರಿಮೇಶ್ವರಿ ಮೇಳ (ಅಂತಯ್ಯ ಶೆಟ್ಟರ ಸಂಚಾಲಕತ್ವ)ದಲ್ಲಿ ತನ್ನ ವೇಷಗಾರಿಕೆಯನ್ನು ಮುಂದುವರಿಸಿದರು. ಆಗ ಮರವಂತೆ ವಿಶ್ವೇಶ್ವರ ಅವಭೃತರು ಹಾಗೂ ಉಳ್ಳೂರು ಸೀತಾರಾಮರೇ ಅವರ ಗುರುಗಳಾಗಿದ್ದರು.

ಸುಮಾರು 1955ರ ಹೊತ್ತಿಗೆ ಹಾಸ್ಯಗಾರ ಪೆರೋಡಿ ನಾರಾಯಣ ಭಟ್ಟರಿಂದಾಗಿ ಕೃಷ್ಣ ಭಟ್ಟರ ಸಂಚಾಲಕತ್ವದಲ್ಲಿ, ಮೂಲ್ಕಿ ಮೇಳಕ್ಕೆ ಸೇರಿಕೊಂಡರು. ಶ್ರೀಗಳಾದ ಅಗರಿ ಶ್ರೀನಿವಾಸರು ಆ ಮೇಳದ ಭಾಗವತರಾಗಿದ್ದರು. 1960 ಮೇ 4ರಂದು ಅಜ್ಜನಗದ್ದೆ ಭಾಗವತರ ಮಧ್ಯಸ್ಥಿಕೆಯಿಂದಾಗಿ, ಸಂಪಾಜೆ ರಾಮಚಂದ್ರಯ್ಯನವರ ಪುತ್ರಿ ಪರಮೇಶ್ವರಿಯೊಂದಿಗೆ ವಿವಾಹವೇರ್ಪಟ್ಟಿತು. ಇಂದಿನ ಪ್ರಸಿದ್ಧ ಸ್ತ್ರೀ ವೇಷಧಾರಿಯಾದ ಅಂಬಾ ಪ್ರಸಾದ್ ಪಾತಾಳರ ಜನನ 1963ರಲ್ಲಿ. ಒಟ್ಟಿಗೆ 6 ಮಕ್ಕಳ ತುಂಬು ಸಂಸಾರ ಶ್ರೀ ಭಟ್ಟರದು.

ಮಲ್ಪೆ ಶಂಕರನಾರಾಯಣ ಸಾಮಗರ ಪ್ರೇರಣೆಯಂತೆ, ಮುಂದೆ ಸುರತ್ಕಲ್ ಮೇಳಕ್ಕೆ ಸೇರ್ಪಡೆ. ವಿದ್ವಾನ್ ತಾಳ್ತಜೆ ಕೃಷ್ಣಭಟ್ಟರ ಸಲಹೆಯಂತೆ 'ದಶರೂಪಕ', ಡಿವಿಜಿಯವರ 'ಅಂತಃಪುರ ಗೀತೆ' ಮುಂತಾದ ಕೃತಿಗಳನ್ನು ಅಭ್ಯಸಿಸಿದರು. ಅದರಂತೆ, ಹಾವ-ಭಾವ, ವಿಭಾವ, ಸಂಚಾರಿ ಭಾವ ಹಾಗೂ ಮುದ್ರೆ, ಭಂಗಿಗಳನ್ನು ಕಲಿತುಕೊಂಡರು. ಅಷ್ಟಕ್ಕೇ ತೃಪ್ತರಾಗದೆ, ಮಂಗಳೂರಿನ ನಾಟ್ಯಾಚಾರ್ಯ ವಿಠಲರಿಂದ 1959ರಿಂದ ಎರಡು ವರ್ಷಗಳ ಕಾಲ ಭಸ್ಮಾಸುರ ಮೋಹಿನಿ, ಪೂಜಾ ನೃತ್ಯ, ಪದಾಭಿನಯ ಮುಂತಾದವುಗಳನ್ನು ಶಾಸ್ತ್ರೀಯವಾಗಿ ಕಲಿತುಕೊಂಡರು. ಅಲ್ಲಿಗೂ ವಿರಮಿಸದೆ, ಬೇಲೂರು ಹಳೇಬಿಡುಗಳಿಗೂ ತೆರಳಿ, ಅಲ್ಲಿಯ ಶಿಲಾಬಾಲಿಕೆಯರ

ಹಾವಭಾವ, ಬಳುಕು-ಭಂಗಿಗಗಳನ್ನು ಅಭ್ಯಸಿಸಿದರು. ಬೇಲೂರಿನಲ್ಲಿ ಮದ್ದೆಗಾರರಾಗಿದ್ದ ಲಕ್ಷ್ಮಣಾಚಾರ್ಯರಿಂದ ಸ್ತ್ರೀ ಪಾತ್ರದ ವಿವಿಧ ಅಲಂಕಾರಿಕಾ ಆಭರಣಗಳನ್ನು ಮಾಡಿಸಿಕೊಂಡು, ತನ್ನ ಸ್ತ್ರೀವೇಷದಲ್ಲಿ ಅಳವಡಿಸಿಕೊಂಡರು. ಉಡುಪಿ ಮುಂತಾದೆಡೆ ಸಂಚರಿಸಿ, ವಿವಿಧ ಸ್ತ್ರೀವರ್ಣಚಿತ್ರಗಳನ್ನೂ ಅಭ್ಯಸಿಸಿ ಡಾ. ಶಿವರಾಮ ಕಾರಂತರಿಂದಲೂ ಪ್ರಭಾವಿತರಾದರು. ಮುಖ ವರ್ಣಿಕೆಯ ರಹಸ್ಯವನ್ನು ಅಂದಿನ ಪ್ರಸಿದ್ಧ ಮೇಕಪ್‌ಮೇನ್ ವಿಟ್ಲದ ಬಾಬು ಮಾಸ್ಟರ್ ಅವರಿಂದ ಶ್ರಮವಹಿಸಿ ಕಲಿತುಕೊಂಡರು. ಮಲ್ಪೆ ಶಂಕರನಾರಾಯಣ ಸಾಮಗರ ಪ್ರೇರಣೆಯಿಂದ ಸಾಹಿತ್ಯ, ಮಾತುಗಾರಿಕೆಗಳನ್ನು ಉತ್ತಮ ಪಡಿಸಿಕೊಳ್ಳಲು, ದೇರಾಜೆ, ಕುವೆಂಪು, ಡಿವಿಜಿ, ದರಾಬೇಂದ್ರೆ, ಅನಕೃ, ಪುತಿನ, ಕಾರಂತರೇ ಮೊದಲಾದ ಸಾಹಿತ್ಯ ದಿಗ್ಗಜರ ಕೃತಿಗಳನ್ನು ದಿನಾಲೂ ಓದುವ 'ಚಟ'ವನ್ನು ಬೆಳೆಸಿಕೊಂಡರು. ಧರ್ಮಸ್ಥಳದ ಕುಡುಮದೂರಿನ ಭಾಗವತರಾಗಿದ್ದ ನಾರಾಯಣ ರಾಯರ ಮಾತಿನಂತೆ ಶ್ರೀರತ್ನವರ್ಮ ಹೆಗಡೆಯವರು, ಸುರತ್ಕಲ್ ಮೇಳದ ಯಜಮಾನರಾಗಿದ್ದ ವರದರಾಯ ಪೈಯವರಲ್ಲಿ ಮಾತನಾಡಿ, ಆ ಮೇಳದಿಂದ ಬಿಡಿಸಿ, ಶ್ರೀಧರ್ಮಸ್ಥಳ ಮೇಳಕ್ಕೆ ಶ್ರೀಪಾತಾಳರನ್ನು ಸೇರಿಸಿಕೊಂಡರು. ಧರ್ಮಸ್ಥಳ ಮೇಳದಲ್ಲಿಯೇ 1981ರವರೆಗೆ ರೂ. 3200ರ ಸಂಬಳಕ್ಕೆ ದುಡಿದು, ಕೊನೆಗೆ ಅಲ್ಲಿಯೇ ಯಕ್ಷಗಾನ ರಂಗದಿಂದಲೇ ನಿವೃತ್ತಿ ಹೊಂದಿದರು. ವೆಂಕಟರಮಣ ಭಟ್ಟರ ಪ್ರೇರಣೆಯಿಂದಲಾಗಿ ಶ್ರೀರತ್ನವರ್ಮ ಹೆಗಡೆಯವರು ಮೇಳಕ್ಕಾಗಿ ಸ್ಟೀಲಿನ ರಂಗ ಮಂಟಪ, ಪ್ರತೀ ವರುಷವು ಸಂಪ್ರದಾಯ ಬದ್ಧವಾದ ಹೊಸ ಹೊಸ ಪ್ರಸಂಗಗಳ ಅಳವಡಿಕೆ ಮುಂತಾದ ಕ್ರಾಂತಿಕಾರಕ ಕ್ರಮಗಳನ್ನು ಕೈಗೊಂಡರು. ಅಲ್ಲದೆ ಧರ್ಮಸ್ಥಳದ ಯಕ್ಷಗಾನ ನೃತ್ಯಾಭ್ಯಾಸ ಕೇಂದ್ರದ ಪ್ರಾರಂಭಕ್ಕೂ, ಶ್ರೀಭಟ್ಟರೇ ಪ್ರೇರಣಾ ಪುರುಷರಾಗಿದ್ದರು. ಯಕ್ಷಗಾನದ ಬೇಸಗೆಯ ತಿರುಗಾಟ ನಿಂತ ಮೇಲೆ, ಮಳೆಗಾಲದಲ್ಲಿ ಚೆನ್ನೈ, ಬೆಂಗಳೂರು, ಮುಂಬಯಿ, ದೆಹಲಿಯೆಂದು ನೂರಾರು ಪ್ರದರ್ಶನಗಳಲ್ಲಿ ಭಾಗವಹಿಸಿದ್ದಲ್ಲದೆ ಆಕಾಶವಾಣಿ ದೂರದರ್ಶನಗಳಲ್ಲೂ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಸ್ತ್ರೀ ವೇಷದಾರಿಯಾದರೂ ಪುರುಷ ಪಾತ್ರಗಳಾದ ಅತಿಕಾಯ, ವಶಿಷ್ಠ, ನಾರದ, ಶಲ್ಯ, ವಿಷ್ಣು, ಕೃಷ್ಣ, ಅಯ್ಯಪ್ಪನೆ ಮೊದಲಾದ ಅವರು ನಿರ್ವಹಿಸುತ್ತಿದ್ದ ಪಾತ್ರಗಳೂ ಹೆಸರುವಾಸಿಯಾಗಿವೆ. ಪ್ರಾರಂಭದಲ್ಲಿ ಮೇನಕೆ, ಶಕುಂತಳೆ, ಗೌರಿ, ಪಾರ್ವತಿ, ಶಾರದೆ, ಕುಮುದೆ ಮುಂತಾದ ಪಾತ್ರಗಳನ್ನು ನಿರ್ವಹಿಸಿದರು. ಅನಂತರ ಅಮ್ಮದೇವಿ, ಊರ್ವಶಿ, ಮೋಹಿನಿ, ರಂಭೆಯ ಪಾತ್ರಗಳು ಶ್ರೀ ವೆಂಕಟರಮಣ ಭಟ್ಟರಿಗೆ ಹೆಸರನ್ನು

ತಂದಿತ್ತ ಪಾತ್ರಗಳಾದವು. ಅಲ್ಲದೆ, ರಾವಣೋದ್ಭವದ ಮಂಡೋದರಿ, ಕಾಂತಬಾರೆ, ಬುದಾಬಾರೆಯ ಪುಲ್ಲ ಪೆರ್ಗಡ್ತಿ ಪಾತ್ರಳು ಅವರದ್ದೇ ಆಗಿ ಉಳಿದಿವೆ. ದಮಯಂತಿ, ಚಂದ್ರಮತಿ, ಚಿತ್ರಾಕ್ಷಿ, ಗುಣಸುಂದರಿ, ಸೌಧಾಮಿನಿ ಪಾತ್ರಗಳೂ ಪ್ರೇಕ್ಷಕರ ಮೇಲೆ ಒಳ್ಳೇ ಪರಿಣಾಮವನ್ನು ಬೀರಿವೆ. ಶ್ರೀ ಕೃಷ್ಣಪಾರಿಜಾತದ ಸತ್ಯಭಾಮ, ಮಾಯಾಪೂತನಿ ಶೂರ್ಪನಖಿ ಅಜಮುಖಿ, ದಿತಿ, ಕಯಾದು, ಧಾನ್ಯಮಾಲಿನಿ, ದುರುದುಂಡಿ, ಮಾಲಿನಿ, ಶ್ರೀದೇವಿಯಂಥಹ ವೈವಿಧ್ಯಮಯ ಪಾತ್ರಗಳಲ್ಲಿ ಶ್ರೀ ಭಟ್ಟರನ್ನು ಸರಿಗಟ್ಟುವವರು ವಿರಳ. ಜೋಡಾಟ, ಕೂಡಾಟ, ತಾಳಮದ್ದಳೆ ಕೂಟಗಳಲ್ಲೂ ಶ್ರೀಯುತರು ಮಿಂಚಿದ್ದಾರೆ. ಸ್ತ್ರೀ ವೇಷಕ್ಕೆ, ವೇಷಗಾರಿಕೆಗೆ ತನ್ನದೇ ಆದ ಭಾಷ್ಯವನ್ನು ಬರೆದಿದ್ದಾರೆ. ಪಾತಾಳ ಕನ್ನಿಕೆಯಾಗಿ ಮೆರೆದಿದ್ದಾರೆ.

ಹೀಗೆಯೇ ಸುಮಾರು 30 ವರ್ಷಗಳ ದೀರ್ಘ ಕಾಲ ಬಡಗು ತೆಂಕು ತಿಟ್ಟುಗಳ ವಿವಿಧ ಯಕ್ಷಗಾನ ಮೇಳಗಳಲ್ಲಿ ದುಡಿದ ಶ್ರೀಯುತ ಪಾತಾಳ ಭಟ್ಟರನ್ನು ಹಲವು ವ್ಯಕ್ತಿ, ಸಂಘ-ಸಂಸ್ಥೆಗಳು ಗೌರವಿಸಿವೆ; ಸನ್ಮಾನಿಸಿವೆ. 1982ರಲ್ಲಿ ಸ್ವರ್ಣ ಯಕ್ಷಗಾನ ಮಂಡಳಿ, ಬಜ್ಪೆ ಕತ್ತಲಸಾರು ಸಾಹಿತ್ಯಾಭಿಮಾನಿಗಳು, 1985ರಲ್ಲಿ ಕಡಬ ಯುವ ಕಲಾವಿದರ ಯಕ್ಷಗಾನ ಸಂಘ, ಎಡನೀರು ಶ್ರೀಮಠದ ಯಕ್ಷಗಾನ ಸಪ್ತಾಹದಲ್ಲಿ, 1993ರಲ್ಲಿ ಪುತ್ತೂರು ಶ್ರೀ ಗುರುವಾಯೂರಪ್ಪನ್ ಕೀರ್ತನಾಕಲಾ ಸಮಿತಿ, 1994ರಲ್ಲಿ ಕಾಸರಗೋಡು ಮುಳಿಯಾರಿನ ಕುಮಾರಸ್ವಾಮಿ ಯುವಕ ಕಲಾಸಂಘ, ಯಕ್ಷಗಾನೋತ್ಸವ 94ರ ಸಮಿತಿ, ಮಂಗಳೂರು, ಕನ್ನಡ ಸಾಹಿತ್ಯ ಸಮ್ಮೇಳನ, ಉಪ್ಪಿನಂಗಡಿ (1995)ಯ ಸನ್ಮಾನಗಳಾಗಿವೆ. ಇವೆಲ್ಲವುಗಳಿಗೂ ಕಿರೀಟಪ್ರಾಯವಾಗಿ ತಾ. 13-9-97ರಂದು ಚೆನ್ನೈಯಲ್ಲಿ ಕಾಂಚಿ ಕಾಮಕೋಟಿ ಪೀಠದ ಜಯೇಂದ್ರ ತೀರ್ಥ ಸರಸ್ವತಿ ಸ್ವಾಮಿಗಳ 61ನೇ ಜನ್ಮದಿನಾಚರಣೆಯ ಅಂಗವಾಗಿ ಮಾಜಿ ರಾಷ್ಟ್ರಪತಿ ಆರ್. ವೆಂಕಟರಾಮನರ ದಿವ್ಯ ಹಸ್ತದಿಂದ "ಮಣಿವಿಳಾವಿರುದು" ಅನ್ನು ಸಂಪಾದಿಸಿದರು. ಇದು ಹಿಂದೂ ಧರ್ಮೋತ್ಥಾನ ವೇದಿಕೆಯಲ್ಲಿ ಕಾಂಚಿಯ ಹಿಂದೂಧರ್ಮ ಸಂಘದ ವಜ್ರ ಮಹೋತ್ಸವ ಪ್ರಶಸ್ತಿಯಾಗಿ, ಚಿನ್ನದ ಪದಕ, ಶಾಲು ಮತ್ತು ಪ್ರಶಸ್ತಿಪತ್ರಗಳನ್ನೊಳಗೊಂಡಿತ್ತು.

ಈಗ ಅವರ ಎಪ್ಪತ್ತರ 'ತಾರುಣ್ಯ'ಕ್ಕೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 2001ರ ಪ್ರತಿಷ್ಠಿತ ಪ್ರಶಸ್ತಿಯ ಗರಿಯು ಮುಡಿಯೇರಿದೆ. ಅವರಿಗೆ ಗೌರವ ಗ್ರಂಥವೂ ಅರ್ಪಣೆಯಾಗಿದೆ. ಶ್ರೀ ಪಾತಾಳರು ಚಿರಾಯುವಾಗಲಿ.

ಚೆಂಡೆ - ಮದ್ದಳೆವಾದನದ ಹಿರಿಯ ಕೈ - ಪುಂಡಿಕ್ಕಾೖ ಕೃಷ್ಣಭಟ್

'ಇಂದಿನ ನವ್ಯ ಕಲಾವಿದರಿಗೆ ಮದ್ದಳೆ ಬಾರಿಸಲು ನನಗೆ ತಿಳಿಯುವುದಿಲ್ಲ' ಎಂದು ನೋವಿನಿಂದ ನುಡಿಯುವ ಅಪ್ರತಿಭ ಮದ್ದಳೆವಾದಕರಾದ ಪಿ. ಕೃಷ್ಣಭಟ್ಟರಿಗೀಗ ಸುಮಾರು ಅರುವತ್ತರ ಹರೆಯ. ಶ್ರೀಯುತ ಅಚ್ಚುತ ಭಟ್ಟ ಹಾಗೂ ಸರಸ್ವತಿ ಅಮ್ಮನವರ ಪುತ್ರರಾಗಿ ದಿ.30-10-1943ರಲ್ಲಿ ಜನನ. ಕಾಸರಗೋಡು ಜಿಲ್ಲೆಯ ನಾರಂಪಾಡಿ ಸಮೀಪದ ಮವ್ವಾರು ಶಾಲೆಯಲ್ಲಿ ಎಂಟನೇ ಕ್ಲಾಸಿನ ತನಕ ವಿದ್ಯಾಭ್ಯಾಸ. ಅನಂತರ ಬಡತನದ ದೆಸೆಯಿಂದಾಗಿ, ವಿದ್ಯಾಭ್ಯಾಸಕ್ಕೆ ಶರಣು ಹೊಡೆದು, ಕುದ್ರೆಕೊಡ್ಲು ರಾಮಭಟ್ಟರಿಂದ ಮದ್ದಳೆ - ಚೆಂಡೆವಾದನದ ಅಭ್ಯಾಸ. ತನ್ನ 18ನೇ ವರುಷದಲ್ಲಿಯೇ ಒಂದು ವರುಷಗಳ ಕಾಲ ಸಂಗೀತದ ಕಲಿಕೆ.

ಮುಂದೆ, 1966ರಿಂದ ಮೂಲ್ಕಿ ಮೇಳದಲ್ಲಿ ವ್ಯವಸಾಯ ಪ್ರಾರಂಭ. ಸಂಗೀತಗಾರನಾಗಿ ಸಂಗೀತದೊಂದಿಗೆ ಮದ್ದಳೆವಾದನವೂ ಇತ್ತು. ಬಾಣಾಸುರ ಕಾಳಗ (ಉಷಾ ಪರಿಣಾಯ), ಶ್ರೀಸತ್ಯನಾರಾಯಣ ವ್ರತ ಮಹಾತ್ಮೆ... ಮುಂತಾದ ಪ್ರಸಂಗಗಳನ್ನು ಆ ಮೇಳದಲ್ಲಿ ಆಡುತ್ತಿದ್ದರು. ಮುಡಿಪಿನ ಶಿವಣ್ಣಾಚಾರಿ, ಹೊಸಹಿತ್ಲು ಮಹಾಲಿಂಗಭಟ್ಟ ಮುಂತಾದ ಹಿರಿಯ ಕಲಾವಿದರಿದ್ದು, ಪೆರುವೋಡಿ ನಾರಾಯಣ ಭಟ್ಟರು ಆ ಮೇಳದ ಸಂಚಾಲಕರಾಗಿದ್ದರು. ಉಜಿರೆ ಗೋಪಾಲಕೃಷ್ಣ ಭಟ್ ಭಾಗವತರಾಗಿದ್ದರೆ, ಚಿಪ್ಪಾರು ಕೃಷ್ಣಯ್ಯ ಬಲ್ಲಾಳ್, ಮಾಂಬಾಡಿ ಸುಬ್ರಹ್ಮಣ್ಯ ಭಟ್ ಮೊದಲಾದವರು ಚೆಂಡೆ-ಮದ್ದಳೆ ವಾದನಕ್ಕೆ ಇದ್ದರು ಎಂಬುದನ್ನು ಶ್ರೀಯುತರು ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಾರೆ.

ಶ್ರೀಯುತರಾದ ಕಲ್ಲಾಡಿ ವಿಠಲ ಶೆಟ್ಟಿಯವರ ಸಂಚಾಲಕತ್ವದ ಶ್ರೀ ಕಟೀಲು ಮೇಳದಲ್ಲಿ 1967ರಿಂದ 1975ರವರೆಗೆ ಚೆಂಡೆ ಮದ್ದಳೆವಾದಕರಾಗಿ ದುಡಿದರು. ಪ್ರಥಮ ನಾಲ್ಕು ವರುಷಗಳಲ್ಲಿ ಇರಾ ಗೋಪಾಲಕೃಷ್ಣರಾವ್, ಚೆಂಡೆವಾದಕರಾಗಿ ಪುತ್ತೂರು ಕೃಷ್ಣರಾವ್ ಇದ್ದರು. ಅನಂತರ ಕಿರಿಯ ಬಲಿಪ ನಾರಾಯಣ ಭಾಗವತರು ಹಾಗೂ ನೆಡ್ಲೆ ನರಸಿಂಹಭಟ್ಟರ ಜೊತೆಯಾದರು. ಶ್ರೀದೇವಿ ಮಹಾತ್ಮೆ, ಕುರುಕ್ಷೇತ್ರ, ಅತಿಕಾಯ ಇಂದ್ರಜಿತು ಮೈರಾವಣ ಕಾಳಗ ಮುಂತಾದ ಪ್ರಸಂಗಗಳ ಪ್ರದರ್ಶನ ಆಗ ನಡೆಯುತ್ತಿತ್ತು. ಮುಖ್ಯವಾಗಿ ಕುಂಬ್ಳೆ ಕುಟ್ಯಪ್ಪು, ಕದ್ರಿವಿಷ್ಣು, ಪಡ್ರೆಚಂದು,

ಅಪ್ಪಯ್ಯ ಮಣಿಯಾಣಿ, ಕುಂದಾಪುರದ ಕುಷ್ಠ, ಸಂಜೀವ (ಸ್ತ್ರೀ ವೇಷಧಾರಿಗಳು) ಮುಂತಾದ ಮಹಾನ್ ಕಲಾವಿದರನ್ನು ಕುಣಿಸಿದ ಹೆಗ್ಗಳಿಕೆ ಶ್ರೀಯುತ ಕೃಷ್ಣಭಟ್ಟರದು.

ಕಲ್ಲಾಡಿ ವಿಠಲ ಶೆಟ್ಟಿಯವರ ಯಜಮಾನಿಕೆಯ ಕರ್ನಾಟಕ ಮೇಳದಲ್ಲಿ ವಿದ್ವಾನ್ ದಾಮೋದರ ಮಂಡೆಚ್ಚರ ಭಾಗವತಿಕೆಗೆ ಶ್ರೀಯುತರ ಚೆಂಡೆವಾದನ ಒಂದು ಅಪೂರ್ವ ರಸಗವಳವಾಗಿತ್ತು. ಕಾಂಚನ ನಾರಾಯಣ ಭಟ್ಟರ ಮದ್ದಳೆವಾದನವೂ ಇತ್ತು. ಮಲ್ಪೆ ರಾಮದಾಸ ಸಾಮಗ, ಅಳಿಕೆ ರಾಮಯ್ಯರೈ, ಬೋಳಾರು ನಾರಾಯಣ ಶೆಟ್ಟಿ, ಅರುವ ಕೊರಗಪ್ಪರೈ, ಜಪ್ಪು ದಯಾನಂದ ಶೆಟ್ಟಿ, ಮದ್ದಡ್ಕ ಗೋಪಾಲಶೆಟ್ಟಿ, ಮಿಜಾರು ಅಣ್ಣಪ್ಪ ಮುಂತಾದ ಕಲಾವಿದರಿದ್ದು, ಬಿರ್ದ್‌ದ ಬೈರವೆರ್, ಕೋಟಿ-ಚೆನ್ನಯ, ದೇವಪೂಂಜ ಪ್ರತಾಪದಂತಹ ಸತ್ವಯುತ ತುಳು ಪ್ರಸಂಗಗಳಲ್ಲದೆ, ದ್ರೌಪದೀ ವಸ್ತ್ರಾಪಹಾರ, ದಮಯಂತಿ ಪುನಃಸ್ವಯಂವರ, ಸತ್ಯ ಹರಿಶ್ಚಂದ್ರದಂತಹ ಮನಮಿಡಿಯುವ ಪ್ರಸಂಗಗಳನ್ನು ಲೀಲಾಜಾಲವಾಗಿ ಮುನ್ನಡೆಸಿದ್ದಾರೆ.

1976-77ರಲ್ಲಿ ಕೊಲ್ಲೂರು ಮೇಳದಲ್ಲಿ (ಸಂಚಾಲಕ ಕಾವೂರು ಕೇಶವ) 'ಕೊಲ್ಲೂರು ಕ್ಷೇತ್ರ ಮಹಾತ್ಮೆ'ಯನ್ನು ಯಶಸ್ವಿಯಾಗಿ ಪ್ರದರ್ಶಿಸುವಲ್ಲಿ ಪುಂಡಿಕ್ಯಾಯವರ ಕೊಡುಗೆ ಅಪಾರ. ಕಳಿಯೂರು ನಾರಾಯಣ ಆಚಾರಿ ಭಾಗವತರಾಗಿದ್ದು, ಜೋಡುಕಲ್ಲು ರಾಘವ ಪುರುಷರು ಮದ್ದಳೆ ವಾದಕರಾಗಿದ್ದರು. ಮಲ್ಪೆ ಶಂಕರನಾರಾಯಣ ಸಾಮಗ, ಕಾವೂರು ಕೇಶವ, ಭಂಗ ಭಂಡಾರಿ, ಮಂಜೇಶ್ವರ ಜನಾರ್ಧನರೇ ಮೊದಲಾದ ಕಲಾವಿದರ ಒಡನಾಟ ಅವಿಸ್ಮರಣೀಯವಾದದ್ದು ಎನ್ನುತ್ತಾರೆ ಶ್ರೀಯುತ ಕೃಷ್ಣಭಟ್ಟರು.

"ಯಕ್ಷಪ್ರಭಾ" ಮಾಸಪತ್ರಿಕೆಯ ಸಂಪಾದಕರಾದ ಶ್ರೀ ಕುಬಣೂರು ಶ್ರೀಧರ ರಾಯರ ಸಂಚಾಲಕತ್ವದಲ್ಲಿದ್ದ ಕೂಡ್ಲು ಮೇಳದಲ್ಲಿ ಚೆಂಡೆವಾದಕರಾಗಿ 1977ರಿಂದ ಎರಡು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅಗರಿ ಶ್ರೀನಿವಾಸ ಭಾಗವತರು ಹಾಗೂ ಕುದ್ರೆಕೋಡ್ಲು ಕಿರಿ ರಾಮಭಟ್ಟರು ಮತ್ತು ಮಾಂಬಾಡಿ ಸುಬ್ರಹ್ಮಣ್ಯ ಭಟ್ಟರು ಮದ್ದಳೆ ವಾದಕರಾಗಿದ್ದರು. "ಚಂಚಲ ಜಯಲಲನೆ" ಎಂಬ ಯಶಸ್ವೀ ಪ್ರಸಂಗವನ್ನು ಆಡುತ್ತಿದ್ದು, ಹೊಸಹಿತ್ಲು ಮಾಲಿಂಗಭಟ್ಟ, ಶಂಭುಶರ್ಮ ವಿಟ್ಲ, ಪೂಕಳ ಲಕ್ಷ್ಮೀನಾರಾಯಣಭಟ್ಟರೇ ಮೊದಲಾದ ಕಲಾವಿದರಿದ್ದಂತೆ. ಅನಂತರ 1980ರಿಂದ 1988ರವರೆಗೆ, ಎಂಟು ವರ್ಷಗಳ ಕಾಲ ಕದ್ರಿಮೇಳದಲ್ಲಿ ಚೆಂಡೆವಾದಕರಾಗಿ ತಿರುಗಾಟ. ಕುಬಣೂರು ಶ್ರೀಧರರಾವ್, ಪುತ್ತಿಗೆ ರಘುರಾಂ ಹೊಳ್ಳ, ಪೆರುವೋಡಿ

ಶ್ಯಾಮಭಟ್ ಭಾಗವತರಾಗಿದ್ದರು. ಮಾಂಬಾಡಿ ಸುಬ್ರಹ್ಮಣ್ಯ ಭಟ್, ದೇಲಂತಮಜಲು ಸುಬ್ರಹ್ಮಣ್ಯ ಭಟ್, ಆಡೂರು ಸುಂದರರಾವ್ ಹಿಮ್ಮೇಳದಲ್ಲಿದ್ದರು. ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟಿಯವರು ಅತಿಥಿ ಭಾಗವತರಾಗಿ ಭಾಗವಹಿಸುತ್ತಿದ್ದರು. ಡಿ. ಮನೋಹರ ಕುಮಾರ್, ಸರಪಾಡಿ ಅಶೋಕಶೆಟ್ಟಿ, ಮಲ್ಪೆ ರಾಮದಾಸ ಸಾಮಗ, ಮಂಕುಡೆ ಸಂಜೀವಶೆಟ್ಟಿ, ಕೆ.ಎಚ್. ದಾಸಪ್ಪ ರೈ, ತೋಡಿಕಾನ ವಿಶ್ವನಾಥ ಗೌಡ, ಕಾವೂರು ಕೇಶವ, ಕ್ರಿಶ್ಚಿಯನ್ ಬಾಬು, ಪೆರುವೋಡಿ ನಾರಾಯಣ ಹಾಸ್ಯಗಾರ, ಸೀತಾರಾಂ ಕುಮಾರ್ ಕಟೀಲು ಮುಂತಾದ ಕಲಾವಿದರಿದ್ದರು. ಸತ್ಯದಪ್ಪೆ ಚೆನ್ನಮ್ಮ ಧರ್ಮದಾರೆ, ಗೆಜ್ಜೆದ ಪೂಜೆ, ಸತ್ಯಹರಿಶ್ಚಂದ್ರ, ಕುರುಕ್ಷೇತ್ರ ಮೊದಲಾದ ಪ್ರಸಂಗಗಳನ್ನು ಪ್ರದರ್ಶಿಸುತ್ತಿದ್ದರು ಎಂಬುದನ್ನು ಶ್ರೀಯುತರು ನೆನಪಿಸಿಕೊಳ್ಳುತ್ತಾರೆ (ಸಂಚಾಲಕ ಕರ್ನೂರು ಕೊರಗಪ್ಪರೈ).

ಬಪ್ಪನಾಡು ಕ್ಷೇತ್ರ ಮಹಾತ್ಮೆ, ದ್ರೌಪದೀ ಪ್ರತಾಪ, ನಳದಮಯಂತಿ ಆಖ್ಯಾನಗಳನ್ನು ಪ್ರದರ್ಶಿಸುತ್ತಿದ್ದ 'ಬಪ್ಪನಾಡು ಮೇಳ'ದಲ್ಲಿ ಒಂದು ವರ್ಷ ತಿರುಗಾಟವನ್ನು 1989ರಲ್ಲಿ ಮಾಡಿದ್ದರು. ಅಡ್ಯಾರುಗುತ್ತು ಶಂಕರ ಆಳ್ವ ಅವರು ಯಜಮಾನರಾಗಿದ್ದ ಆ ಮೇಳದಲ್ಲಿ ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿ, ಬೆಳಿಗ್ರೋಡಿ ಸುಬ್ರಹ್ಮಣ್ಯ ಭಟ್, ಬಲಿಪ ವಿಶ್ವೇಶ್ವರ ಭಟ್, ಪೆರುವೋಡಿ ನಾರಾಯಣ ಭಟ್, ಕೋಳ್ಯೂರು ರಾಮಚಂದ್ರರಾವ್, ಕರ್ಗಲ್ಲು ವಿಶ್ವೇಶ್ವರ ಭಟ್, ಕರೋಳು ದೇರಣ್ಣ ಶೆಟ್ಟಿ ,ಮಾಯಿಪ್ಪಾಡಿ ಕುಂಞ ರಾಮ... ಮುಂತಾದ ಕಲಾವಿದರಿದ್ದರು. ಹೀಗೆ ಹಲವಾರು ಯಕ್ಷಗಾನದ ವ್ಯವಸಾಯೀ ಮೇಳಗಳಲ್ಲಿ ದುಡಿದ ಪಿ. ಕೃಷ್ಣಭಟ್ಟರ ಅನುಭವ - ಪರಿಣತಿ ಅಪಾರವಾದುದು. ತೆಂಕುತಿಟ್ಟಿನ ಈಗಿನ ಹಾಗೂ ಹಿಂದಿನ ಹೆಚ್ಚುಕಡಿಮೆ ಎಲ್ಲಾ ಹಿಮ್ಮೇಳ ಮುಮ್ಮೇಳ ಕಲಾವಿದರ ಒಡನಾಟ ಇರುವ ಶ್ರೀಯುತರು, ಯಕ್ಷರಂಗದ ಒಳ - ಹೊರಗನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಆದರೆ 1990ರಿಂದ ತನ್ನ ಆರೋಗ್ಯದ ತೊಂದರೆಯಿಂದಾಗಿ ಮೇಳದ ಸುತ್ತಾಟವನ್ನು ನಿಲ್ಲಿಸಬೇಕಾಗಿ ಬಂತು. ಆದರೂ ಸಹ, ಕಾರ್ತಿಕೇಯ ಕಲಾನಿಲಯ - ಕೋಟೂರು, ನುಳಿಯಾಲು, ಆರ್ಲಪದವು, ಪಡ್ರೆ, ಶಿರಂಕಲ್ಲುಗಳಲ್ಲಿ ಚೆಂಡೆ-ಮದ್ದಳೆ ತರಬೇತಿ ಕ್ಲಾಸುಗಳನ್ನು ಈ ಇಳಿವಯಸ್ಸಿನಲ್ಲೂ ನಡೆಸುತ್ತಿದ್ದಾರೆ.

ಈಗಿನ ಎಷ್ಟೋ ಪ್ರಸಿದ್ಧ ಕಲಾವಿದರ ಪ್ರಸಿದ್ಧಿ ಅವರ ಕಾಲಕ್ಕೇ ಮುಗಿದಂತೆ ಎಂದು ಅನಿಸುತ್ತದೆ. ಯಾಕೆಂದರೆ ಮೇಳದ ತಿರುಗಾಟ ಮುಗಿದ ಮೇಲೆ ಬೆಂಗಳೂರು, ಚೆನ್ನೈ, ಮುಂಬೈ ಎಂದು ವರ್ಷವಿಡೀ ಪ್ರದರ್ಶನವೊಂದರಲ್ಲೇ ಮಗ್ನರಾಗಿರುವ

ಕಲಾವಿದರಿಗೆ ಶಿಷ್ಯರನ್ನು ತಯಾರು ಮಾಡಲು ಸಮಯವೆಲ್ಲಿ? ಆದರೆ ಶ್ರೀಯುತ ಭಟ್ಟರು ಪದ್ರೆ ಆನಂದ, ಪದ್ರೆ ಶ್ರೀಧರ, ಬಳ್ಳಮೂಲೆ ಈಶ್ವರಭಟ್, ಅಡ್ಕ ಕೃಷ್ಣಭಟ್ಟರೇ ಮೊದಲಾದ ಉದಯೋನ್ಮುಖ ಕಲಾವಿದರನ್ನು ಸಮಾಜಕ್ಕೆ ಕೊಡುಗೆಯಾಗಿತ್ತಿದ್ದಾರೆ. ತನ್ನ ಪುತ್ರ ರಾಜೇಂದ್ರ ಪ್ರಸಾದನಿಗೆ ಎಸ್.ಎಸ್.ಎಲ್.ಸಿ. ತನಕ ವಿದ್ಯಾಭ್ಯಾಸ ಕೊಡಿಸಿ, ಚೆಂಡೆ-ಮದ್ದಳೆ ವಾದನವನ್ನು ಕಲಿಸಿ. ತನ್ನ ಪರಂಪರೆಯನ್ನು ಮುನ್ನಡೆಸುತ್ತಿದ್ದಾರೆ. ತೆಂಕುತಿಟ್ಟಿನ ಪಾರಂಪರಿಕ ಭಾಗವತಿಕೆಯ ಹಾಗೂ ರಂಗತಂತ್ರದ ಏಕೈಕ ಕೊಂಡಿಯಾದ ಕಿರಿಯ ಬಲಿಪ ನಾರಾಯಣ ಭಾಗವತರೆಂದರೆ ಅವರಿಗೆ ಎಲ್ಲಿಲ್ಲದ ಗೌರವ.

ತೆಂಕುತಿಟ್ಟು ಹಿತರಕ್ಷಣಾವೇದಿಕೆ ಸುಳ್ಯ, ಶ್ರೀ ವೀರಾಂಜನೇಯ ಯಕ್ಷಗಾನ ಕಲಾಸಂಘ (ರಿ), ಶಿರಂಕಲ್ಲು, ಕನ್ಯಾನ ಇವರ ಮೂಲಕ ಟಿ.ವಿ. ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಲ್ಲದೆ, ಪಂಡಿತ ಪೆರ್ಲಕೃಷ್ಣಭಟ್ಟರ ಬಳಗದಲ್ಲಿ ಮಂಗಳೂರು ಆಕಾಶವಾಣಿಯಲ್ಲಿ ಸುಮಾರು 40ಕ್ಕಿಂತಲೂ ಹೆಚ್ಚು ತಾಳಮದ್ದಳೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಪದ ಹಾಗೂ ತಾಳಗಳಿಗೆ ಈಗ ತಾಳಮೇಳಗಳಿಲ್ಲ, ಅಲ್ಲದೆ ಹಿಂದಿನಂತಹ ಶುದ್ಧವಾದ ಯಕ್ಷಗಾನದ ಮಟ್ಟು ಮಾಯವಾಗಿ, ಸಂಗೀತದ ಹಾಗೂ ಸಿನಿಮಾಗಳ ಶೈಲಿಗೆ ವಾಲುತ್ತಿರುವುದು ದೊಡ್ಡ ದುರಂತವೆಂದು ಪುಂಡಿಕ್ಕಾಯವರು ವಿಷಾದವನ್ನು ವ್ಯಕ್ತಪಡಿಸುತ್ತಾರೆ. ಆದರೂ, ಕತ್ತಲಲ್ಲಿರುವ ಮಿಂಚುಹುಳದಂತೆ ಬಲಿಪ, ತೆಂಕಬೈಲು, ಹೊಳ್ಳ, ಕುರಿಯ ಹಾಗೂ ಬಲಿಪ ಪುತ್ರದ್ವಯರೇ ಮೊದಲಾದ ಬೆರಳೆಣಿಕೆಯ ಭಾಗವತರು ಭರವಸೆಯ ಹಾದಿಯಲ್ಲಿದ್ದಾರೆ ಎನ್ನುತ್ತಾರೆ ಕೃಷ್ಣಭಟ್ಟರು.

ಕೋಟೂರು ಕಾರ್ತಿಕೇಯ ಕಲಾ ನಿಲಯದವರು ಮಾನಪತ್ರವಿತ್ತು 1988ರಲ್ಲಿ ಸನ್ಮಾನಿಸಿದ್ದಾರೆ. ಮೂಡಬಿದ್ರೆಯ ಅಮರನಾಥ ಶೆಟ್ಟಿ, ಪದ್ರೆ ಸದ್ಗುರು ಯಕ್ಷಗಾನ ಕಲಾಸಂಘಗಳು ಶ್ರೀಯುತರನ್ನು ಗೌರವಿಸಿದ್ದರೆ, ಮಹಾರಾಷ್ಟ್ರ ಸರಕಾರದಿಂದ ಸ್ಮರಣಿಕೆಗಳನ್ನು ಪಡೆದಿದ್ದಾರೆ. ಢೆಲ್ಲಿ ಕನ್ನಡ ಸಂಘದಿಂದಲೂ ಸನ್ಮಾನಿತರಾಗಿದ್ದಾರೆ. ಪತ್ನಿ ಇಂದುಮತಿ, ಪುತ್ರಿಯರಾದ ಸ್ವರ್ಣ ಪ್ರಭಾ ಮತ್ತು ಶಾಂತಕುಮಾರಿಯವರಿಗೆ ವಿವಾಹ ಮಾಡಿದ್ದಾರೆ. ಆರ್ಥಿಕವಾಗಿ ದುಃಸ್ಥಿತಿಯಲ್ಲಿರುವ ಕೃಷ್ಣಭಟ್ಟರು, ಕೇವಲ ಹವ್ಯಾಸೀ ಪ್ರದರ್ಶನಗಳನ್ನಷ್ಟೇ ನಂಬಿಕೊಂಡು ಈ ಇಳಿವಯಸ್ಸಿನಲ್ಲೂ ಯಕ್ಷಗಾನ ಕಲೆಯ ಅಭಿಮಾನದಿಂದ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೆಂದು ಇವರಲ್ಲಿ ಲೋಪ-ದೋಷಗಳು ಇಲ್ಲವೆಂದಲ್ಲ! ಹಾಗಿದ್ದರೂ ಸಹಾ, ಅವರ ವಿಸ್ತೃತವಾದ ಕಲಾ ಜೀವನವನ್ನು ಗುರುತಿಸಿ, ಗೌರವಿಸಬೇಕಾದುದು ಆದ್ಯ ಕರ್ತವ್ಯವಾಗಿದೆ. ಇದು ಅವರ ಷಷ್ಟ್ಯಬ್ಧಿವರ್ಷ (2003) ದಲ್ಲಾದರೆ ಹೆಚ್ಚು ಅರ್ಥಪೂರ್ಣವಾಗಿರುತ್ತದೆ.

ಪರಂಪರೆಯ ಯಕ್ಷಗಾನ ಗೊಂಬೆಗಳ ತಯಾರಕ ಶ್ರೀಅಡೂರು ಶ್ರೀಧರರಾವ್

ಒಂದು ಕಲೆಯನ್ನು ಉಳಿಸಲು ಬೆಳೆಸಲು ಹಾಗೂ ಬೆಳಗಿಸಲು ಹಲವಾರು ದಾರಿಗಳಿವೆ. ಉದಾಹರಣೆಗೆ ಯಕ್ಷಗಾನವನ್ನೇ ತೆಗೆದುಕೊಳ್ಳಿ. ಮೌಲ್ಯಾಧಾರಿತ ಯಕ್ಷಗಾನ ಪ್ರದರ್ಶನಗಳನ್ನು ಏರ್ಪಡಿಸುವುದು, ಆ ನೆಲೆಯಲ್ಲಿ ತರಬೇತುಗೊಳಿಸುವುದು, ಯಕ್ಷಗಾನಕ್ಕೆ ಸಂಬಂಧಿಸಿದ ಕಮ್ಮಟ ಚಿಂತನ ಮಂಥನ ಇತ್ಯಾದಿ ಅಲ್ಲದೆ ತತ್ಸಂಬಂಧಿ ಪ್ರಕಾರಗಳಾದ ತಾಳ ಮದ್ದಳೆ, ಗೊಂಬೆಯಾಟ, ಯಕ್ಷ-ಭರತನಾಟ್ಯ, ಗಂಧರ್ವಗಾನ ತಾಳಮದ್ದಳೆ, ಅಷ್ಟಾವಧಾನ ಭಾಮಿನಿ, ಶ್ರೀ ಕೃಷ್ಣಾರ್ಪಣದಂತಹ ಪ್ರದರ್ಶನಗಳು, ಯಕ್ಷ-ನೃತ್ಯ-ಗಾನ ದೃಶ್ಯ ಕಾವ್ಯ ಪ್ರದರ್ಶನ ಮುಂತಾದವುಗಳು ಹಾಗೂ ಪ್ರಸಂಗ ರಚನೆ, ಲೇಖನಗಳ ಪ್ರಕಟಣೆ, ಸಂಶೋಧನೆ, ಚಿತ್ರ ಪ್ರದರ್ಶನ, ಕಲಾವಿದರಿಗೆ ಸನ್ಮಾನ, ದಾಖಲಾತಿ ಒಂದು ಕಡೆ ಆದರೆ, ಇನ್ನೊಂದು ಬದಿಯಲ್ಲಿ ಈಗಿನ ಪ್ರಬಲ ಮಾಧ್ಯಮಗಳಾದ ಆಕಾಶವಾಣಿ, ದೂರದರ್ಶನ ಇಂಟರ್‌ನೆಟ್‌ಗಳಲ್ಲಿ ಭಾಗವಹಿಸುವಿಕೆ, ಪರದೇಶ ಪರರಾಜ್ಯಗಳಲ್ಲಿ ಪ್ರದರ್ಶನ, ಯಕ್ಷಗೀತ ರೂಪಕ, ಏಕವ್ಯಕ್ತಿ ಯಕ್ಷನಾಟಕ, ಆಡಿಯೋ ವಿಡಿಯೋ, ಸಿಡಿ, ಸಿನಿಮಾ ಜಾಹಿರಾತುಗಳಲ್ಲಿ ಬಳಕೆ ಮುಂತಾದವುಗಳು ಆಗಿವೆ. ಈ ಎಲ್ಲದರ ಸಾಲಿಗೆ ಸೇರಿದ ಇನ್ನೊಂದು ವಿಧವೇ ಯಕ್ಷಗಾನ ಮುಖವರ್ಣಿಕಗಳಿರುವ ಮುಖವಾಡಗಳ ತಯಾರಿಕೆ. ಸಧ್ಯಕೆ ಗಂಭೀರವಾಗಿ ಈ ಹವ್ಯಾಸದಲ್ಲಿ ತೊಡಗಿರುವ ಏಕೈಕ ವ್ಯಕ್ತಿ ಎಂದರೆ (ತೆಂಕು ತಿಟ್ಟಿನಲ್ಲಿ) ಗಡಿನಾಡು ಕಾಸರಗೋಡಿನ ಶ್ರೀ ಅಡೂರು ಶ್ರೀಧರ್‌ರಾವ್ ಒಬ್ಬರು. ಹರ್ಕತ್ತಿಗೆ ಮೊಳ ನೈಯುವಂತೆ ಅಲ್ಲ ಇವರ ಕಾರ್ಯ. 100 200 ವರ್ಷಗಳಿಂದ ತೆಂಕುತಿಟ್ಟಿನಲ್ಲಿದ್ದ ಪ್ರಕೃತ ಮಾಸಿ ಹೋಗುತ್ತಿರುವ ಸ್ತ್ರೀವೇಷ, ಹಾಸ್ಯ, ಬಣ್ಣದವೇಷ, ಪಗಡಿ ಹಾಗೂ ರಾಜವೇಶಗಳ ಪರಂಪರರಾಗತವಾದ ಮುಖವರ್ಣಿಕೆಗಳ ವರ್ಣ ವೈಭವಗಳನ್ನು ಇವರು ರಚಿಸಿದ ಮುಖವಾಡಗಳಲ್ಲಿ ಕಾಣಬಹುದು. ಇದಕ್ಕೆಲ್ಲಾ ಮುಖ್ಯಕಾರಣ, ಇಂದಿನ ತಲೆಮಾರಿನ ಕಲಾವಿದರಿಗೆ ಮುಖವರ್ಣಿಕೆಗಳ ಬಗ್ಗೆ ಇರುವ ಅಜ್ಞಾನ ಹಾಗೂ ಕೆಲವರ ತಾತ್ಸಾರಗಳಿಂದಾಗಿ ತೆಂಕುತಿಟ್ಟಿನ ಅದ್ಭುತ ಮುಖವರ್ಣಿಕಾ ಕ್ರಮಗಳು ಕಾಲಾಂತರದಲ್ಲಿ ಕಾಲನ ಸೆರೆಗೆ ಸರಿದು ಹೋದಾವೇ? ಎಂಬ ಹೆದರಿಕೆ

ಹಾಗೂ ಅದನ್ನು ಉಳಿಸಿಕೊಳ್ಳಬೇಕೆಂಬ ತುಡಿತವೇ ಶ್ರೀಧರ ರಾಯರನ್ನು ಈ ಕೆಲಸಕ್ಕೆ ಪ್ರೇರೇಪಿಸಿದೆ. ಈ ಹುಚ್ಚೇ ಅವರಿಗೆ ಕಳೆದ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಯು ಹುಡುಕಿಕೊಂಡು ಬರಲು ಕಾರಣವಾಯಿತು ಎನ್ನಲಡ್ಡಿಯಲ್ಲ. ಗಡಿನಾಡಾದ ಕಾಸರಗೋಡಿನ ಆಡೂರು ಯಕ್ಷಗಾನ ಮೇಳಕ್ಕೆ ಇನ್ನೂರು ವರ್ಷಗಳ ಇತಿಹಾಸವಿದೆ. ಇದರ ಸಂಚಾಲಕರು ಶ್ರೀಧರರಾಯರ ಹಿರಿಯರಾಗಿದ್ದರು. ಮೇಳ ನಿಂತ ಮೇಲೆ ವೇಷ-ಭೂಷಣ ಕಿರೀಟಗಳೆಲ್ಲಾ ಅಟ್ಟ ಸೇರಿದವು. ಅವರ ಹಳೇ ಮನೆಗೆ ಬೆಂಕಿಬಿದ್ದು ಸುಟ್ಟು ಹೋಗುವ ಕೆಲವೇ ಕೆಲವು ದಿನಗಳ ಮೊದಲು ಆಕಸ್ಮತ್ತಾಗಿ ಅವುಗಳನ್ನೆಲ್ಲಾ ಅಟ್ಟದಿಂದ ಆರಿಸಿ ಕೆಳಗಿರಿಸಿದ ಕಾರಣ ಅವುಗಳೆಲ್ಲಾ ಉಳಿದುಕೊಂಡವು. ಮಸುಕಾಗಿದ್ದರೂ ಹಳೆಯ ವೇಷ ಭೂಷಣಗಳ ಅಂದ, ಆಯ, ಚಾಲ್ತಿಯಲ್ಲಿದ್ದ ವೇಷಭೂಷಣಗಳಲ್ಲಿ ಮಸುಕಾಗಿರುವಂತೆ ಕಂಡವು. ಬಣ್ಣಗಳಿಗೆ ಒಂದಕ್ಕೊಂದು ಸಂಬಂಧವೂ ಇರಲಿಲ್ಲ.

ತಕ್ಷಣ, ಎಚ್ಚೆತ್ತುಕೊಂಡ ಶ್ರೀಧರರಾಯರು, ಪರಂಪರಾಗತ ವೇಷ ಬಣ್ಣಗಾರಿಕೆಗಳ ಬಗ್ಗೆ ವ್ಯಾಪಕವಾದ ಅಧ್ಯಯನವನ್ನು ಕೈಗೊಂಡರು. ಹಳೇ ತಲೆಮಾರಿನ ವೇಷಧಾರಿಗಳು, ಭಾಗವತರು, ಮೇಳದ ಸಂಚಾಲಕರು, ಯಕ್ಷಗಾನಾಭಿಮಾನಿಗಳು ಹಾಗೂ ವೇಷಭೂಷಣ ತಯಾರಿಕೆದಾರರನ್ನು ಭೇಟಿ ಮಾಡಿದರು. ಆಯಾಯ ವೇಷಗಳ ಮುಖವರ್ಣಿಕೆಗಳಲ್ಲಿ ಯಾವ ಯಾವ ಗೆರೆಗಳಿರಬೇಕು? ಅವುಗಳ ಬಣ್ಣವಾವುವು? ಮುಖದ ಬಣ್ಣಗಳಿಗೊಪ್ಪುವ ಮೀಸೆ ಕಿರೀಟ ಅದಕ್ಕೆ ತಕ್ಕಂತೆ ಸೋಗೋಲಿ ಹಾಗೂ ಇತರ ಬಟ್ಟೆ ಹಾಗೂ ವೇಷಭೂಷಣಗಳು, ಯಕ್ಷಗಾನ ಪ್ರದರ್ಶನದ ಒಂದನೆ ಕಾಲದಲ್ಲಿ ಬಳಸಬೇಕಾದ ಬಣ್ಣಗಳು, ಅಂತೆಯೆ ಎರಡನೆ ಕಾಲ, ಮೂರನೆ ಕಾಲಗಳಲ್ಲಿ ಮಾಡಬೇಕಾದ ಬದಲಾವಣೆಗಳು, ಅದಕ್ಕೆ ತಕ್ಕಂತೆ ರಾಗ-ತಾಳಗಳು ವೇಷಧಾರಿಗಳ ಚಲನೆ - ಅರ್ಥಧಾರಿಕೆಗಳಲ್ಲಿ ಬಳಸಬೇಕಾದ ವೇಗದ ತೀವ್ರತೆ ಮುಂತಾದವುಗಳ ಬಗ್ಗೆ ತೀವ್ರ ತೆರನಾದ ಅಧ್ಯಯನ - ವ್ಯಾಸಂಗಗಳನ್ನು ಕೈಗೊಂಡರು. ಇದರ ಫಲವಾಗಿಯೇ ಈಗ ತನ್ನ 65ರ ಹರೆಯದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ "ಯಕ್ಷಗಾನದಲ್ಲಿ ರಂಗ ಪರಂಪರೆಯ ವರ್ಣ ವೈಭವ"ವೆಂಬ ವಿಚಾರದ ಮೇಲೆ ಡಿ.ಲಿಟ್‌ನ್ನೂ ಮಾಡಲು ಯತ್ನಿಸಿದ್ದಾರೆ.

ತಾಂತ್ರಿಕ ಪದವೀಧರರಾದ ಶ್ರೀಧರಾಯರು, ಕೈಹಚ್ಚಿದ್ದು ಮರದಿಂದ ಯಕ್ಷಗಾನ ಮುಖವರ್ಣಿಕೆಗಳ ತಯಾರಿಕೆಗೆ, ಅವರ ಮನೆಯೇ ಒಂದು ಕಾರ್ಯಾಗಾರವಾಯಿತು. ಯಕ್ಷಗಾನ ಕಲಾಕೇಂದ್ರ ಆಡೂರು ಇದರ ಸ್ಥಾಪನೆ. ಇದರ

ಮೂಲಕ ಹತ್ತು ಹಲವು ವಿವಿಧ ಮುಖವರ್ಣಿಕೆಗಳು, ಗೊಂಬೆಗಳು ತಯಾರಾದವು. ಯಕ್ಷಗಾನದ ಕಿರೀಟಗಳು ಸಾಂಪ್ರದಾಯಿಕವಾದ, ಸಣ್ಣಸಣ್ಣ ಗೊಂಬೆಗಳು ಅದಕ್ಕೆ ತಕ್ಕ ಕಿರೀಟ, ಪ್ರಮಾಣಬದ್ಧ ಅಳತೆಯ ಪರಿಕರಗಳು ಇತ್ಯಾದಿಗಳು ತಯಾರಾದವು. ಇದಕ್ಕೆ ಬೇಕಾಗುವ ಕುಂಬಳ (ಕುಂಬ್ಳು) ಮರವನ್ನು ಕಷ್ಟಪಟ್ಟು ಸಂಗ್ರಹಿಸತೊಡಗಿದರು. ವೇಷಗಳಿಗೆ ತಕ್ಕಂತೆ ಬಣ್ಣಗಳ ಲೇಪನ, ಗೆರೆಗಳು ಮುದ್ರೆಗಳು, ಕಣ್ಣಿನ ದೃಷ್ಟಿಗಳೇ ಮೊದಲಾದ ಸೂಕ್ಷ್ಮ ಕೆಲಸಗಳ ತಯಾರಿ ನಡೆಸಿದರು. ಉಲ್ಲನ್ ಮೀಸೆಯ ಉಪಯೋಗ, ಮರದ್ದೇ ಆದ ಮಣಿಗಳು, ವೆಲ್‌ವೆಟ್ ಬಟ್ಟೆಗಳು, ನವಿಲುಗರಿಗಳ ಪೋಣಿಕೆ ಮುಂತಾದವುಗಳು ಸಮರೋಪಾದಿಯಲ್ಲಿ ನಡೆದವು. ಅಂತೂ ಕಡೆಗೆ ಮುಖವಾಡಗಳು ರೆಡಿ. ರಾವಣ, ಕುಂಭಕರ್ಣ, ಶೂರ್ಪನಖಿ, ಶಿಶುಪಾಲ, ಅತಿಕಾಯ, ಕೃಷ್ಣ ಇಂದ್ರಜಿತು, ಹನುಮಂತ ಇವೇ ಮೊದಲಾದವುಗಳು. ಶ್ರೀಧರ ರಾಯರು ಸ್ವತಃ ತಯಾರಿಸಿದ ಮಹಿಷಾಸುರನ ಕಿರೀಟವನ್ನು ಧರಿಸಿದರೆ ತೇಟ್ ಮಹಿಷನೇ ಎದುರು ಬಂದಂತೆ ಭಾಸವಾಗುತ್ತದೆ. ಅವರಿಗೆ ಪ್ಯಾರ್‌ಸಾವೂರು ಹಾಗೂ ಮಾಂಗು ಸಹಾಯಕರಾಗಿ ದುಡಿಯುತ್ತಾರೆ. ಸುಳ್ಯದ ರೋಟರಿ ಕ್ಲಬ್‌ನ ಮೂಲಕ ವಿದೇಶಿ ಸಂಸ್ಥೆಗಳಿಗೆ ಇವರ ಮುಖವಾಡಗಳು ವಿನಿಮಯಗೊಂಡಿವೆ. ರಾಮನಗರದ ಜಾನಪದ ಲೋಕದಲ್ಲಿ, ಮೂಡಬಿದ್ರೆಯ ಮೋಹನ್ ಆಳ್ವರ ಹೆಲ್ತ್ ಸೆಂಟರ್‌ನಲ್ಲಿ ಇವರ ಯಕ್ಷಗಾನ ಮುಖವರ್ಣಿಕೆಗಳು ಜಾಗಗಳನ್ನು ಅಲಂಕರಿಸಿವೆ. ಹಲವಾರು ಯಕ್ಷಗಾನ, ಸಾಹಿತ್ಯ ಸಮ್ಮೇಳನಗಳಲ್ಲಿ ಇವರ ಪ್ರದರ್ಶನಗಳು ನಡೆದಿವೆ. ಸ್ಮರಣಿಕೆಗಳಿಗಾಗಿ ದಿನದಿಂದ ದಿನಕ್ಕೆ ಇವರಿಗೆ ಬರುವ ಬೇಡಿಕೆಗಳು ಹೆಚ್ಚಿವೆ. ಇನ್ನಷ್ಟು ಯಂತ್ರಗಳನ್ನು ಖರೀದಿಸಿದರೆ ಕಥಕ್ಕಳಿ ಭೂತರಾದನೆಗಳ ಸಾಮಗ್ರಿಗಳನ್ನು ತಯಾರಿಸಬಹುದು ಅನ್ನುತ್ತಾರೆ ಶ್ರೀಯುತರು ಯಕ್ಷಗಾನ ಮುಖವರ್ಣಿಕೆಗಳನ್ನು ಮಾಡುವುದರ ಜೊತೆಜೊತೆಗೆ ಹಲವಾರು ಯಕ್ಷಗಾನ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಭಸ್ಮಾಸುರ ಮೋಹಿನಿ, ಮಾಗಧ ವಧೆ, ಮಹಿಷಾಸುರ ಮರ್ಧಿನಿ, ಬಲಿಚಕ್ರವರ್ತಿ ಮೊದಲಾದ ವಿಡಿಯೋ ಕ್ಯಾಸೆಟ್‌ಗಳನ್ನು ತಯಾರಿಸಿ ಆರ್ತರಿಗೆ ಹಂಚಿದ್ದಾರೆ. ನಾಟ್ಯಾಭ್ಯಾಸದ ಕ್ಲಾಸನ್ನು ಸ್ವತಃ ನಡೆಸಿದ್ದಾರೆ. ಟಿ.ವಿ., ಆಕಾಶವಾಣಿಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಕರ್ನಾಟಕ, ಕೇರಳ,, ಮುಂಬೈ, ಚೆನ್ನೈಗಳಿಗೆ ಒಂದೂವರೆ ಸಾವಿರಕ್ಕಿಂತಲೂ ಹೆಚ್ಚು ಸಾಕ್ಷ್ಯ ಗೊಂಬೆಗಳನ್ನು

ತಯಾರಿಸಿ ವಿತರಿಸಿದ್ದಾರೆ.

ತನ್ನ ಕಾರ್ಯಾಗಾರದಲ್ಲಿ ಅತ್ಯಮೂಲ್ಯವಾದ ಯಕ್ಷಗಾನ ಪ್ರಸಂಗ ಪುಸ್ತಕಗಳ ಸಂಗ್ರಹ, ವಿವಿಧ ಅರ್ಥಗಾರಿಕೆಗಳ ವಿವರಗಳು, ಪೌರಾಣಿಕ ಕೃತಿ ವಿಮರ್ಶೆಗಳು, ಆಡಿಯೋ ವಿಡಿಯೋ ಧ್ವನಿ ಸುರುಳಿಗಳ ಬೃಹತ್ ಸಂಗ್ರಹವನ್ನೇ ಇಟ್ಟಿದ್ದಾರೆ.

ಶ್ರೀಧರರಾಯರ ಹೆಸರು ಜನಪ್ರಿಯವಾದಂತೆಲ್ಲ ಮಹನೀಯರನೇಕರು ಅವರ ಯಕ್ಷಗಾನ ಕಲಾಕೇಂದ್ರಕ್ಕೆ ಭೇಟಿಯನ್ನಿತ್ತು ಪ್ರೋತ್ಸಾಹಿಸಿದ್ದಾರೆ. ಅವರಲ್ಲಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಶ್ರೀ ವೀರಪ್ಪಮೋಯ್ಲಿ, ರುಕ್ಮಯ ಪೂಜಾರಿ, ಕಸಾಪದ ಅಧ್ಯಕ್ಷ ಶ್ರೀ ಹರಿಕೃಷ್ಣ ಪುನರೂರು ಮುಂತಾದವರು ಮುಖ್ಯರು. ಅಮೇರಿಕಾದ ಫೆನ್ಸಲ್ವೇನಿಯಾ ಯುನಿವರ್ಸಿಟಿಯ ಉಪನ್ಯಾಸಕರಾದ ಡಾ. ಫ್ರೀಮನ್ ಜೆ. ಆರ್ ಅವರು ಸ್ವತಃ ಇವರ ಕಾರ್ಯಾಗಾರವನ್ನು ಸಂದರ್ಶಿಸಿ ಮೆಚ್ಚಿ ವಿಡಿಯೋ ಕ್ಯಾಸೆಟ್‌ಗಳನ್ನು ಖರೀದಿಸಿ, ಪ್ರಶಂಸೆಯ ಮಾತನ್ನಾಡಿದ್ದಾರೆ. ಅಮೆರಿಕಾದ ಮತ್ತೊಬ್ಬ ತಜ್ಞೆ ಡಾ. ಮಾರ್ತಾ ಆಸ್ಟಿನ್ ಅವರೂ ಇವರ ಪ್ರದರ್ಶನವನ್ನು ಮೆಚ್ಚಿ ವೇಷ-ಭೂಷಣ-ಗೊಂಬೆಗಳ ಸಾಂಪ್ರದಾಯಿಕ ಕ್ರಮಗಳನ್ನು ಚಿತ್ರೀಕರಿಸಿಕೊಂಡಿದ್ದಾರೆ.

ಹೀಗೆಯೇ ತೆಂಕು ತಿಟ್ಟು ಯಕ್ಷಗಾನ ಪರಂಪರೆಯ ಉಳಿಕೆಗಾಗಿ ಹೆಣಗಾಡುತ್ತಾ ಇರುವ ಅಡೂರು ಶ್ರೀ ಶ್ರೀಧರ ರಾಯರ ಪ್ರಯತ್ನಗಳನ್ನು ಮೆಚ್ಚಿ ಐವತ್ತಕ್ಕಿಂತಲೂ ಹೆಚ್ಚು ಸಂಘ ಸಂಸ್ಥೆಗಳು ಗುರುತಿಸಿವೆ. ಸನ್ಮಾನಿಸಿವೆ. ಅವುಗಳಲ್ಲಿ ಮುಖ್ಯವಾಗಿ ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಮೈಸೂರು / ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಮೂಡಬಿದ್ರೆ / ಸಾಹಿತ್ಯ ಸಮ್ಮೇಳನ - ಕಾಸರಗೋಡು / ರೋಟರಿ ಕ್ಲಬ್ - ಸುಳ್ಯ / ಕರಾವಳಿ ಮಾಧ್ಯಮ ಬಳಗ - ಕಾಸರಗೋಡು / ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮಿಗಳು - ಎಡನೀರು / ಮರಾಠಿ ಸಮಾಜ ಸಂಘ - ಅಡೂರು / ಶ್ರೀ ಕೃಷ್ಣ ಕಲಾಸಂಘ ಮರ್ಕಂಜ - ಸುಳ್ಯ / ಕರ್ನಾಟಕ ಜಾನಪದ ಟ್ರಸ್ಟ್ - ರಾಮನಗರ/ ಕಾಸರಗೋಡು ಜಿಲ್ಲಾ ಜಾನಪದ - ಯಕ್ಷಗಾನ ಕಲಾ ಮೇಳ - ಕಾಸರಗೋಡು / ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಬೆಂಗಳೂರಿನ ದೇವಳ ಅಮೃತೋತ್ಸವದಲ್ಲಿ ಶ್ರೀಶ್ರೀ ಶೃಂಗೇರಿ ಜಗದ್ಗುರುಗಳಿಂದ ಸನ್ಮಾನ - ಮುಂತಾದವುಗಳು ಪ್ರಮುಖವಾಗಿವೆ.

ದಿ ಹಿಂದೂ ಇಂಗ್ಲಿಷ್ ದಿನಪತ್ರಿಕೆ, ಮಲೆಯಾಳದ ಮಲೆಯಾಳ ಮನೋರಮಾ ದಿನಪತ್ರಿಕೆಗಳು ವ್ಯಾಪಕವಾಗಿ ಶ್ರೀಯುತರ ಕಾರ್ಯದ ಬಗ್ಗೆ ಬರೆದುವು. ಅಲ್ಲದೆ ಉದಯವಾಣಿ, ತರಂಗ, ಸುಧಾ, ಶಿವಗಂಗೆ, ಅಂತರಂಗ, ಹೊಸ ದಿಗಂತಗಳೇ ಮೊದಲಾದ ದಿನಪತ್ರಿಕೆ ಸಾಪ್ತಾಹಿಕಗಳಲ್ಲೂ ಇವರ ಬಗ್ಗೆ ಪರಿಚಯ ಲೇಖನಗಳು ಪ್ರಕಟವಾಗಿವೆ. ಈಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 2001-2002ರ ಪ್ರಶಸ್ತಿಯ ಗರಿ ಶ್ರೀಧರ ರಾಯರ ಮುಡಿಯನ್ನು ಅಲಂಕರಿಸಿದೆ. ಇವರ ಯಕ್ಷಗಾನದ ಪರಂಪರೆಯನ್ನು ಉಳಿಸುವ ಹುಚ್ಚಿಗೆ ಈಗ ಮತ್ತೂ ಬಲ ಬಂದಂತಾಗಿದೆ.

ತೆಂಕು ತಿಟ್ಟಿನ ಏಕೈಕ ಯಕ್ಷಗಾನ ಗೊಂಬೆಯಾಟ ಮೇಳ

''ಶ್ರೀ ಗೋಪಾಲಕೃಷ್ಣ ಯಕ್ಷಗಾನ ಗೊಂಬೆಯಾಟ ಸಂಘ, ಕಾಸರಗೋಡು''

''ಗೊಂಬೆಯಾಟವಯ್ಯಾ ಈ ಜಗವೇ ಆ ದೇವನಾಡುವ ಗೊಂಬೆಯಾಟವಯ್ಯಾ''

ಎಂದು ತತ್ವಜ್ಞಾನಿ ಕವಿವರ್ಯರು ಹಾಡಿದ್ದಾರೆ. ಆದರೆ ಗೊಂಬೆಗಳ ಮೂಲಕ ಆ ದೇವನ ಲೀಲೆಗಳನ್ನು ಪೌರಾಣಿಕ ಕಥಾ ಪ್ರಸಂಗಗಳ ಮೂಲಕ ಪ್ರಚುರ ಪಡಿಸುವ ಕೆಲವಾರು ಗೊಂಬೆಯಾಟ ಮೇಳಗಳು ಕರ್ನಾಟಕದಲ್ಲಿವೆ. ಅದರಲ್ಲಿಯೂ ಕರ್ನಾಟಕದ ಶ್ರೀಮಂತ ಕಲೆಯಾದ ಯಕ್ಷಗಾನದ ಮೂಲಕ ಗೊಂಬೆಗಳನ್ನು ಕುಣಿಸಿ ಜನರಲ್ಲಿ ಸಾಂಸ್ಕೃತಿಕ ಪ್ರಜ್ಞೆಯನ್ನು ಮೂಡಿಸುವಲ್ಲಿ ಪ್ರಕೃತ ಎರಡೇ ಎರಡು ತಂಡಗಳು ಕಾರ್ಯನಿರತವಾಗಿವೆ. ಬಡಗು ತಿಟ್ಟಿನಲ್ಲಿ ಮನೆ ಮಾತಾಗಿರುವ ಕುಂದಾಪುರದ ಉಪ್ಪಿನಕುದ್ರು ಶ್ರೀ ಕೊಗ್ಗ ಕಾಮತರ ತಂಡ ಒಂದಾದರೆ, ಅಷ್ಟೇನೂ ಪ್ರಚಾರದಲ್ಲಿಲ್ಲದ, ತೆಂಕು ತಿಟ್ಟಿನ ಪ್ರದರ್ಶನವನ್ನು ಕೊಡುವ ಗಡಿನಾಡಾದ ಕಾಸರಗೋಡಿನ 'ಶ್ರೀ ಗೋಪಾಲಕೃಷ್ಣ ಯಕ್ಷಗಾನ ಗೊಂಬೆಯಾಟ ಸಂಘ'ದ ತಂಡವೂ ಇನ್ನೊಂದು.

ಕುಂಬಳೆಯ ಪಾರ್ತಿಸುಬ್ಬನು ಯಕ್ಷಗಾನ ಕ್ಷೇತ್ರದಲ್ಲಿ ಹಲವಾರು ಗಮನಾರ್ಹ ಕಾರ್ಯಗಳನ್ನೆಸಗಿ, ಕೃತಿಗಳನ್ನು ರಚಿಸಿ ಯಕ್ಷಗಾನ ಕ್ಷೇತ್ರದ ಆದಿಕವಿ ಎನಿಸಿದ್ದಾನೆ. ಪ್ರಸ್ತುತ ಅದೇ ಪಾರ್ತಿಸುಬ್ಬನ ವಂಶಸ್ಥರಾದ ದಿ. ಕೆ. ವೆಂಕಟ ಕೃಷ್ಣಯ್ಯನವರು ಕಾಸರಗೋಡಿನಲ್ಲಿ ಪ್ರಪ್ರಥಮವಾಗಿ 1981ರಲ್ಲಿ ತೆಂಕುತಿಟ್ಟಿನ ಯಕ್ಷಗಾನ ಗೊಂಬೆಗಳನ್ನು ತಯಾರಿಸಿ, ಜನರನ್ನು ತರಬೇತುಗೊಳಿಸಿ ಗೊಂಬೆಯಾಟದ ಪ್ರದರ್ಶನವನ್ನು ಏರ್ಪಡಿಸಿದರು. ಸ್ವತಃ ಕವಿಯೂ, ಲೇಖಕರೂ, ಸಂಪಾದಕರೂ ಆದ ವೆಂಕಟಕೃಷ್ಣಯ್ಯನವರು 'ಸಿರಿಗನ್ನಡ ಮುದ್ರಣಾಲಯ'ದಲ್ಲಿ ಉದ್ಯೋಗವನ್ನು ಮಾಡಿಕೊಂಡು, ತನ್ನ 'ಗೀತಾ ಪ್ರಕಾಶನ'ದ ಮೂಲಕ ಹತ್ತಾರು ಕೃತಿಗಳನ್ನೂ ಬೆಳಕಿಗೆ ತಂದಿದ್ದಾರೆ. ಹಲವು ಸನ್ಮಾನಗಳಿಗೂ ಪಾತ್ರರಾಗಿದ್ದಾರೆ. ಅಂಥಹ ವೆಂಕಟ ಕೃಷ್ಣಯ್ಯನವರ ಮಗನಾದ ಶ್ರೀ ಕೆ.ವಿ. ರಮೇಶರು ವಿದ್ವಾನ್ ಕಲ್ಲಕಟ್ಟ ಲಕ್ಷ್ಮೀನಾರಾಯಣಯ್ಯ ಹಾಗೂ ತನ್ನ ತಂದೆಯವರ ಮಾರ್ಗದರ್ಶನದಲ್ಲಿ ಯಕ್ಷಗಾನ ಗೊಂಬೆಯಾಟ ಸಂಘವನ್ನೇ ಹುಟ್ಟು ಹಾಕಿದರು.

ಈ ಉತ್ಸಾಹಿ ಯುವ ತಂಡ ಗೊಂಬೆಗಳಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿದೆ. ಗೊಂಬೆ ನಿಯಂತ್ರಣದಲ್ಲಿ ಹಗ್ಗಗಳ ಬದಲಿಗೆ ಸಣ್ಣ ತುಂಡುಗಳನ್ನು ಉಪಯೋಗಿಸಿ, 'ಶಲಾಕಾಗೊಂಬೆ'ಗಳನ್ನು ಕುಣಿಸುತ್ತಿದ್ದಾರೆ. 1992ರಲ್ಲಿ ತನ್ನ ಸಂಘದ ದಶಮಾನೋತ್ಸವವನ್ನೂ ಆಚರಿಸಿದೆ. ಆ ಸಂದರ್ಭದಲ್ಲಿ 'ಗೊಂಬೆಯಾಟವಯ್ಯಾ' ಎಂಬ ಜಾನಪದ ಕೃತಿಯನ್ನೂ ಪ್ರಕಟಿಸಿದೆ.

ಕೇರಳ - ಕರ್ನಾಟಕದಾದ್ಯಂತ ಸಾವಿರಾರು ಕಾರ್ಯಕ್ರಮಗಳನ್ನು ಅವಿರತವಾಗಿ ನೀಡುತ್ತಾ ಬಂದ ಇವರಿಗೆ ಹೆಡೆಕಡೆಗೆ ಯಶಸ್ಸು, ಬಹುಮಾನ, ಪ್ರಶಸ್ತಿ ಸನ್ಮಾನಗಳೂ ಒದಗಿ ಬಂದವು. 1998ರಲ್ಲಿ ಆಸ್ಟ್ರೇಲಿಯಾ ಮತ್ತು ಡೆನ್ಮಾರ್ಕಿನ ರೋಟ್ರಾಕ್ಟ್ ಕ್ಲಬ್ಬಿನ ಸದಸ್ಯರೆದುರಿಗೆ ಗೊಂಬೆಯಾಟವನ್ನು ಪ್ರದರ್ಶಿಸಿ, ವಿದೇಶಿಯರಿಗೂ ನಮ್ಮ ಸಂಸ್ಕೃತಿಯ ಕಂಪನ್ನು ಹರಡುವಲ್ಲಿ ಯಶಸ್ವಿಯಾಗಿದ್ದಾರೆ. ಬೆಂಗಳೂರು, ತಿರುವನಂತಪುರ ದೂರದರ್ಶನಗಳಲ್ಲಿ ಕಾರ್ಯಕ್ರಮಗಳು ಪ್ರಸಾರವಾಗಿವೆ. ಹೀಗೆ, ಕಳೆದ ವರ್ಷಗಳಲ್ಲಿ 1500ಕ್ಕಿಂತಲೂ ಹೆಚ್ಚು ಪ್ರಶರ್ದನಗಳನ್ನು ನೀಡಿವೆ. ಮಲೆಯಾಳ ಭಾಷೆಯಲ್ಲೂ ಪ್ರದರ್ಶನಗಳನ್ನು ನೀಡಿದ್ದಾರೆ. ಲಂಕಾದಹನ, ನರಕಾಸುರ ವಧೆ, ಇಂದ್ರಜಿತು ಕಳಗ, ಪಂಚವಟಿ, ಗರುಡ ಗರ್ವಭಂಗ, ಸುದರ್ಶನ ವಿಜಯ, ಶ್ರೀದೇವಿ ಮಹಾತ್ಮೆ ಖರಾಸುರ ವಧೆಯೇ ಮೊದಲಾದ ಪ್ರಮುಖ ಪೌರಾಣಿಕ ಕಥಾನಕಗಳಲ್ಲಿ ಕಿರು ವೇದಿಕೆಯ ಮೇಲೆ ಈ ಗೊಂಬೆಯಕ್ಷರು ಮಿಂಚಿದ್ದಾರೆ. ಮೂರು ಅಡಿ ಎತ್ತರ, ಏಳು ಅಡಿ ಅಗಲದ ರಂಗಸ್ಥಳ ಹಿನ್ನೆಲೆಯಲ್ಲಿ ಹಿಮ್ಮೇಳ, ಮುಮ್ಮೇಳ ತಾಳಕ್ಕೆ ಸರಿಯಾಗಿ ಕುಣಿಯುತ್ತಾ, ಅಭಿನಯಿಸುತ್ತಾ ಮಾತಾಡುವ ಚಂದವನ್ನು ನೋಡುವುದೇ ಒಂದು ಸೊಗಸು.

1998ರಲ್ಲಿ ಪಾಕಿಸ್ತಾನದ ಲಾಹೋರಿನಲ್ಲಿ ರಮೇಶರು ಬೊಂಬೆಗಳನ್ನು ಕುಣಿಸಿ ಬಂದಿದ್ದಾರೆ. 32 ದೇಶಗಳಿಂದ 100ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದ ಅಂತರಾಷ್ಟ್ರೀಯ ಬೊಂಬೆಯಾಟದ ಈ ಉತ್ಸವದಲ್ಲಿ ಇವರು ಪ್ರದರ್ಶಿಸಿದ "ಶ್ರೀದೇವಿ ಮಹಾತ್ಮೆ"ಯ ಮಹಿಷಾಸುರ, ಸಿಂಹ ಮತ್ತು ಶ್ರೀ ದೇವಿಯರದ್ದೆ ಪ್ರೇಕ್ಷಕರಿಗೆ ಕುತೂಹಲದ ವಿಷಯಗಳಾಗಿದ್ದವು. ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆ ಹಾಗೂ ಬಿಜೆಪಿಯ ಶ್ರೀ ಎಡಿಯೂರಪ್ಪ ಅವರು ಸಹಾಯ ಮಾಡಿದುದನ್ನು ಬಿಟ್ಟರೆ, ಕೈಕೊಟ್ಟ ಘನ ಸರಕಾರಗಳಿಂದಾಗಿ (ಕರ್ನಾಟಕ, ಕೇರಳ) ಶ್ರೀ ರಮೇಶರ ಕೈಯಿಂದ ರೂ. 80,000 ಜಾರಿದವು. ಆದರೂ ಪಾಕಿಸ್ತಾನದ ಪ್ರವಾಸದಿಂದ ಉತ್ತೇಜಿತರಾದ ಶ್ರೀಯುತರು ಮುಂಬರುವ ದಿನಗಳಲ್ಲಿ ಜಪಾನ್, ಶ್ರೀಲಂಕಾ, ಫ್ರಾನ್ಸ್

ಆಸ್ಟ್ರೇಲಿಯಾಗಳಿಗೆ ಪ್ರವಾಸದ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅಲ್ಲದೆ, ಈ ವರ್ಷ 'ವಿಂಶತಿ ಉತ್ಸವವನ್ನು ಆಚರಿಸುವ ಸಿದ್ಧತೆಯನ್ನು ನಡೆಸಿದ್ದು, ಎರಡು ಕೃತಿಗಳ ಪ್ರಕಟಣೆ, ವಿಚಾರಗೋಷ್ಠಿ, ಯಕ್ಷಗಾನ ಪ್ರದರ್ಶನಗಳೇ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.

ಈ ಗೊಂಬೆಯಾಟ ತಂಡದ ಬೆನ್ನುಲುಬಾಗಿ ಕೆ.ವಿ. ರಮೇಶ್‌ರೊಂದಿಗೆ ಎ. ಶ್ರೀನಾಥ್, ಶ್ರೀವತ್ಸ ಕೆ.ವಿ, ಪಿ.ಕೆ. ವೇಣುಗೋಪಾಲ್ ಬೆಂಗಳೂರು, ಓಂಪ್ರಕಾಶ್ ಕೆ.ವಿ. ಅನಿತಾ ಮತ್ತು ಸುದರ್ಶನ ಕೆ.ವಿ.ಯವರಿದ್ದಾರೆ. ಶ್ರೀ ಕೊಗ್ಗ ಕಾಮತ್, ಕಂಬಾರು ರಾಮಚಂದ್ರ ರಾವ್, ಆಡ್ಕ ಗೋಪಾಲಕೃಷ್ಣ ಭಟ್, ಚಂದ್ರಗಿರಿ ಅಂಬು, ಕಿರಿಮಂಜೇಶ್ವರ ಮಹಾಬಲ ಶೇಟ್ ಮುಂತಾದ ಹಿರಿಯ ಕಲಾವಿದ.ರು ನೀಡಿದ ಸಲಹೆ, ಸಹಾಯ, ಸಹಕಾರಗಳೇ ಈ ಸಂಸ್ಥೆಗೆ ಮಾರ್ಗದರ್ಶಿ ಎನ್ನುತ್ತಾರೆ ಕೆ.ವಿ. ರಮೇಶರು.

ತೆಳ್ಳನೆಯ ಮರದ ಹಿಡಿಕೆಯೊಂದರ ಮೂಲಕ ನಿಯಂತ್ರಿಸುವ ಸೂತ್ರಗಳು ಬೊಂಬೆಗಳಿಗೆ ಬಂಧಿಸಲ್ಪಡುತ್ತವೆ. ಸೂತ್ರಧಾರನ ಕೈಚಳಕಕ್ಕೆ ಹೊಂದಿಕೊಂಡು ಬೊಂಬೆಗಳ ಚಲನೆ. ಇದು ಸೂತ್ರದ ಬೊಂಬೆ ಸಪೂರದ ಕಬ್ಬಿಣದ ಕಡ್ಡಿಗಳಿಂದ ಬಂಧಿಸಿಕೊಂಡು, ಬೊಂಬೆಗಳ ಕಾಲಿನ ಬುಡದಲ್ಲಿ ನಿಯಂತ್ರಿಸಲ್ಪಡುವಂತಾದ್ದು 'ಶಲಾಕಾ ಬೊಂಬೆಗಳು'. ಶಲಕಾ ಬೊಂಬೆಗಳು ಕೆ.ವಿ. ರಮೇಶರ ಆಳ ಅಧ್ಯಯನದ ಫಲ ಮತ್ತು ಆವಿಷ್ಕಾರ (1989). ಅಲ್ಲದೇ ಇದು ಭಾರತದಲ್ಲೇ ಪ್ರಥಮವೂ ಸಹಾ. ಸೂತ್ರದ ಬೊಂಬೆಗಳಿಂದ ಶಲಾಕಾ ಬೊಂಬೆಗಳ ಪ್ರದರ್ಶನ ಹೆಚ್ಚು ಯಶಸ್ವೀ ಹಾಗೂ ಪರಿಣಾಮಕಾರಿ ಎನ್ನುತ್ತಾರೆ ಶ್ರೀ ಕೆ.ವಿ. ರಮೇಶರು. ಗೊಂಬೆಗಳಿಗೆ ಹಗುರವಾಗಿರುವ 'ಹಾಲೆ ಮರ'ವನ್ನು ಉಪಯೋಗಿಸುತ್ತಾರೆ. ಈ ಮರದ ಭಾರ ಕಡಿಮೆಯಾಗಿದ್ದು ಬೇಕಾದಂತೆ ಕೆತ್ತಲು ಬರುತ್ತದೆ. ಯಕ್ಷಗಾನ ವಸ್ತ್ರಾಲಂಕಾರಗಳಿಂದ ಸಜ್ಜುಗೊಂಡ ಗೊಂಬೆಗಳ ಎತ್ತರ 2ರಿಂದ 21/2 ಅಡಿ. ಒಂದು ಗೊಂಬೆ ತಯಾರಿಕೆಗೆ ರೂ. 1,000ದಿಂದ 1,500ರವರೆಗೆ ವೆಚ್ಚ ಬರುತ್ತದೆ. ಈ ಸಂಘದ ಸಂಚಾಲಕರಾದ ಕೆ.ವಿ. ರಮೇಶರು ಸ್ವತಃ ಯಕ್ಷಗಾನ ಕಲಾವಿದರು. ಶ್ರೀ ಉಪ್ಪಳ ಕೃಷ್ಣ ಮಾಸ್ತರರಿಂದ ನಾಟ್ಯ ಕಲಿಕೆ, ವಿಖ್ಯಾತ ಬಣ್ಣದ ವೇಷಧಾರಿ ಚಂದ್ರಗಿರಿ ಅಂಬು ಅವರಿಂದ ರಾಕ್ಷಸ ವೇಶದ ನಡೆ ಮತ್ತು ಬಣ್ಣಗಾರಿಕೆಯನ್ನು ಕಲಿತಿರುವುದರಿಂದ ರಮೇಶರು ಕುಣಿಸುವ ಗೊಂಬೆಗಳು ನಮ್ಮನ್ನು ಯಕ್ಷಲೋಕದಿಂದ ವಿಮುಖಗೊಳಿಸುವುದಿಲ್ಲ.

ಈಗ ಕೆಲವು ಪ್ರಮುಖ ಪತ್ರಿಕೆಗಳು ಈ ಗೊಂಬೆ ಮೇಳದ ಬಗ್ಗೆ ಏನೆಂದಿದ್ದಾರೆ

ಎಂಬುದನ್ನು ಅವಲೋಕಿಸುವಾ.

1. Children playing with puppets and dolls are a common sight. But it rarely that children use their puppets to perform Yakshagana. One Gopalkrishna Yakshagana in Kasaragod.

- 29-10-984 - Deccan Herald.

2. During day time, they are students perusing their studies in different classes and places. But if class is an order, at the fall of night, they join hands to present lively puppet show. You wont believe that its an all teenagers so, until you peep behind the curtains.

- 18-5-1985 - CURRENT.

3. ಬೆರಳುಗಳಲ್ಲಿನ ನೂಲು ಗಳಿಂದ ಗೊಂಬೆಗಳಿಗೆ ಜೀವವನ್ನು ತುಂಬಿ, ಅಭಿನಯದ ಸಮ್ಮೋಹನ ಕ್ಷಣ ಸೃಷ್ಟಿಸುತ್ತಾನೆ ರಮೇಶನೆಂಬ ಹೆಸರಿನ 24ರ ಹರೆಯದಾತ. ಗೊಂಬೆಯಾಟದಲ್ಲಿ ದಕ್ಷಿಣ ಕನ್ನಡ ಹಾಗೂ ಬಡಗು ಕೇರಳದ ಅಭಿಮಾನಾರ್ಹ ವ್ಯಕ್ತಿಯಾಗಿದ್ದಾನೆ, ಈ ಯುವಕ. ಕಾಸರಗೋಡಿನ ಮಲೆಯಾಳ, ಕರ್ನಾಟಕ, ತುಳು ಭಾಷಾಸಂಕಲನದ ಸಂಸ್ಕಾರದ ಪ್ರತಿಫಲನವಾಗಿದೆ ರಮೇಶನ ಈ "ಶ್ರೀಗೋಪಾಲಕೃಷ್ಣ ಯಕ್ಷಗಾನ ಗೋಂಬೆಯಾಟ ಸಂಘ".

– 12-3-1989 – ಮಾತೃಭೂಮಿ (ಮಲೆಯಾಳ ದಿನ ಪತ್ರಿಕೆ)

04-09-1984 – ವಾರಪತ್ರಿಕೆ..

"ಅಂಗಾಂಗಗಳಲ್ಲಿ ಚುರುಕು ಚಾಲನೆಯಿರುವ ಜೀವಂತವಾಗಿರುವಂತೆ ಕಾಣುವ ಈ ಪುಟಾಣಿ ಆಟಿಕೆಗಳು ಮರದ ಗೊಂಬೆಗಳೆಂದರೆ ನಂಬಲಾದೀತೆ? ಇಲ್ಲಿ ಅಕ್ಷರಶಃ ಮರದಿಂದ ತಯಾರಿಸಿದ ಯಕ್ಷಗಾನ ಗೊಂಬೆಗಳು ತಮ್ಮ ಲಾಲಿತ್ಯಮಯ ಹಾಗೂ ಶಾಸ್ತ್ರೀಯ ನರ್ತನದಿಂದ ಈ ನಿರ್ಜೀವ ವಸ್ತುಗಳು ಅನೇಕ ಹೃದಯಗಳನ್ನು ಸೂರೆಗೊಂಡಿವೆ.

ಕನ್ನಡಿಗರ ಪ್ರತಿಭೆಗೆ ಬೆಲೆಯೇ ಇಲ್ಲದಂತಾಗಿರುವ ಕಾಸರಗೋಡಿನಲ್ಲಿ ಹವ್ಯಾಸೀ ಯಕ್ಷಗಾನ ಗೊಂಬೆಯಾಟ ಸಂಘವೊಂದು ಈ ಗೊಂಬೆಗಳಿಗೆ ಜೀವ ಕೊಟ್ಟಿವೆ.

ಜಾನಪದ ಕಲೆಗಳು ನಶಿಸುತ್ತಿರುವ ಈ ದಿನಗಳಲ್ಲಿ ಇಂತಹ ಪ್ರಯತ್ನಗಳು ಪ್ರಶಂಸನೀಯ".

ಶ್ರೀ ರಮೇಶರು ಚಿಕ್ಕದಾದ ಯಕ್ಷಗಾನ ಗೊಂಬೆಗಳನ್ನು ಮಾರಾಟಕ್ಕಾಗಿಯೂ ತಯಾರು ಮಾಡುವ ಯೋಚನೆಯಲ್ಲಿದ್ದಾರೆ. ಅಲ್ಲದೆ ಗೊಂಬೆಯಾಟದಲ್ಲಿ ಬಡಗಿನ ಕೆಲವು ವೈವಿಧ್ಯತೆಗಳನ್ನು ಅಳವಡಿಸುವ ಪ್ರಯತ್ನದಲ್ಲಿದ್ದಾರೆ. ಗೊಂಬೆಗಳ ತಯಾರಿಯಲ್ಲಿಯೂ ಕೆಲವು ಬದಲಾವಣೆಗಳನ್ನು ಮಾಡುತ್ತಿದ್ದಾರೆ. ವಿಂಶತಿ ಉತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂದಿದ್ದಾರೆ. ಹೀಗೇಯೇ ಹತ್ತು ಹಲವು ಕ್ರಿಯಾತ್ಮಕವಾದ ಯೋಜನೆ - ಯೋಚನೆಗಳನ್ನು ಹೊತ್ತಿರುವ ಶ್ರೀ ಕೆ.ವಿ. ರಮೇಶರ ಏಕೈಕ ತೆಂಕುತಿಟ್ಟಿನ ಯಕ್ಷಗಾನ ಗೊಂಬೆಯಾಟ ಮೇಳದೊಂದಿಗೆ ನಾವೆಲ್ಲ ಕೈ ಜೋಡಿಸೋಣ. ನಮ್ಮ ನಮ್ಮ ಊರುಗಳಲ್ಲಿ, ಕ್ಷೇತ್ರಗಳಲ್ಲಿ ಈ ಗೊಂಬೆಯಾಟವನ್ನು ಏರ್ಪಡಿಸಿ, ನಶಿಸುತ್ತಿರುವ ಹಾಗೂ ಬಹು ಅಪರೂಪವಾದ ಈ ಜಾನಪದ ಕಲೆಯನ್ನು ಉಳಿಸುವಲ್ಲಿ ಮತ್ತು ಬೆಳೆಸುವಲ್ಲಿ ಕ್ರಿಯಾತ್ಮಕವಾಗಿ ಸ್ಪಂದಿಸೋಣ. ಅವರ ವಿಳಾಸ:

Sri Gopalkrishna Yakshgana Bombeyata Sangha, (Near Sri Bhagavathi Temple), P.o. Pilikunje, Kasaragod - 67121 Kerala State, (India) Ph : 91499-423927

E-mail : gk-puppettroup@hotmail.com.

ಪ್ರೊ. ಕಾಳೇಗೌಡ ನಾಗವಾರ – ಸಂದರ್ಶನ

1. ತಾವು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಹಿನ್ನೆಲೆ ಏನು?

ನಾನು ಮೂಲತಃ ಸೃಜನಶೀಲ ಲೇಖಕ. ವಿದ್ಯಾರ್ಥಿ ದಿಸೆಯಿಂದಲೂ ಜಾನಪದದ ಬಗ್ಗೆ ತೀವ್ರವಾಗಿ ಹಚ್ಚಿಕೊಂಡು ದುಡಿದವನು. ಶಿಷ್ಟ ಸಾಹಿತ್ಯಕ್ಕೆ ಜಾನಪದವು ಅನೇಕ ರೀತಿಗಳಿಂದ ವಿಶಿಷ್ಟತೆ ಮತ್ತು ವೈಶಾಲ್ಯವನ್ನು ತುಂಬಬಲ್ಲುದೆಂದು ನಾನು ನಂಬಿದ್ದೇನೆ. ನನ್ನ ಆಸಕ್ತಿ ಮತ್ತು ದುಡಿಮೆಯ ಕ್ರಮವನ್ನು ಅರಿತುಕೊಂಡಿದ್ದ ನನ್ನ ಹಿತೈಷಿಗಳೂ, ಸಂಬಂಧ ಪಟ್ಟ ಇಲಾಖೆಯ ವಿವೇಚನಾಶೀಲ ಸಚಿವರೂ ಆಗಿದ್ದ ಹಿರಿಯ ಗೆಳೆಯರು ಹದಿನೈದು ವರ್ಷಗಳ ಹಿಂದೆಯೇ ನನ್ನನ್ನು ಅಕಾಡೆಮಿಯ ಅಧ್ಯಕ್ಷನನ್ನಾಗಿ ನೇಮಿಸಲು ಸಿದ್ಧರಿದ್ದರು. ಪ್ರೊ. ಜಿ. ಶಂ.ಪಾ. ಅವರಂಥ ವಿಶ್ವವಿಖ್ಯಾತ ಪ್ರಾಧ್ಯಾಪಕರಿಗಿಂತ ಮೊದಲೇ ನಾನು ಅಧ್ಯಕ್ಷನಾಗುವುದು ನನಗೆ ಸುತಾರಾಂ ಒಪ್ಪಿಗೆ ಇರಲಿಲ್ಲ. 1998 ಜೂನ್ ತಿಂಗಳಿನಲ್ಲಿ ಅದೇ ಹಿತೈಷಿಗಳ ಹಾರೈಕೆಯಂತೆ ನಾನು ಅಧ್ಯಕ್ಷನಾಗಿ ನೇಮಕಗೊಂಡೆ. ನನ್ನ ಹದಿಹರೆಯದ ದಿನಗಳಿಂದಲೂ ನಾನು ಸಾರ್ವಜನಿಕ ಬದುಕಿನ ಸ್ವಚ್ಛತೆಗಾಗಿ, ಸಮೃದ್ಧಿಗಾಗಿ ಹಂಬಲಿಸುವವನು. ಹೀಗಾಗಿ ನನಗೆ ಗೆಳೆಯರು ಮತ್ತು ಹಿತೈಷಿಗಳು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇದು ನನ್ನ ಸೌಭಾಗ್ಯವಾಗಿದೆ.

2. ಅಧ್ಯಕ್ಷರಾಗುವ ಮೊದಲು ಯಕ್ಷಗಾನದ ಬಗ್ಗೆ ತಾವು ಕಂಡ ಕನಸುಗಳು ನನಸಾಗಿವೆಯೇ?

ಸಂಪೂರ್ಣ ಯಕ್ಷಗಾನದ ಕಲಾವಿದರ ಆತ್ಮಕಥೆಗಳ (ನೋವು ನಲಿವು) ಹಲವಾರು ಸಂಪುಟಗಳ ಪ್ರಕಾಶನ ಸಾಧ್ಯವಾಗಿಲ್ಲ. ಯಕ್ಷಗಾನದ ಅಧ್ಯಯನಶೀಲ ಕಮ್ಮಟಗಳನ್ನು ನಡೆಸಿ, ಅದರ ಸಂಪೂರ್ಣ ಅಂತಃಸತ್ವಗಳನ್ನೊಳಗೊಂಡ ಒಂದು ಪ್ರಾತಿನಿಧಿಕ ತಂಡ ಕಟ್ಟುವುದು ಕನಸಾಗೇ ಉಳಿಯಿತು. ನಿಜವಾದ ಯಕ್ಷಗಾನವು ನೃತ್ಯ - ಸಂಗೀತ-ಸಾಹಿತ್ಯದ ಸಂಗಮವಾಗಿದೆ. ಮೂಲ ಜಾನಪದದ ಸತ್ವ ಇದು. ಇಲ್ಲಿ ಆಕಾಶದ ಕೆಳಗಿನ ಸರ್ವಸಂಗತಿಗಳೂ ಚರ್ಚೆಗೆ ಒಳಪಡುತ್ತವೆ. ಅಸಂಖ್ಯಾತ

ಪ್ರತಿಭಾನ್ವಿತರು ಈ ಕ್ಷೇತ್ರದಲ್ಲಿ ಜೀವ ತೆಯ್ದಿದ್ದಾರೆ. ಅವರನ್ನೆಲ್ಲ ಒಂದೆಡೆ ಕಲೆಹಾಕಬೇಕು, ಗೌರವಿಸಬೇಕು ಹಾಗೂ ಅವರ ಅನುಭವ, ಆ ಕ್ಷೇತ್ರದಲ್ಲಿನ ಆಕಾಂಕ್ಷೆ ಕುರಿತು ಚರ್ಚಿಸಬೇಕು ಇತ್ಯಾದಿಯಾದ ಕನಸುಗಳಿದ್ದುವು. ಪ್ರೊ. ವಿವೇಕ ರೈ ಅವರಂತಹ ಸಮರ್ಥ ವಿದ್ವಾಂಸರು ಮತ್ತು ಇತರ ಹಲವಾರು ಆಸಕ್ತರ ತುಂಬು ಮನಸ್ಸಿನ ನೆರವಿನಿಂದ ಇವೆಲ್ಲ ನನಸಾಗಲು ಸಾಧ್ಯವಾಯಿತು.

3. ಯಕ್ಷಗಾನದ ಬಗ್ಗೆ ಹಿಂದಿನ ಅಧ್ಯಕ್ಷರುಗಳಿಗಿಂತ ತಾವು ಹೆಚ್ಚು ಕೆಲಸ ಮಾಡಿದ್ದೀರಿ ಎಂದು ಜನರು ಹೇಳುತ್ತಿದ್ದಾರೆ. ತಮ್ಮ ಮುಖ್ಯ ಸಾಧನೆಗಳು ಯಾವುವು?

ಹಿಂದಿನ ಇಬ್ಬರು ಹಿರಿಯ ಅಧ್ಯಕ್ಷರುಗಳ ಅವಧಿಯಲ್ಲಿ ಸಹ ನಾನು ಆರು ವರ್ಷಗಳ ಕಾಲ ಸದಸ್ಯನಾಗಿದ್ದೆ. ಯಕ್ಷಗಾನವನ್ನು ಕಡೆಗಣಿಸಲಾಗುತ್ತಿದೆಯೆಂಬ ಮಾತುಗಳನ್ನು ಉದ್ದಕ್ಕೂ ನಾನು ಕೇಳಿದ್ದೆ. ಆದರೆ ನಾನು ಹುಟ್ಟುಹಿಡಿದವನ ರೀತಿಯಲ್ಲಿ ಹಗಲೂ ರಾತ್ರಿ ದುಡಿದು ಸಮಾನ ಮನಸ್ಕರನ್ನೆಲ್ಲ ಒಂದುಗೂಡಿಸಲು ಕಿಂಚಿತ್ತಾದರೂ ಸಾಧ್ಯವಾಯಿತು. ಜೇಬಿನ ತುಂಬಾ ಹಣ ಇದ್ದವರಿಗಿಂತ ತುಂಬು ಮನಸ್ಸು ಹಾಗೂ ಮುಕ್ತ ಚಿಂತನೆಯ ಸಂಘಟಕರು ಮುಖ್ಯ ಎಂಬ ಸತ್ಯ ಮನದಟ್ಟಾಯಿತು.

1. ಕರಾವಳಿ ಯಕ್ಷಗಾನದ ಸಮ್ಮೇಳನ ಮಂಗಳೂರು.
2. ಕಲಾವಿದರ ಒಡನಾಟ ಹಾಗೂ ವೈದ್ಯಕೀಯನೆರವು ಸ್ಪಂದನ.
3. ಉ.ಕ. ಜಿಲ್ಲೆಯಲ್ಲಿ ಹಲವಾರು ಕಾರ್ಯಕ್ರಮಗಳು (ಅಂಕೋಲ/ಹೊನ್ನಾವರ/ಕಾಸರಕೋಡು/ಗುಂಡುಬಾಳ), ಜಿಲ್ಲಾ ಮಟ್ಟದ ಸಮ್ಮೇಳನ (ಶಿರಸಿ) ಸಿದ್ಧತೆಗೊಂಡು ನಡೆಸಲಾಗಿಲ್ಲ.
4. ಹೊಸ್ತೋಟ ಮಂಜುನಾಥ ಭಾಗವತರ ಸಂಪೂರ್ಣ ಆತ್ಮಕಥೆ 'ಯಕ್ಷಗಾನದ ನೆನಪುಗಳು' ಎಂದು ಪ್ರಕಟಿಸಿದ್ದೇವೆ.

4. ಹೊಸ ಅಧ್ಯಕ್ಷರು ಮತ್ತು ಸದಸ್ಯರಿಗೆ ತಮ್ಮ ಕಿವಿಮಾತೇನು?

ಹೊಸತಂಡದಲ್ಲಿ ಹೆಚ್ಚು ದುಡಿದವರಿದ್ದಾರೆ. ಆಸಕ್ತರಿದ್ದಾರೆ. ಈ ತನಕ ಸದಸ್ಯರಾಗದಿರುವ ಗೆಳೆಯರಿದ್ದಾರೆ. ಇದೆಲ್ಲಾ ಸಂತೋಷದ ಸಂಗತಿಯಾಗಿದೆ. ಸ್ನೇಹ, ವಿಶ್ವಾಸ, ಅಪಾರ ಕಳಕಳಿ, ಮುನ್ನೋಟ ಮತ್ತು ಸಂಘಟನಾ ಶಕ್ತಿಗಳು ಮಾತ್ರ ನಮ್ಮನ್ನು ಜೀವಂತವಾಗಿಡಬಲ್ಲವು. ಕೇವಲ ಸಣ್ಣಪುಟ್ಟ ಸೌಲಭ್ಯಗಳ ಆಸೆ ಮಾತ್ರ ಇಟ್ಟುಕೊಂಡು, ನಡೆದಷ್ಟೇ ಸಾಕು ಎಂಬ ಉದಾಸೀನವಾಗಲೀ, ಹಣವಿಲ್ಲ ಎಂಬ ಗೊಣಗಾಟವಾಗಲಿ

ಸಲ್ಲದು. ಪಾದರಸದಂತೆ ದುಡಿಯುವ ಮನಸ್ಸು, ಶಕ್ತಿಬೇಕು. ಜನರ, ಸಂಸ್ಕೃತಿ ಪ್ರಿಯರ, ಸರಕಾರದ ನೆರವು ನಮ್ಮ ಕಾಲಬುಡದಲ್ಲೇ ಇರುತ್ತದೆ.

5. ಯಕ್ಷಗಾನಕ್ಕಾಗಿಯೇ ಪ್ರತ್ಯೇಕ ಅಕಾಡೆಮಿ ಬೇಕೆ?

ಯಕ್ಷಗಾನವು ನಮ್ಮ ಒಟ್ಟು ಜನಪದ ರಂಗಭೂಮಿಯ ಅವಿಭಾಜ್ಯ ಅಂಗವಾಗಿದೆ. ಯಕ್ಷಗಾನಕ್ಕೆ ಮಾತ್ರ ಏಕೆ ಜನಪದ ರಂಗಭೂಮಿಗಾಗಿಯೇ ಒಂದು ಪ್ರತ್ಯೇಕ ಅಕಾಡೆಮಿ ಆಗುವುದಾದಲ್ಲಿ ತುಂಬಾ ಸಂತೋಷ.

6. ತಾವು ಎಡಸಂಥೀಯ ಒಲವುಳ್ಳವರು. ಸಂಪ್ರದಾಯ ಮತ್ತು ಧಾರ್ಮಿಕತೆ ತುಂಬಿದ ಯಕ್ಷಗಾನದ ಬಗ್ಗೆ ಒಲವು ಮೂಡಿದ್ದು ಹೇಗೆ?

ಸಂಪ್ರದಾಯ ಮತ್ತು ಧಾರ್ಮಿಕತೆಯ ಚೌಕಟ್ಟಿನಲ್ಲಿರುವ ಸಮುದಾಯದ ಬದುಕಿನ ಆರೋಗ್ಯ ಮತ್ತು ಸಮೃದ್ಧಿಗೆ ಪೂರಕವಾಗಬಲ್ಲ ಅಂಶಗಳು ನಮಗೆ ಅತ್ಯವಶ್ಯವಾಗಿ ಬೇಕಾಗಿವೆ. ಪ್ರಗತಿಪರತೆ ಎಂಬುದು ಹಿಂದಿನ ಒಳಿತು ಕೆಡುಕುಗಳನ್ನೆಲ್ಲ ಗುಡಿಸಿಹಾಕುವ ಕೇವಲ ಬುಲ್ಡೋಜರ್ ಆಗಬಾರದು. ನಮ್ಮ ಪೌರಾಣಿಕ ಜಗತ್ತು ಈಗಿನ ಸಂಕೀರ್ಣ ಸಮಸ್ಯೆಗಳ ಹಿನ್ನೆಲೆಯ ಚರ್ಚೆ ಮತ್ತು ಪುನರಾಲೋಚನೆಗಳಿಗೆ ಕೂಡ ಹೆಚ್ಚಿನ ಸಾಮಾಗ್ರಿಗಳನ್ನು ಒದಗಿಸಬಲ್ಲುದೆಂಬುದನ್ನು ಸಾಂಸ್ಕೃತಿಕಲೋಕದ ಸಂವೇದನಾಶೀಲರೆಲ್ಲರೂ ಬಲ್ಲರು.

7. ಯಕ್ಷಗಾನದ ನಿಜವಾದ ಅಂತಃಸತ್ವವನ್ನು ಮುಂದೆಯೂ ಉಳಿಸಲು ಸಾಧ್ಯವೆ? ಹೇಗೆ?

ಖಂಡಿತಾ ಸಾಧ್ಯ! ಅಂತಹ ಸಾಂಸ್ಕೃತಿಕ ಎಚ್ಚರ ನಮ್ಮಲ್ಲಿ ಉಂಟಾಗಬೇಕು. ಇದ್ದುದರಲ್ಲಿ ನಮ್ಮ ಕರಾವಳಿ ಕರ್ನಾಟಕ ಪ್ರದೇಶವೇ ಈ ವಿಚಾರದಲ್ಲಿ ವಾಸಿ. ಉಳಿದ ಭಾಗಗಳಲ್ಲಿ ಕೀಳರಿಮೆ ತುಂಬಿದೆ. ನಮ್ಮ ಸಂಸ್ಕೃತಿಯ ಅಂತಃಸತ್ವದ ರಕ್ಷಣೆ ಮತ್ತು ಬೆಳವಣಿಗೆಯ ಪ್ರಯತ್ನಗಳು ನಮ್ಮನ್ನು ಜೀವಂತವಾಗಿಡಬಲ್ಲುದೆಂಬುದನ್ನು ನಾವು ಅರಿಯಬೇಕಲ್ಲವೆ?

8. ಯಕ್ಷಗಾನದ ರೀತಿಯಲ್ಲಿ ಮೂಡಲಪಾಯ ದೊಡ್ಡಾಟ - ಸಣ್ಣಾಟ - ಕೃಷ್ಣ ಪಾರಿಜಾತ ಮುಂತಾದ ಜಾನಪದ ರಂಗಕಲೆಗಳನ್ನು ಜನಪ್ರಿಯಗೊಳಿಸಲು ಸಾಧ್ಯವಿಲ್ಲವೆ? ಕೊಳು-ಕೊಡುಗೆ ಅವಶ್ಯವಲ್ಲವೆ?

ನಮ್ಮೆಲ್ಲರ ಪ್ರೀತಿಪೂರ್ವಕ ಹಠದಿಂದ ಕೂಡಿದ ಸಾಮೂಹಿಕ ಹೊಣೆಗಾರಿಕೆಯ ಅರ್ಥಪೂರ್ಣ ಪ್ರಯತ್ನಗಳಿಂದ ಮಾತ್ರ ಇದೆಲ್ಲ ಸಾಧ್ಯ. ಕೊಳು ಕೊಡುಗೆಯ

ಪ್ರಯೋಗಗಳು ತಾರತಮ್ಯತೆಯನ್ನು ತಪ್ಪಿಸಿ ಲವಲವಿಕೆ ತುಂಬಬಲ್ಲವು ಹಾಗೂ ನಮ್ಮ ಅರಿವಿನ ಎಲ್ಲೆಗಳನ್ನು ವಿಸ್ತರಿಸಬಲ್ಲವು.

9. ಮೂರು ವರ್ಷಗಳ ಸಾಧನೆ ತಮಗೆ ತೃಪ್ತಿತಂದಿದೆಯೇ? ಇನ್ನೂ ಆಗಬೇಕಾದ ಕಾರ್ಯಯೋಜನೆಗಳು ಯಾವುವು?

ಈ ಕ್ಷೇತ್ರ ವಿಸ್ತಾರವಾದುದು. ಈ ಸಂಬಂಧದಲ್ಲಿ ಸುಮಾರು ಒಂದು ಸಾವಿರ ಹಗಲು ಮತ್ತು ರಾತ್ರಿಗಳ ಕಾಲ ನಾನು ಕರ್ನಾಟಕದ ಉದ್ದಗಲ ಹಾಗೂ ನೆರೆರಾಜ್ಯಗಳಲ್ಲಿ ತದೇಕ ಚಿತ್ತದಿಂದ ಸುತ್ತಾಡಿದ್ದೇನೆ. ಜನಪದ ಕಲಾವಿದರ ಮನೆಬಾಗಿಲುಗಳಿಗೆ ಅಲೆದು ಅವರ ಕಷ್ಟಸುಖ ಮತ್ತು ಆಲೋಚನೆಗಳನ್ನು ಖುದ್ದಾಗಿ ಅರಿಯುವ ಪ್ರಯತ್ನಗಳನ್ನು ನಡೆಸಿದ್ದೇನೆ. ಈ ಅವಧಿಯಲ್ಲಿ ಸುಮಾರು ಒಂದೂವರೆ ಲಕ್ಷ ಕಿಲೋ ಮೀಟರ್ ದೂರ (ಕಾಲ್ನಡಿಗೆ - ಬಸ್ಸು-ಕಾರು-ರೈಲು ಮತ್ತು ವಿಮಾನದ ಮೂಲಕ) ನಿರಂತರವಾಗಿ ಪ್ರಯಾಣ ಮಾಡಿ ಅಕಾಡೆಮಿಯ ಚಟುವಟಿಕೆಗಳು ಅರ್ಥಪೂರ್ಣವಾಗಲು ಸಂತೋಷದಿಂದ ಶ್ರಮಿಸಿದ್ದೇನೆ. ಕರ್ನಾಟಕ ಸರ್ಕಾರ ನೀಡಿದ ಸಾಂಕೇತಿಕವಾದ ಆರ್ಥಿಕ ಅನುದಾನದ ಜೊತೆಗೆ ನಾಡಿನ ಮತ್ತು ನೆರೆನಾಡಿನ ವಿವಿಧ ಸಂಘ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಜಿಲ್ಲಾ ಪಂಚಾಯತ್, ಜಿಲ್ಲಾಡಳಿತಗಳು ಹಾಗೂ ಜನಪರವಾದ ಒಲವುಳ್ಳ ತುಂಬುಮನಸ್ಸಿನ ವ್ಯಕ್ತಿಗಳ ಉದಾರ ನೆರವಿನಿಂದ ಮಹತ್ವಪೂರ್ಣವಾದ ಕಾರ್ಯಕ್ರಮಗಳನ್ನು ಹಳ್ಳಿ-ಪಟ್ಟಣ-ನಗರಗಳಲ್ಲಿ ಸುಮಾರು ಮೂರುಕೋಟಿ ರೂಪಾಯಿಗಳ ವೆಚ್ಚದಲ್ಲಿ ಹಮ್ಮಿಕೊಳ್ಳಲು ಸಾಧ್ಯವಾಯಿತು. ಇದನ್ನು ಅತ್ಯಂತ ಆನಂದದಿಂದ ಹಾಗೂ ವಿನಯ ಪೂರ್ವಕವಾಗಿ ತಿಳಿಸಲು ನಾನು ಇಚ್ಛಿಸುತ್ತೇನೆ.

ಅದೃಶ್ಯ ಯಕ್ಷಗಾನ ಕಲಾವಿದ
ಮಾಸ್ಟರ್ ಕೇಶವ್ ಕನ್ಯಾನ

ಮಾಸ್ಟರ್‌ಕೇಶವ, ದೇಲಂತಬೆಟ್ಟು ಕೇಶವ, ಕೇಚು ಪಾಟಾಲಿ, ಡಿ. ಕೇಚುಮಾಸ್ತರ್ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಶ್ರೀಮಾನ್ ಕೇಚಪ್ಪನವರಿಗೆ ಈಗ ಸುಮಾರು 75 ವರುಷಗಳು (ಜನನ ತಾರೀಖು ನೆನಪಿಲ್ಲ). ಬಾಲ್ಯದಲ್ಲಿ ಗಾಣದಿಂದ ಎಣ್ಣೆತೆಗೆಯುವುದು, ಅನಂತರ ಸುಮಾರು 35 ವರ್ಷಗಳ ಕಾಲ ವಿವಿಧ ಯಕ್ಷಗಾನ ಮೇಳಗಳಲ್ಲಿ ವೇಷಧಾರಿಯಾಗಿ ದುಡಿತ. ಮುಂದೆ ನಾಟ್ಯಾಚಾರ್ಯನಾಗಿ ಸಾವಿರಾರು ಜನರಿಗೆ ನೃತ್ಯಾಭ್ಯಾಸ ಮಾಡಿಸಿ, ನೃತ್ಯಶಾಲೆಯನ್ನು ಮಂಗಳೂರಿನಲ್ಲಿ ತೆರೆದು, ಕಡೆಗೀಗ ಕೃಷಿಕನಾಗಿ ನಿವೃತ್ತ ಜೀವನವನ್ನು ನಡೆಸುತ್ತಿರುವ ಮಾಸ್ಟರ್ ಕೇಶವರನ್ನು ಕಲಾವರ್ಗದವರ್ಯಾರೂ ಗಮನಿಸದಿರುವುದು ಬಣ್ಣದ ಬದುಕಿನ ದುರಂತವೇ ಸರಿ.

ತಂದೆ ಶಂಕರ ಪಾಟಾಳಿ, ತಾಯಿ ದೇವಕಿಯವರ 3ನೇ ಮಗನಾಗಿ ಜನಿಸಿದ ಕೇಶವರು ಕಲಿತುದು 8ನೇ ತರಗತಿಯವರೆಗೆ ಮಾತ್ರ (ಕನ್ಯಾನ). ಕೇಶವರ ಬಾಲ್ಯ ಕಾಲದಲ್ಲಿ ಯಕ್ಷಗಾನದಲ್ಲಿ ಪ್ರಸಿದ್ಧರಾದವರು ದಿ. ಕಾವುಕಣ್ಣನವರು. ಪಂಜಾಜೆಯಲ್ಲಿದ್ದ ದಿ. ಕೆ.ಪಿ. ಗೋಪಾಲಕೃಷ್ಣ ಭಟ್ಟರು ದೊಡ್ಡ ಯಕ್ಷಗಾನಾಭಿಮಾನಿಯಾಗಿದ್ದರು. ಅವರು ಕನ್ಯಾನದಲ್ಲಿ ಕಾವು ಕಣ್ಣನವರ ಗುರುತ್ವದಲ್ಲಿ ಒಂದು ಯಕ್ಷಗಾನ ನಾಟ್ಯ ತರಬೇತಿಯನ್ನು ಪ್ರಾರಂಭಿಸಿದರು. ಅದರಲ್ಲಿ ಸೋಮಪ್ಪ ಭಂಡಾರಿ, ಕಮ್ಮಾಜೆ ಕೃಷ್ಣಭಟ್, ಕುರಿಯ ವಿಠಲಶಾಸ್ತ್ರಿ ಮುಂತಾದವರೊಂದಿಗೆ ಸೇರ್ಪಡೆಯಾದವರು ನಮ್ಮೀ ಕೇಶವರೂ ಸಹ. ಮುಂದೆ ಪ್ರಥಮವಾಗಿ ಮೂಲ್ಕಿ ಮೇಳಕ್ಕೆ ವೇಶಧಾರಿಯಾಗಿ ಪಾದಾರ್ಪಣೆ. ಆದರೆ ಒಂದೆರಡು ತಿಂಗಳಿನಲ್ಲಿಯೇ ಅನಾರೋಗ್ಯಗೊಂಡು ಹಿಂದಕ್ಕೆ ಬಂದರು. ಆನಂತರ ಕೂಡ್ಲು ಮೇಳದಲ್ಲಿ 2 ವರುಷ, ಕದ್ರಿಯಲ್ಲಿ 2ವರ್ಷ, ಕಟೀಲು 3 ವರ್ಷ, ಧರ್ಮಸ್ಥಳ 3 ವರ್ಷಗಳ ಕಾಲ ದುಡಿದು ಇರಾ (ಕುಂಡಾವು) ಹಾಗೂ ಕರ್ನಾಟಕ ಮೇಳಗಳಲ್ಲಿ ಸುಮಾರು 24 ವರ್ಷಗಳ ಕಾಲ ಅವಿರತವಾಗಿ ವಿವಿಧ ವೇಷಗಳನ್ನು ನಿರ್ವಹಿಸಿದರು.

ಎಷ್ಟೇ ವರ್ಷ ಮೇಳಗಳಲ್ಲಿ ದುಡಿದರೂ ಜಾತಿ ಹಾಗೂ ಹಣದ ಬಲವಿಲ್ಲದಿದ್ದರೆ ಮೇಲೆ ಬರುವುದು ಕಷ್ಟ ಎಂಬುದನ್ನರಿತ ಕೇಶವರು (ಮೇಳದ ರಾಜಕೀಯ)ನೊಂದು ಯಕ್ಷಗಾನರಂಗಕ್ಕೆ ವಿದಾಯವನ್ನು ಬಯಸಿದರು.

ಯಕ್ಷಗಾನ ಮೇಳಗಳಲ್ಲಿರುವಾಗ ಹೆಚ್ಚಾಗಿ ಸ್ತ್ರೀ ಪಾತ್ರದಲ್ಲಿ ಅದರಲ್ಲೂ ಮುಖ್ಯವಾಗಿ ಹೆಣ್ಣು ಬಣ್ಣ (ರಾಕ್ಷಸ ಸ್ತ್ರೀ ಪಾತ್ರಗಳು) ಗಳನ್ನೇ ಕೇಶವರು ನಿರ್ವಹಿಸುತ್ತಿದ್ದರು. ಆಗ, ಕುಂಡಾವು ಕರ್ನಾಟಕ ಮೇಳಗಳಲ್ಲಿದ್ದಾಗ, ನಾಟ್ಯದಲ್ಲಿ ಇನ್ನೂ ಪ್ರೌಢಿಮೆ ಬರಲು, ಮೇಳದ ಯಜಮಾನರಾದ ಕಲ್ಲಾಡಿ ಕೊರಗ ಶೆಟ್ರು ಟ್ರಿಚೂರಿನ ಅಂದಿನ ಪ್ರಸಿದ್ಧ ಕಥಕ್ಕಳಿ ಗುರುಗಳಾದ ಪರಮಶಿವನ್‌ರನ್ನು ಮಂಗಳೂರಿಗೆ ಕರೆಸಿದರು. ಅಲ್ಲಿ ಅವರಿಂದ ಒಂದು ವರ್ಷದ ಕಾಲ ಕಥಕ್ಕಳಿ ನಾಟ್ಯಾಭ್ಯಾಸವನ್ನು ಕೈಗೊಂಡರು. ಇನ್ನೊಂದು ವರ್ಷ ಮದರಾಸಿನ ಶ್ರೀಮಾನ್ ವಿನಯ ಭಾನು ಅವರನ್ನು ಕರೆಸಿ, ಕಥಕ್ಕಳಿಯಲ್ಲೇ ಇನ್ನೊಂದು ವರ್ಷ ನಾಟ್ಯಾಭ್ಯಾಸವನ್ನು ಕೊಡಿಸಿದರು. ಅನಂತರ, ಶೋರನೂರಿನ ರಾಜರತ್ನಂಪಿಳ್ಳೈಯವರಲ್ಲೂ ಭರತನಾಟ್ಯಾಭ್ಯಾಸವನ್ನು ಗೈದರು. ಇಲ್ಲಿಗೂ ತೃಪ್ತರಾಗದ ಕೇಶವರು, ಆಗ ಮಂಗಳೂರಿನಲ್ಲಿಯೇ ನೆಲಸಿದ್ದ ಪ್ರಸಿದ್ಧ ನಾಟ್ಯಾಚಾರ್ಯ ಶ್ರೀ ರಾಜರತ್ನಂ ಅಯ್ಯರರ ನೃತ್ಯ ಶಾಲೆಯಲ್ಲಿ ಸತತ 5 ವರ್ಷಗಳ ಕಾಲ ಕಥಕ್ಕಳಿಯನ್ನು ಅಭ್ಯಸಿಸಿ, ಅದರಲ್ಲಿ ಪ್ರೌಢಿಮೆಯನ್ನು ಗಳಿಸಿಕೊಂಡರು. ಈ ಪ್ರೌಢಿಮೆಯೇ ಮುಂದೆ ಅವರನ್ನು ಯಕ್ಷರಂಗದಿಂದ ವಿಮುಖವಾಗಿಸಿ ನಾಟ್ಯದತ್ತ ಒಲಿಯಲು ಕಾರಣವಾಯಿತೆನಿಸುತ್ತದೆ.

ಯಕ್ಷಗಾನದ ಅರ್ಥಗಾರಿಕೆಗೆ ದಿ. ಕುರಿಯ ವಿಠಲಶಾಸ್ತ್ರಿ ಹಾಗೂ ಅಳಿಕೆ ರಾಮಯ್ಯರೈಗಳು ಕೇಶವರಿಗೆ ಗುರುಗಳಾಗಿದ್ದರು. ವಿಠಲ ಶಾಸ್ತ್ರಿಗಳ ಹನುಮಂತ, ಕೇಶವರ ಸೀತೆ, ಅಶೋಕವನದ ಸನ್ನಿವೇಶದಲ್ಲಿ ಅತ್ಯಂತ ರೋಚಕವಾಗಿರುತ್ತಿದ್ದವು. ಇದಲ್ಲದೆ, ಪ್ರಮೀಳೆ, ಅಂಬೆ, ದ್ರೌಪದಿ (ದ್ರೌಪದೀ ಪ್ರತಾಪ), ಸೌಭದ್ರೆ, ಶ್ರೀದೇವಿ, ದಾಕ್ಷಾಯಿಣಿ, ಮೋಹಿನಿ ಮುಂತಾದ ಪಾತ್ರಗಳನ್ನು ಅವರು ಲೀಲಾಜಾಲವಾಗಿ ನಿರ್ವಹಿಸುತ್ತಿದ್ದರು. ಸ್ತ್ರೀ ಪಾತ್ರಗಳಲ್ಲದೆ, ಪುರುಷ ಪಾತ್ರಗಳಾದ ಮಧು-ಕೈಟಭ, ದೇವೇಂದ್ರ, ಕೃಷ್ಣ ಮುಂತಾದ ಪಾತ್ರಗಳಲ್ಲೂ ಮಿಂಚಿದ್ದಾರೆ. ಏನಿದ್ದರೂ ಇವರದ್ದು 'ಲೆಕ್ಕಾಚಾರದ ವೇಶ' ವಾಗಿತ್ತು. ಚಿಕ್ಕಚಿಕ್ಕ ಪಾತ್ರಗಳಿಗೂ ಜೀವ ತುಂಬುತ್ತಿದ್ದರು. ತುಳುಕಥಾನಕಗಳಾದ ಕೋರ್ದಬ್ಬುಬಾರಗ, ದಳವಾಯಿ ದುಗ್ಗಣ್ಣ ಕೋಟಿ ಚೆನ್ನಯ, ತುಳುನಾಡ ಸಿರಿಗಳ ತನ್ನಿಮಾನಿಗ, ಮುದುಕ, ಸಿರಿ, ಚೆನ್ನಯ ಮುಂತಾದ ಪಾತ್ರಗಳು ಇವರಿಗೆ ಹೆಸರನ್ನು ತಂದಿತ್ತವು. ಹಲವು ಪ್ರಸಂಗಗಳಿಗೆ ಕಥಾ ಸಂಕಲನ ಮಾಡಲೂ ಸಹಾಯಮಾಡಿದ್ದಾರೆ.

ಮುಖ್ಯವಾಗಿ 'ಹೆಣ್ಣು ಬಣ್ಣ' (ರಾಕ್ಷಸಿ) ಇವರಿಗೆ ಹೆಚ್ಚು ಪ್ರಸಿದ್ಧಿಯನ್ನು ತಂದಿತು. ಹೆಣ್ಣು ಬಣ್ಣದ ಮುಖವರ್ಣಿಕೆಗೆ ಇವರದ್ದೇ ಆದ ಕೊಡುಗೆ ಇದೆ. ಮುಖ್ಯವಾಗಿ

ಎರಡು ಕೋರೆಹಲ್ಲುಗಳು ಹಾಗೂ ಅಗಲವಾದ ಬಾಯಿಯ ವರ್ಣಿಕೆ ಇವರದ್ದೆ ಕೊಡುಗೆಯಾಗಿದೆ. ಇದನ್ನು ಅಳಿಕೆ ರಾಮಯ್ಯರೈ,, ಕುರಿಯ ವಿಠಲಶಾಸ್ತ್ರಿಗಳೇ ಮೊದಲಾದವರು ಮೆಚ್ಚಿಕೊಂಡಿದ್ದಾರೆ.

ಮಾಂಬಾಡಿ ನಾರಾಯಣ ಭಟ್, ದೊಡ್ಡ ಬಲಿಪ - ಸಣ್ಣ ಬಲಿಪರು, ಇರಾ ಗೋಪಾಲಕೃಷ್ಣಭಟ್, ಪುತ್ತಿಗೆ ತಿಮ್ಮಪ್ಪ ರೈ, ಮುಂಡೆಚ್ಚ, ಅಗರಿ ಮುಂತಾದ ಮಹಾನ್ ಭಾಗವತರುಗಳೊಂದಿಗೆ ವ್ಯವಸಾಯ ಮಾಡಿದ್ದಾರೆ. ಮಂಕುಡೆ ಸಂಜೀವಶೆಟ್ಟಿ, ಕೋಳ್ಯೂರು ರಾಮಚಂದ್ರರಾವ್, ಅಳಿಕೆರಾಮಯ್ಯರೈ, ಕುರಿಯ ವಿಠಲಶಾಸ್ತ್ರಿ, ಬೋಳಾರ ನಾರಾಯಣ ಶೆಟ್ಟಿ, ನಾರಂಪಾಡಿ ಸುಬ್ಬಯ್ಯ ಶೆಟ್ಟಿ, ಮಿಜಾರು ಅಣ್ಣಪ್ಪ, ಕೊಡಕ್ಕಲ್ಲು ಗೋಪಾಲಕೃಷ್ಣಭಟ್, ಬೆಟ್ಟಂಪಾಡಿ ಬಾಳಪ್ಪ ಶೆಟ್ಟಿ, ಎರ್ಮಕಟ್ಟೆ ನಾರಾಯಣ, ಬಣ್ಣದ ಮಾಲಿಂಗ, ಚಂದ್ರಗಿರಿ ಅಂಬು, ಕುಣ್ಣಿರಾಮ ಮಣಿಯಾಣಿ ಮುಂತಾದ ಹಿರಿಯ ಕಲಾವಿದರ ಸಹೋದ್ಯೋಗಿ ಆಗಿದ್ದರು. ಕ್ವಚಿತ್ತಾಗಿದ್ದ ಹಸ್ತ ಮುದ್ರೆಗಳನ್ನು ಯಕ್ಷಗಾನದಲ್ಲಿ ಜಾಸ್ತಿಯಾಗಿ ಬಳಕೆಗೆ ತಂದವರೂ ಇವರೇ. ರಾಮದಾಸ ಸಾಮಗ, ವೀರ ಭದ್ರನಾಯ್ಕರೊಂದಿಗೆಯೂ ವ್ಯವಸಾಯ ಮಾಡಿದ ಹೆಗ್ಗಳಿಕೆ ಶ್ರೀ ಕೇಶವರದು. ಮುಂಬೈ, ಮಡಿಕೇರಿ, ತಲಕಾವೇರಿ, ಶೃಂಗೇರಿ, ಬೆಂಗಳೂರು ಮುಂತಾದ ಕಡೆಗಳಲ್ಲಿ ಯಕ್ಷಗಾನ - ನೃತ್ಯಗಳ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ.

ಮೊದಲೇ ಹೇಳಿದಂತೆ ಯಕ್ಷಗಾನದ ಒಳ ರಾಜಕೀಯದಿಂದ ಬೇಸತ್ತ ಕೇಶವರು, ನಿಧಾನವಾಗಿ ನೃತ್ಯರಂಗಕ್ಕೆ ವಾಲಿದರು. "ಉದಯನೃತ್ಯ ಕಲಾ ಮಂದಿರ" ಹಾಗೂ "ಮಂಗಳಾಂಬಿಕಾ ಸಂಗೀತ ನೃತ್ಯಕಲಾ ಮಂದಿರ" ವೆಂಬ ನಾಟ್ಯ ಕೇಂದ್ರಗಳನ್ನು ಮಂಗಳೂರಿನಲ್ಲಿ (ಅತ್ತಾವರ) ಸ್ಥಾಪಿಸಿ ಆರು ವರ್ಷಗಳ ಕಾಲ ನಡೆಸಿ ನೂರಾರು ಶಿಷ್ಯ- ಶಿಷ್ಯೆಯರನ್ನು ತಯಾರು ಮಾಡಿದರು. ಕಡೆಗೆ ಅಲ್ಲೂ ಮೋಸಕ್ಕೊಳಗಾಗಿ ನೃತ್ಯ ಕೇಂದ್ರವನ್ನು ಬೇರೆಯವರ ವಶಕ್ಕೊಪ್ಪಿಸಿದರು. ಅನಂತರ ಬಂಟ್ವಾಳ, ಬಿ.ಸಿ.ರೋಡ್, ಬದಿಯಡ್ಕ, ಉಪ್ಪಳ, ಪುತ್ತೂರು, ಅಡ್ಯನಡ್ಕ, ವಿಟ್ಲ, ಅಳಿಕೆ, ಕನ್ಯಾನ, ಕಾಟುಕುಕ್ಕೆ, ಮಿತ್ತನಡ್ಕ, ಕುಳಾಯಿ, ಮಂಕುಡೆ, ಮುಡಿಪು, ಸಜಿಪ, ಕಾಯರ್‌ಕಟ್ಟೆ ಬಾಯಾರು ಮುಂತಾದ ಹಲವು ಹತ್ತು ಕಡೆಗಳಲ್ಲಿ ಶಾಲಾ-ಕಾಲೇಜಿನ ಸಾವಿರಾರು ವಿದ್ಯಾರ್ಥಿಗಳಿಗೆ ನಾಟ್ಯವನ್ನು ಕಲಿಸಲಾರಂಭಿಸಿದರು. ಒಟ್ಟಿಗೆ ಯಕ್ಷಗಾನವನ್ನು ಮರೆಯಲಿಲ್ಲ. ಶ್ರೀಗಳಾದ ದೇವಸ್ಯ ಶಿವರಾಮ ಭಟ್, ಪೋಲೀಸ್ ಇಲಾಖೆಯ ಕೊರಗಪ್ಪ, ಶಿವ ಪ್ರಕಾಶ್ ಮುಂತಾದವರು ಇವರ ಶಿಷ್ಯವರ್ಗದಲ್ಲಿದ್ದಾರೆ.

ಪತ್ನಿ ಜಾನಕಿಯೂ ಸಹ ನೃತ್ಯಕಲಾವಿದೆ. ಒಂದು ಕಾಲದಲ್ಲಿ ಇವರಿಬ್ಬರ ಶಿವತಾಂಡವ, ವಿಶ್ವಾಮಿತ್ರ ಮೇನಕೆ ಮುಂತಾದ ನೃತ್ಯಗಳು ಮನೆ ಮಾತಾಗಿದ್ದವು. ಹಿರೇ ಮಗ ಉದಯಶಂಕರ ಅಬುಧಾಬಿ ಯಲ್ಲಿ ವೃತ್ತಿಯಲ್ಲಿದ್ದಾನೆ. ರವಿಶಂಕರ ಗಲ್ಫ್‌ನಲ್ಲಿದ್ದು ಪ್ರಕೃತ ಮನೆಯಲ್ಲೇ ಇದ್ದಾನೆ. ಬೇಬಿ (ಕವಿತ) ಗೃಹಿಣಿಯಾಗಿ ಉಪ್ಪಿನಂಗಡಿಯ ಸಮೀಪವಿದ್ದಾರೆ. ಸುಕನ್ಯಾ ಎಂ.ಎ., ಬಿ.ಎಡ್. ಮಾಡಿ ಉಪನ್ಯಾಸಕಿಯಾಗಿ ಪುತ್ತೂರು ಸಮೀಪದ ಪೆರ್ನಾಜೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರೂ ಸಹಾ ನೃತ್ಯಗಾತಿಯಾಗಿ ಗಮನ ಸೆಳೆದಿದ್ದಾಳೆ; ಸಾಹಿತಿ-ಕವಯತ್ರಿಯೂ ಸಹಾ.

ಸರಕಾರ ಮರೆತರೂ, ಊರ-ಪರವೂರ ಸಂಘ ಸಂಸ್ಥೆಗಳು ಶ್ರೀಯುತರನ್ನು ಸ್ವಲ್ಪಮಟ್ಟಿಗಾದರೂ ಗೌರವಿಸಿರುವುದು ಸಮಾಧಾನ ತರುವ ಅಂಶ. ತಾ. 11-1-1995ರಂದು ಶ್ರೀ ಹರಿಕೃಷ್ಣ ಪುನರೂರರ ಅಧ್ಯಕ್ಷತೆಯಲ್ಲಿ ನಡೆದ ಮೂರನೇ ಬಂಟ್ವಾಳ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ,1-1-1986ರಂದು 'ಕಲಾವಿದರ ಬಳಗ ಜೋಡುಮಾರ್ಗ' ಇವರು ತಾ. 30-5-1960ರಂದಯ ವಿಟ್ಲ ಅಭಿವೃದ್ಧಿ ಕ್ಷೇತ್ರದವರು "ಕೃಷಿ ಮತ್ತು ಜಾನುವಾರ ಪ್ರದರ್ಶನ"ದಂದು, ತಾ. 8-10-1951ರಂದು ಶೃಂಗೇರಿಯ ರೆವೆನ್ಯೂ ಆಫೀಸರರು 'ದಸರಾಉತ್ಸವ' ಶೃಂಗೇರಿಯಲ್ಲಿ ಭಾಗವಹಿಸಿದ್ದಕ್ಕೆ ಅಲ್ಲದೆ, ತಾ. 29-8-1960ರಂದು ಮನಲ್ ಶ್ರೀನಿವಾಸನಾಯಕ್, ಮುನ್ಸಿಪಲ್ ಕೌನ್ಸಿಲರು. ಲಯನ್ಸ್ ಕ್ಲಬ್ ಮಂಗಳೂರಿನ "ಚಾರ್ಟರ್ ನೈಟ್ ಸಿಲಬ್ರೇಶನ್"ನಲ್ಲಿ ಮಾಡಿದ ನೃತ್ಯಕ್ಕಾಗಿ ಹಾಗೂ ತಾ. 15-8-1959ರಂದು ಲಂಡನ್ ಮೂಲದ "ಜೆಪ್ಪುಕಾಫಿ ಕ್ಯೂರಿಂಗ್ ವರ್ಕ್ಸ್" ಮಂಗಳೂರಿನವರು ಕೇಶವರ ನಾಗ ನೃತ್ಯಕ್ಕಾಗಿ ಪ್ರಶಂಸಾ ಪತ್ರಗಳನಿತ್ತು ಗೌರವಿಸಿದ್ದಾರೆ. ಇವುಗಳಲ್ಲದೆ ಇನ್ನೂ ಕೆಲವು ಕಲಾಕೂಟಗಳು ಇವರನ್ನು ಗುರುತಿಸಿ ಸನ್ಮಾನಿಸಿದ್ದಾರೆ. ವೈಯಕ್ತಿಕ ನೆಲೆಯಲ್ಲಿ ಶ್ರೀ ಕಲ್ಲಾಡಿ ಕೊರಗಪ್ಪ ಶೆಟ್ಟಿ, ಐರ್ಯ ಲಕ್ಷ್ಮೀನಾರಾಯಣ ಆಳ್ವ, ನೀರ್ಪಾಜೆ ಭೀಮ ಭಟ್ಟರೇ ಮೊದಲಾದವರು ಅವರ ಕಲಾ ಸೇವೆಯನ್ನು ಕೊಂಡಾಡಿದ್ದಾರೆ.

1950-60-70ರ ದಶಕಗಳಲ್ಲಿ ಸಾಂಸ್ಕೃತಿಕ ರಂಗಕ್ಕೆ ತನ್ನದೇ ಆದ ರೀತಿಯಲ್ಲಿ ಸೇವೆ ಸಲ್ಲಿಸಿದ ಮಾಸ್ಟರ್‌ಕೇಶವ ಕನ್ಯಾನರು, ಕನ್ಯಾನಕ್ಕೆ ಮಾತ್ರವಲ್ಲ, ಇಡೀ ಕಲಾ ರಂಗಕ್ಕೇ "ಭೂಷಣರು" ಎನ್ನುವುದರಲ್ಲಿ ಎರಡು ಮಾತಿಲ್ಲ.

ಪರಂಪರೆಯ 'ಮೊಳಕೆ ಸಿರಿ'
ಮಾ. ಭೀಮ ಭಾರದ್ವಾಜ್, ಕನ್ಯಾನ

ಯಕ್ಷಗಾನ ಇಂದು ಕವಲು ದಾರಿಯಲ್ಲಿದೆ ಎಂದು ವಿಮರ್ಶಕರೆಲ್ಲಾ ಒಪ್ಪುವ ಮಾತು. ಹೇಗೆಂದು ಈವರೆಗೆ ಯಾರೂ ಕೊನೆಯ ನಿರ್ಣಯ ಕೊಟ್ಟವರಿಲ್ಲ. ಹಾಗಿದ್ದರೂ 'ಹೀಗಿತ್ತಂತೆ' ಎನ್ನುವ ಹಳೆಯ ಕಲಾವಿದರೂ ಕಣ್ಮರೆಯಾಗುತ್ತಿದ್ದಾರೆ. ಅವರಿವರಿಂದ ಕೇಳಿ ತಿಳಿದು ಕ್ರೋಢೀಕರಿಸಿ, ಅದನ್ನು ಉಳಿಸಲು ಹೆಣಗುವವರು ಹಲವರು. ಅಂತಹ ಒಂದು ಸಂಸ್ಥೆ ವೀರಾಂಜನೇಯ ಯಕ್ಷಗಾನ ಕಲಾಸಂಘ (ಗುರಿ ಮಾರ್ಗ) ಶಿರಂಕಲ್ಲು, ದ.ಕ. ಇದರ ಮೂಲಕ ಪಳಗುತ್ತಿರುವ 20 ಮಂದಿ ಬಾಲಕರು ಎಲ್ಲಾ 16ರ ಒಳಗಿನ ಪೋರರು. ಈ ವಯಸ್ಸಿನ ಇತರ ಬಾಲಕರು ಕ್ರಿಕೆಟ್ ಮೈದಾನದಲ್ಲಿದ್ದರೆ, ಇವರು ಶ್ರೀ ಸಬ್ಬಣಕೋಡಿ ರಾಮಭಟ್ಟರ ತರಬೇತಿಯಲ್ಲಿ ''ಧೀಂ ಕಿಟ ಕಿಟ ತಕ'' ಕುಣಿಯುತ್ತಿದ್ದಾರೆ. ಈ ತಂಡದ ಕನಸನ್ನು ನನಸು ಮಾಡುತ್ತಿರುವವರು ಶ್ರೀ ಪೆರ್ನಡ್ಕ ಶ್ಯಾಮ ಭಟ್ಟರು. ಈ ತಂಡದ ಒಬ್ಬ ಬಾಲ ಕಲಾವಿದನೇ ಮಾ. ಭೀಮ ಭಾರದ್ವಾಜ.

1988ರಲ್ಲಿ ಜನಿಸಿದ ಈ ಹುಟ್ಟು ಪ್ರತಿಭೆ ತನ್ನ 7ನೇ ವರ್ಷದಲ್ಲಿ ದೇವೇದ್ರ ಬಲವಾಗಿ ಗೆಜ್ಜೆ ಕಟ್ಟಿದ. ಮುಂದೆ ತಿರುಗಿ ನೋಡಲಿಲ್ಲ ಈ ಬಾಲಕ. ಮೇಲಿನ ಸಂಘದಲ್ಲಿ ಈವರೆಗೆ ಕಲಿಸಿದ ಪರಂಪರೆಯ ಕುಣಿತಗಳಾದ ಕೋಡಂಗಿ, ಪೀಠಿಕೆ ಸ್ತ್ರೀವೇಷ, ನಿತ್ಯ ಸ್ತ್ರೀವೇಷ, ಬಾಲಗೋಪಾಲ, ಸಂಪೂರ್ಣ ತೆರೆ ಕಲಾಸು, ಸಭಾ ಕಲಾಸುಗಳಲ್ಲಿ ಎಲ್ಲರನ್ನೂ ಮೀರಿ ನಿಂತಿದ್ದಾನೆ. ಈತನಲ್ಲಿರುವ ಇನ್ನೂ ಕೆಲವು ವಿಶೇಷತೆಗಳೆಂದರೆ ಒಮ್ಮೆ ಹೇಳಿದ್ದನ್ನು ರಂಗಸ್ಥಳದಲ್ಲಿ ಎಗ್ಗಿಲ್ಲದೆ ತಪ್ಪಿಲ್ಲದೆ ಅಭಿನಯಿಸುವುದು. ಈ ಕಾರಣದಿಂದಾಗಿಯೇ ನಿಜವಾಗಿಯೂ ಈತ ಪರಂಪರೆಯ ಯಕ್ಷಗಾನಕ್ಕೊಂದು ಕೊಡುಗೆ ಆಗಿದ್ದಾನೆ. ದಿ. ಶ್ರೀ ಪಡ್ರೆ ಚಂದು ಅವರಿಂದ ಪರಂಪರೆಯ ಹನುಮಂತನ ತೆರೆ ಪೊರಪ್ಪಾಡ್ ಅನ್ನೂ ತನ್ನ ಬಾಲ್ಯದ ಸೀಮೆಯೊಳಗೆ ಪ್ರದರ್ಶಿಸುವ ಪರಿಣತಿಯನ್ನೂ ಪಡೆದಿದ್ದಾನೆ. ಪಡ್ರೆಚಂದು ಅವರ ಕೊನೆಯ ಶಿಷ್ಯನೀತ.

ಇಂದು ಮರೆಯಾಗಿರುವುದು ಕೃಷ್ಣನ ಒಡ್ಡೋಲಗ. ಎಂಟು ಮಂದಿ

ಪತ್ನಿಯರೊಡನೆ ಚಿನ್ನಾಟವಾಡುವ ಚೆಂದವನ್ನು ನೋಡಿಯೇ ಅನುಭವಿಸಬೇಕು. ಇಂದಿನ ನವೀನತೆಯ ಬಿರುಗಾಳಿಯಲ್ಲಿ ಇದು ಲುಪ್ತವಾಗಿದೆ. ಇದನ್ನು ಪುನಃ ರಂಗದಲ್ಲಿ ಅದೂ ಬಾಲಕರ ತಂಡಗಳಲ್ಲಿ ಭಾರದ್ವಾಜ ಅದನ್ನು ತನ್ಮಯತೆಯಿಂದ ಪ್ರದರ್ಶಿಸುತ್ತಿದ್ದಾನೆ.

ಲವ ಕುಶರ ಕಾಳಗದ ಲವ, ಬಭ್ರುವಾಹನ ಕಾಳಗದ ಬಭ್ರುವಾಹನ, ವೀರಮಣಿ ಕಾಳಗದ ಹನುಮಂತ, ಭಾರ್ಗವ ವಿಜಯದ ಭಾರ್ಗವ, ತಾರಕ ವಧೆಯ ಮನ್ಮಥ ಇವೆಲ್ಲವನ್ನೂ ಈತ ಲೀಲಾಜಾಲವಾಗಿ ಅನುಭವಿಸಿ, ಅಭಿನಯಿಸುತ್ತಾನೆ.

ಕಳೆದ ವರ್ಷ ಬೆಂಗಳೂರಿನಲ್ಲಿರುವ ವಿಶ್ವಶಾಂತಿ ಆಶ್ರಮದಲ್ಲಿ ಈತನದ್ದು ದೇವೇಂದ್ರ ಬಲ. ಈತನ ಅಭಿನಯ ಬೇರೆಲ್ಲಾ ಪ್ರಥಮ ವೇಷಗಳನ್ನು (ದೊಡ್ಡವರು) ಕಳೆಗುಂದಿಸಿ, ಸಂಯೋಜಕರನ್ನು ರಂಜಿಸಿದವನು ಈ ಪೋರ. ಹುಚ್ಚೆದ್ದ ಸಂಯೋಜಕರು ವೇದಿಕೆಗೆ ಬಂದು ಈತನನ್ನು ಬಿಗಿದಪ್ಪಿದರು. ಇದು ಆತನ ನಾಟ್ಯಗಾರಿಕೆಗೊಂದು ತುರಾಯಿ.

ಅರಳು ಹುರಿದಂತೆ ಮಾತನಾಡುವ ಈ ಬಾಲಕ ದ.ಕ. ಜಿಲ್ಲೆಯ ಬಂಟ್ವಾಳ ತಾಲೂಕಿನ ಸದ್ಯ ಕನ್ಯಾನ ಜಿ.ಪ.ಕಿರಿಯ ಪ್ರಾಥಮಿಕ ಶಾಲೆಯಲ್ಲಿ 6ನೇ ತರಗತಿ ಓದುತ್ತಿದ್ದಾನೆ. ಶ್ರೀಮತಿ ಪಾರ್ವತಿ ಶ್ರೀ ಶ್ಯಾಮ ಭಟ್ಟರ ಪುತ್ರನೀತ. ತಂದೆ ಯಕ್ಷಗಾನ ಕಲಾವಿದರೂ ಹೌದು. ಜೊತೆಗೆ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಶ್ರೀ ವೀರಾಂಜನೇಯ ಯಕ್ಷಗಾನ ಕಲಾಸಂಘವನ್ನು ಹುಟ್ಟು ಹಾಕಿದವರೂ ಅವರೇ.

ಈ ಬಾಲಕ ಮುಂದೆ ಉತ್ತಮ ಕಲಾವಿದನಾಗಲಿ, ತಂಡ ಬೆಳಗಲಿ ತೆಂಕು ತಿಟ್ಟು ತನ್ನ ಹಿಂದಿನ ಪರಂಪರೆಯನ್ನು ಪುನಃ ರಂಗದಲ್ಲಿ ವೈಭವೀಕರಿಸಲಿ ಎಂಬುದು ನಮ್ಮ ಹಾರೈಕೆಯಾಗಿದೆ. (ಪ್ರಸ್ತುತ, ಈತನು ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ದ್ವಿತೀಯ ವರ್ಷದ ಬಿ.ಎಸ್ಸಿ.ಯನ್ನು ಕಲಿಯುತ್ತಿದ್ದಾನೆ)

ವಿದ್ವಾನ್ ತಾಳ್ತಜ್ಜೆ ಕೃಷ್ಣಭಟ್ಟ

(ಯಕ್ಷಗಾನ ಕವಿ–ಸಂಶೋಧಕ– ಅರ್ಥಧಾರಿ–ವಿಮರ್ಶಕ ವಿದ್ವಾನ್ ತಾಳ್ತಜ್ಜೆ ಕೃಷ್ಣಭಟ್ಟ)

ರಾಕ್ಷಸ ಸಂ. ಉತ್ತರಾಯಣ ಪುಷ್ಯಯುಕ್ತ ಮಕರಮಾಸ ತ್ರಯೋದಶಿ ಗುರುವಾರ ನವ ವಿಂಶತಿಘಟಿಕಾಯಾ ತುಲಾ ಲಗ್ನ ಸ್ವಾತಿ ನಕ್ಷತ್ರ ಅಷ್ಟತಿಥಿ ಇದು ಅವರ ಜಾತಕದಲ್ಲಿದೆ. ಈವರೆಗೆ 1917 ಫೆಬ್ರವರಿ 21ಎಂದು ಬೇರೆ ಬೇರೆ ಸಂದರ್ಭದಲ್ಲಿ ಅವರ ಜನನ ತಾರೀಕನ್ನು ಕೊಡಲಾಗಿತ್ತು. ತಾಳ್ತಜೆ ಗೋವಿಂದಭಟ್ಟ ಸಾವಿತ್ರಿ ದಂಪತಿಗಳ ನಾಲ್ವರು ಪುತ್ರರಲ್ಲಿ ಮೂರನೆಯವರು ಅವರು ಕಾಸರಗೋಡು ಬೋರ್ಡ್ ಹೈಸ್ಕೂಲಿನಲ್ಲಿ 3 ಫಾರ್ಮ್‌ನಲ್ಲಿ ಇಂಗ್ಲೀಷ್, ಲೆಕ್ಕ ಮತ್ತು ಕನ್ನಡಗಳಲ್ಲಿ ಅತ್ಯಂತ ಹೆಚ್ಚು ಅಂಕಗಳಿಸಿ ಆ ವರ್ಷದ ಮಹಾಲಕ್ಷ್ಮಿ ಪ್ರೈಸ್‌ಗಳಿಕೆ.

ಬಾಯಾರು ಪೆರ್ವಡಿ ಶಾಲೆಯಲ್ಲಿ 3 ವರ್ಷ ಉಪಾಧ್ಯಾಯ ವೃತ್ತಿ. ಇದರೆಡೆಯಲ್ಲಿ ಊರ ವಿದ್ವಾಂಸರಿಂದ ಸಂಸ್ಕೃತ ಅಭ್ಯಾಸ. ಆಮೇಲೆ 1940–41ನೇ ಇಸವಿಯಲ್ಲಿ ಮದ್ರಾಸು ವಿಶ್ವವಿದ್ಯಾಲಯದಿಂದ ನಡೆಸಲ್ಪಡುತ್ತಿದ್ದ ವಿದ್ವಾನ್ ಪ್ರಿಲಿಮಿನರಿ ಮತ್ತು ಫೈನಲ್ ಪರೀಕ್ಷೆಗಳಲ್ಲಿ ತೇರ್ಗಡೆ.

ಖಾಸಗಿಯಾಗಿಯೇ ದಕ್ಷಿಣಭಾರತ ಹಿಂದಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಹಿಂದಿ ಭಾಷಾ ವಿಶಾರದ ಪರೀಕ್ಷೆಯಲ್ಲಿ ಪಾಸು.

ಸ್ವಾಧ್ಯಾಯಮಂಡಲ ಉತ್ತರ ಪ್ರದೇಶದ ಪಾರಡಿಯಿಂದ ನಡೆಸಲ್ಪಡುತ್ತಿದ್ದ ಸಂಸ್ಕೃತ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಸಂಸ್ಕೃತ ಭಾಷಾ ವಿಶಾರದ ಬಿರುದು ಪ್ರಾಪ್ತ.

ಭಗವದ್ಗೀತಾ ಪರೀಕ್ಷೆಯಲ್ಲಿ ಕಡೆಯದಾದ ಗೀತಾಲಂಕಾರ ಪರೀಕ್ಷೆಯಲ್ಲಿ ದೇಶಮಟ್ಟದ ಪಾರಿತೋಷಕವಾಗಿ 'ವೈದಿಕ ಸಂಪತ್ತಿ' ಎಂಬ ಪುರಸ್ಕಾರ ಪ್ರಾಪ್ತಿ.

'ಚಾಣಕ್ಯ ಸಾಹಸ' ಎಂಬ ಖಂಡಕಾವ್ಯ 1950ರಲ್ಲಿ ಪ್ರಕಟಿತ.

'ಭೀಷ್ಮ ವಿಜಯಂ' ಎಂಬ ಮಹಾಕಾವ್ಯ ಅಪ್ರಕಟಿತ.

ಚಾಣಕ್ಯ ಚಂದ್ರಗುಪ್ತ ಯಕ್ಷಗಾನ ಪ್ರಸಂಗ ಅಪ್ರಕಟಿತ.

ಮಯೂರವರ್ಮವಿಲಾಸ ಯಕ್ಷಗಾನ ಪ್ರಸಂಗ ಪ್ರಕಟಿತ.

ವಿದ್ಯಾರಣ್ಯ ವಿಜಯ(ಕರ್ನಾಟಕ ಸಿಂಹಾಸನಸ್ಥಾಪನೆ) ಯಕ್ಷಗಾನ ಪ್ರಸಂಗ ಅಪ್ರಕಟಿತ.

ಹಗೆಯ ಹೊಗೆ (ಪೌರಾಣಿಕ) ಯಕ್ಷಗಾನ ಪ್ರಸಂಗ ಅಪ್ರಕಟಿತ.

ಕೀಚಕವಧೆ ಕನ್ನಡದಲ್ಲಿಂದು ಬಳಕೆ ತಪ್ಪಿದ ಚತ್ತಾಣ ಗದ್ಯ ಪ್ರಕಟಿತ.

ರಾವಣ ಚರಿತೊ ಯಕ್ಷಗಾನ ತುಳುವಿನಲ್ಲಿ (ಬೊಂಬಾಯಿ ಪದವೀಧರ ಯಕ್ಷಗಾನ ಸಮಿತಿಯಿಂದ ಪ್ರಕಟಗೊಂಡಿದೆ).

ಸೂರ್ಪನಕಿ ಸೇಲೆ ತುಳು ಖಂಡಕಾವ್ಯ ಅಪ್ರಕಟಿತ.

ಸೇಡಿಯಾಪು ಪ್ರಶಸ್ತಿ ಉಡುಪಿಯ ಗೋವಿಂದಪೈ ಸಂಶೋಧನ ಕೇಂದ್ರದಿಂದ ದೊರೆತಿದೆ.

ಅವರವರ ಭಾಗ್ಯ ಸಾಮಾಜಿಕ ಕಾದಂಬರಿ ಪ್ರಕಟಿತ.

ಕಡುಗಲಿ ಮಹಾಕವಿ ಪಾರ್ತಿಸುಬ್ಬ ಜಾನಪದೀಯ ಕಾದಂಬರಿ (ಅಪೂರ್ಣ - ಯಕ್ಷಪ್ರಭಾ ಮಾಸಿಕದಲ್ಲಿ ಪ್ರಕಟಿತ)

ಕಾರ್ತಿಕೇಯ ಜನನ - ಗೀತಾನಾಟಕ ಅಪ್ರಕಟಿತ.

ಶಾಕುಂತಲ ಕಾವ್ಯ (ಅಪೂರ್ಣ).

ಕನ್ನಡ ವ್ಯಾಕರಣ ಕೃತಿ- ಅಪ್ರಕಟಿತ.

ಯಕ್ಷನಟಸಾರ್ವಭೌಮ-ಕುರಿಯ ವಿಠಲಶಾಸ್ತ್ರಿ - ಪ್ರಕಟಿತ.

ಮರ್‍ಯಾದಾ ಪುರುಷೋತ್ತಮ ಶ್ರೀರಾಮ ಗದ್ಯಕೃತಿ - ಅಪ್ರಕಟಿತ.

ಸಂಶೋಧನಾತ್ಮಕ, ಸಾಹಿತ್ಯಕ ಬಿಡಿಬರೆಹಗಳು, ಕವಿತೆಗಳು ಹಲವಾರು ಪ್ರಕಟಗೊಂಡಿವೆ.

'ಯಕ್ಷಗಾನ ಪ್ರಭಾ' ಸಂಶೋಧನಾತ್ಮಕ ಗ್ರಂಥವಾಗಿದ್ದು ರಾಜ್ಯಮಟ್ಟದ ಪುರಸ್ಕಾರ ಗಳಿಸಿದೆ.

ಭಾಗವತದ (ಭಾರತದರ್ಶನ ಪ್ರಕಾಶನ ಬೆಂ) ಮಂಗಳ ಸಂಚಿಕೆಯಲ್ಲಿ "ರಾಜಕಾರಣಿ ಶ್ರೀಕೃಷ್ಣ"ವೆಂಬ ವಿಶೇಷ ಲೇಖನ ಪ್ರಕಟವಾಗಿದೆ.

ಬಾಯಾರಲ್ಲಿ ಕೆಲವು ವರ್ಷಗಳವರೆಗೆ ಅನೇಕರಿಗೆ ಹಿಂದಿ ಶಿಕ್ಷಣವನ್ನು ನೀಡಿ 'ಹಿಂದೀ ಕೃಷ್ಣ'ನೆಂದೇ ಹೆಸರಾಗಿದೆ.

ಪುತ್ತೂರು ತಾಲೂಕಿನ 2ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನ.

ಕಳೆದ 1998 ನವೆಂಬರನಲ್ಲಿ ಕಡಬದಲ್ಲಿ ಸನ್ಮಾನ. ಅದಕ್ಕೆ ಮೊದಲು ಅಕ್ಟೋಬರ್‌ದಲ್ಲಿ ಆಲಂಗಾರಲ್ಲಿ ಸನ್ಮಾನ. ಬೆಳ್ಳಾರೆಯಲ್ಲೂ ಸನ್ಮಾನಿತರು.

ಮಂಗಳೂರು ನಗರದಲ್ಲಿ ಹವ್ಯಕ ಸಭಾದಿಂದ ದೊರೆತಿದೆ. ಸಾರ್ವಜನಿಕ ಸನ್ಮಾನ, ಮಾನಪತ್ರಗಳು ಲಭಿಸಿವೆ.

1960ರಲ್ಲಿ ಉಪ್ಪಿನಂಗಡಿ ಪೇಟೆಯ ಸಮೀಪ ಒಂದು ಬಂಜರು ಸ್ಥಳವನ್ನು ಕೊಂಡುಕೊಂಡು ಅದರಲ್ಲಿ ಅಡಕೆ, ತೆಂಗು, ರಬ್ಬರು, ಗೇರು ಮುಂತಾದ ಕೃಷಿಕಾಯಕದಲ್ಲಿ ತೊಡಗಿದ್ದಾರೆ. ಈಗ ವೃದ್ಧಾಪ್ಯ ಜೀವನ.

7 ಮಂದಿ ಮಕ್ಕಳು (3 ಮಂದಿ ಗಂಡು, 4 ಮಂದಿ ಹೆಣ್ಣು ಮಕ್ಕಳು). ಎಲ್ಲವರೂ ಡಿಗ್ರಿ ಪಡೆದವರು ಹಾಗೂ ವಿವಾಹಿತರು.

ಹಿರಿಯ ಮಗನಾದ ಡಾ|| ತಾಳ್ತಜೆ ವಸಂತಕುಮಾರ್ ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥನಾಗಿದ್ದಾನೆ. ಇನ್ನೊಬ್ಬನು ಕೇಮ್ಕೊದಲ್ಲಿ ಉದ್ಯೋಗಿ. 3ನೆಯವನು ಮನೆಯಲ್ಲಿ ತೋಟಗಾರಿಕೆ ಮಾಡುತ್ತಿದ್ದಾನೆ. ಫಕೀರಪ್ಪ ಶೆಟ್ರ ಸಮಕಾಲೀನರಾಗಿದ್ದು, ಅರ್ಧಗಾರಿಕೆಯಲ್ಲಿ ಪಳಗಿದವರು. ಸ್ತ್ರೀವೇಷಧಾರಿ ಪಾತಾಳವೆಂಕಟ್ರಮಣ ಭಟ್ಟರೇ ಮೊದಲಾದವರಿಗೆ ಸ್ಫೂರ್ತಿದಾತರು, ಒಳ್ಳೆಯ ವಿಮರ್ಶಕರು ಸಹ. ಹೀಗೆ ತಾಳ್ತಜೆ ಕೃಷ್ಣಭಟ್ಟರು ಯಕ್ಷಗಾನ ಕ್ಷೇತ್ರದ ಭೀಷ್ಮರೆನಿಸಿಕೊಂಡಿದ್ದಾರೆ.

ಸಂಪಾದಿತ ಲೇಖನಗಳು

ಅಷ್ಟಾವಧಾನಿ ಡಾ. ಕಬ್ಬಿನಾಲೆ ವಸಂತ ಭಾರಧ್ವಾಜ್

ಯಕ್ಷಗಾನವು ಒಂದು ಅಸ್ಪ್ರಶ್ಯ ಕಲೆ ಎನಿಸಿದ ಕಾಲದಲ್ಲೆ, ಹರಿದಾಸರುಗಳ ಪ್ರವೇಶ ಒಂದು ಐತಿಹಾಸಿಕ ತಿರುವು ಯಕ್ಷಗಾನ ಪ್ರಪಂಚಕ್ಕೆ ನೀಡಿತು. ಯಕ್ಷಗಾನದ ಪೌರಾಣಿಕ ವ್ಯಕ್ತಿಗಳ ಅಭಿವ್ಯಕ್ತಿ ಸ್ವರೂಪ, ಬೌದ್ಧಿಕ ವಿಮರ್ಶೆ, ಪಂಡಿತರನ್ನೂ, ಪಾಮರರನ್ನೂ, ಎಚ್ಚರಿಸಿದುದಲ್ಲದೆ, ಯಕ್ಷಗಾನವು ತನ್ನ ಸ್ವರೂಪದಲ್ಲೇ ಮಹತ್ತರ ಬದಲಾವಣೆ ಪಡೆದು, ವೈಶಿಷ್ಟ್ಯಪೂರ್ಣ ಸರ್ವಮಾನ್ಯ ಕಲೆಯಾಗಿ ರಂಜಿಸಿತು. ಇದರ ಪ್ರಭಾವದಿಂದಲೇ ವಿದ್ಯಾವಂತರು, ಯಕ್ಷಗಾನ ವಿಮರ್ಶೆಗಳಿಗಾಗಿ ಕಮ್ಮಟ, ಗೋಷ್ಠಿಗಳಲ್ಲಿ ತೊಡಗಿಸಿಕೊಂಡರು. ಇವೆಲ್ಲಕ್ಕೂ ಮುಕುಟ ಪ್ರಾಯವಾಗಿ ಯಕ್ಷಗಾನದಲ್ಲಿ ಅವಧಾನಕಲೆ ಆರಂಭವಾಗಿ, ಯಕ್ಷಗಾನವನ್ನು ಕನ್ನಡ ಸಾಹಿತ್ಯದ ಕೀರ್ತಿ ಶಿಖರದಲ್ಲಿರಿಸಿತು. ಕ.ಪು. ಸೀತಾರಾಮ ಕೆದಿಲಾಯ, ಶೀಮಂತೂರು ನಾರಾಯಣ ಶೆಟ್ಟರಂತಹ ವಿದ್ವಾಂಸರು ಯಕ್ಷಗಾನ ಛಂದಸ್ಸನ್ನು ವಿದ್ವಜ್ಜನರಿಗೆ ಪ್ರಕಾಶ ಪಡಿಸಿದಾಗಲೇ ಸಾಹಿತ್ಯಕಾರರು ಯಕ್ಷಗಾನದ ಬಗ್ಗೆ ಹುಬ್ಬೇರಿಸಿದ್ದಾರೆ. ಆದರೆ ವಿಶಿಷ್ಟವಾದ ವಿದ್ವತ್ಪೂರ್ಣವಾದ ಅವಧಾನ ಕಲೆಯನ್ನು ಯಕ್ಷಗಾನದಲ್ಲಿ ಅಳವಡಿಸಿದ ಕೀರ್ತಿ ಡಾ. ಕಬ್ಬಿನಾಲೆ ವಸನ್ತ ಭಾರಧ್ವಾಜರಿಗೆ ಸಲ್ಲುತ್ತದೆ. ನ ಭೂತೋ, ನ ಭವಿಷ್ಯತಿ ಎಂದಾಗಬಹುದಾದ ಈ ಕಲೆಯ ಸಿದ್ಧಿ ಸಾಧನೆ, ಬಹುಶಃ ಈ ಕಂಪ್ಯೂಟರ್ ಯುಗಕ್ಕೆ ಸವಾಲೇ ಸರಿ.

ತಾ.5-12-1961ರಂದು ಕಾರ್ಕಳ ತಾಲೂಕಿನ ಗ್ರಾಮೀಣ ಪ್ರದೇಶವಾದ ಕಬ್ಬಿನಾಲೆಯಲ್ಲಿ ಮಧುಸೂಧನ ಭಟ್ ಮತ್ತು ಸುಮತಿ ಅಮ್ಮನವರ ಪುತ್ರರಾಗಿ ಜನಿಸಿದ ಇವರು ಪ್ರಾಥಮಿಕ, ಮಾಧ್ಯಮಿಕ ವಿದ್ಯಾಭ್ಯಾಸದ ಬಳಿಕ, ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. (ಕನ್ನಡ) ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದರು. ಆ ಬಳಿಕ ಮುಂಬಯಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕರ್ಸ್‌ನಿಂದ ಎ.ಸಿ.ಐ.ಐ.ಒ ಪದವಿಯನ್ನು ಪಡೆದರು. "ಯಕ್ಷಗಾನ ಕಾವ್ಯಗಳಲ್ಲಿ ಛಂದಸ್ಸು" ಎಂಬ ಸಂಶೋಧನಾತ್ಮಕ ಪ್ರೌಢ ಮಹಾ ಪ್ರಬಂಧಕ್ಕೆ ಮೈಸೂರು

ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪ್ರಶಸ್ತಿ ಪಡೆದ ಈ ತರುಣ ವಿದ್ವಾಂಸ ನಮ್ಮ ನಾಡಿನ ಪಂಡಿತ ಪರಂಪರೆಗೆ ವರ್ತಮಾನ ಕಾಲದ ಕೊಂಡಿಯಾಗಿದ್ದಾರೆ.

ಹಲವಾರು ಕಥೆ, ಕವಿತೆಗಳನ್ನು ಬರೆದಿರುವ ಇವರಿಗೆ "ನುಡಿಸು ಬಾ ಇಂಚರವ" ಭಾವಗೀತೆಗಳ ಸಂಕಲನಕ್ಕೆ 1991ರಲ್ಲಿ "ವಿಶ್ವಭಾರತೀಯ ಪುರಸ್ಕಾರ" ಸಂದಿದೆ. 1996ರಲ್ಲಿ ದ.ಕ. ಜಿಲ್ಲಾ ಸಾಹಿತ್ಯ ಪರಿಷತ್ತಿನಿಂದ ಸನ್ಮಾನ ಸಂದಿದೆ. ಮೈಸೂರಿನ ಉಜ್ವಲ ಕನ್ನಡ ಕಲಾಮಂದಿರದಿಂದ "ಜ್ಞಾನ ಜ್ಯೋತಿ" ಪ್ರಶಸ್ತಿ 1997ರಲ್ಲಿ ಇವರಿಗೆ ನೀಡಲಾಯಿತು.

ಅವಧಾನ ಕಲೆಯೆಂಬ ಆತ್ಮಪೂರ್ವ ವಿದ್ವತ್ ಪ್ರದರ್ಶನದಲ್ಲಿ ಪ್ರತಿಭಾ ಸಂಪನ್ನರೆನಿಸಿದ ಕರ್ನಾಟಕದ ಇಬ್ಬರು ಅಷ್ಟಾವಧಾನಿಗಳಲ್ಲಿ ಒಬ್ಬರೆಂದು ಪ್ರಖ್ಯಾತಿಯೊಂದಿಗೇ ಯಕ್ಷಗಾನ ಅಷ್ಟಾವಧಾನವೆಂಬ ಹೊಸ ಪ್ರಯೋಗದ ಹುಕಾರರೆನಿಸಿದ್ದಾರೆ. ಇವರ ಸ್ವೋಪಜ್ಞ ಸೃಷ್ಟಿಯಾದ "ಯಕ್ಷಗಾನ ಅಷ್ಟಾವಧಾನ" ಪ್ರದರ್ಶನ ಇಡೀ ಪ್ರಪಂಚದಲ್ಲಿಯೇ ಏಕಮೇವ ಸೃಜನಶೀಲ ಶಾಸ್ತ್ರಪ್ರಯೋಗವೆಂಬ ಮನ್ನಣೆ ಗಳಿಸಿದೆ.

ಡಾ॥ ಶಿವರಾಮ ಕಾರಂತರ ಯಕ್ಷಗಾನ ಬ್ಯಾಲೆಗಳಲ್ಲಿ ದುಡಿದಿರುವ ಇವರು ಎಂಟು ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ. ಪುರಂದರದಾಸರ ಹಾಡುಗಳ ತುಳು ಅನುವಾದವನ್ನೂ ಮಾಡಿದ್ದಾರೆ. ನಾಡಿನ ಹಲವಾರು ಸಾಹಿತ್ಯ ಸಮ್ಮೇಳನ ಮತ್ತು ವಿಚಾರ ಗೋಷ್ಠಿಗಳಲ್ಲಿ ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಇವರ ಲೇಖನಗಳು ತರಂಗ, ಉದಯವಾಣಿ, ತುಷಾರ, ಕರ್ಮವೀರ, ಯುಗಪುರುಷ, ಹೊಸದಿಂಗತ, ಮುಂತಾದ ನಾಡಿನ ವಿವಿಧ ಪತ್ರಿಕೆಗಳಲ್ಲಿ ಕಥೆ, ಕವಿತೆಗಳ ಸಹಿತ ಪ್ರಕಟಗೊಂಡಿವೆ. ತುಳು ಅಕಾಡೆಮಿಯ ಸದಸ್ಯರೂ ಹೌದು. ಇತ್ತೀಚೆಗೆ ಕಾರ್ಕಳ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪಟ್ಟವನ್ನೂ ಅಲಂಕರಿಸಿದ್ದಾರೆ.

ಮುಂಬಯಿ, ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಉಡುಪಿ, ಮಂಗಳೂರು, ಕುಮಟಾ, ಸಿರ್ಸಿ, ಸಾಗರ, ಚಿತ್ರದುರ್ಗ ಮತ್ತು ಹಾಸನ ಮುಂತಾದ ಕಡೆ ಜರಗಿದ ಇವರ ಅಷ್ಟಾವಧಾನ ಪ್ರದರ್ಶನ, ಜನಮನವನ್ನು ಆಕರ್ಷಿಸಿದೆ. ಕನ್ನಡದಲ್ಲಿ ಮರೆಯಾಗಿ ಹೋಗಿದ್ದ ವಿದ್ವತ್ ಕಲೆಯೊಂದನ್ನು ಜೀವಂತವಾಗಿಸುವ ಅವರ ಸಾಧನೆ, ಸಿದ್ಧಿ, ನಿಜವಾಗಿಯೂ ಅನುಪಮ, ಅಂತೆಯೇ ಅಭಿನಂದನೀಯ.

ಮುಂಬೈಯಲ್ಲಿ ಇತ್ತೀಚೆಗೆ ನಡೆದ ಎಂಟನೇ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ಕಾರ್ಯಕ್ರಮಕ್ಕೆ ಕಳೆ ನೀಡಿದ್ದಾರೆ. ಪಾದರಸದಂತೆ ಚುರುಕಾಗಿರುವ ವ್ಯಕ್ತಿತ್ವದ ಇವರು ಅವಧಾನ ಕಾರ್ಯದಲ್ಲೂ ಹಸನ್ಮುಖದಿಂದಲೇ, ಪ್ರೇಕ್ಷಕರನ್ನು ರಂಜಿಸುತ್ತಾ ತಮ್ಮ ವಿದ್ವತ್ಪ್ರಭಾವ ಪ್ರಕಟಿಸುವಾಗಲೂ ಯಾವುದೇ ಅಹಂತನವಿಲ್ಲದ, ನಿರಾಡಂಬರ ವ್ಯಕ್ತಿತ್ವ ವಿದ್ಯೆಯೊಂದಿಗಿನ ವಿನಯಕ್ಕೊಂದು ಆದರ್ಶವೇ ಸರಿ. ಬೆಂಗಳೂರಿನಲ್ಲಿ ನಡೆದ ಅವಧಾನ ಕಾರ್ಯಕ್ರಮದಲ್ಲಿ ಇನ್ನೋರ್ವ ಅವಧಾನಿ ಡಾ. ಗಣೇಶರವರು ಪೃಚ್ಛಕರಾಗಿ ಭಾಗವಹಿಸಿದ್ದೂ ಇವರ ಹಿರಿಮೆಯೇ ಸರಿ.

ಪತ್ನಿ ಗೀತಾ ಹಾಗೂ ಮಗಳು ಭಾಮಿನಿ ಹಾಗೂ ಯಾಮಿನಿಯರೊಂದಿಗೆ ಆದರ್ಶಗೃಹಸ್ಥನಾಗಿ ಕಲಾವಿದನಾಗಿಯೂ, ಆರ್ಥಿಕ ಪ್ರಪಂಚದ, ಬ್ಯಾಂಕ್ ಉದ್ಯೋಗಿಯಾಗಿದ್ದಾರೆ. ತಮ್ಮ ಬಿಡುವಿನ ಸಮಯದಲ್ಲಿ, ಯಕ್ಷಗಾನಕ್ಕಾಗಿ ತೊಡಗಿಸಿಕೊಳ್ಳುವ ಈ ವಿದ್ವಾಂಸರಿಂದ, ಕಲಾಭಿಮಾನಿಗಳು ಪಡೆಯಬಹುದಾದದ್ದು ಅನಂತವಿದೆ. ಅವಧಾನ ಕಲೆ ಜನಪ್ರಿಯಗೊಳಿಸಬೇಕಾದುದೂ ನಮ್ಮ ಕರ್ತವ್ಯ.

(ಕುಬಣೂರು ಶ್ರೀಧರರಾವ್)

ಸೃಜನಶೀಲ ನಟಸಾರ್ವಭೌಮ ಕುರಿಯ ವಿಠಲಶಾಸ್ತ್ರಿಗಳು

''ಕುರಿಯ ವಿಠಲ ಶಾಸ್ತ್ರಿ'' ಎನ್ನುವಷ್ಟರಲ್ಲೇ ಸಮಗ್ರ ಯಕ್ಷಗಾನ ಅನಾವರಣಗೊಳ್ಳುತ್ತದೆ ಹೇಗೋ, ಹಾಗೇ ಇಷ್ಟರಲ್ಲೇ ಇಡೀ ಯಕ್ಷಗಾನ ಅಡಕವಾಗಿದೆ. ಮೂರು ದಶಕಗಳ ಕಾಲ ಯಕ್ಷ ರಾತ್ರಿಯ ಪುರಾಣ ಪುರುಷನಾಗಿ ನರ್ತಿಸಿದ ಈ ನಟರಾಜ ಯಕ್ಷಗಾನ ರಂಗಕ್ಕೆ ಕೊಟ್ಟ ಕೊಡುಗೆ ಅಪಾರ ಮೌಲಿಕವಾದುದು. ತನ್ನ ಅದ್ಭುತವಾದ ನಟನಾ ವಿಶೇಷತೆಯಿಂದ, ಅಭಿನಯದ ಲಾಲಿತ್ಯದಿಂದ ಹಾಗೂ ಭಾವನೆಯನ್ನು ವಿಚಾರದಿಂದ ಆಳಿದ ಸಾಹಿತ್ಯ ಪ್ರೌಢಿಮೆಯಿಂದ ವಿದ್ಯಾವಂತರನ್ನೂ, ವಿಚಾರವಾದಿಗಳನ್ನೂ ಯಕ್ಷಗಾನದತ್ತ ಎಳೆದ ಸೆಳೆದ ಕಾಂತಿಯ ಗುಣಗಳ ಸಾಗರ ಕೀರ್ತಿಶೇಷ ಶಾಸ್ತ್ರಿಗಳು.

ಹವ್ಯಕ ಸಮಾಜದ ಶ್ರೇಷ್ಠ ಮನೆತನಗಳಲ್ಲೊಂದಾದ ಚಕ್ರಕೋಡಿ ಶಾಸ್ತ್ರಿ ಮನೆತನದ ಕುರಿಯ ವೆಂಕಟರಮಣ ಶಾಸ್ತ್ರಿ ಹಾಗೂ ಶಂಕರಿ ಅಮ್ಮ ದಂಪತಿಗಳಿಗೆ ಹಿರಿಯ ಮಗನಾಗಿ 1912 ಆಗಸ್ಟ್ 25ರಂದು ಜನನ. ಒಬ್ಬ ತಮ್ಮ (ರಾಮಶಾಸ್ತ್ರಿ) ಮತ್ತು ಇಬ್ಬರು ತಂಗಿಯರಿಗೆ ಇವರು ಹಿರಿಯಣ್ಣ. ತಂದೆ ವೆಂಕಟ್ರಮಣ ಶಾಸ್ತ್ರಿಗಳು ಅತ್ಯುತ್ತಮ ಯಕ್ಷಗಾನ ನಾಟಕ ಕಲಾವಿದರು. ಈ ಕಾರಣದಿಂದ ಬಾಲಕ ವಿಠಲನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಜೊತೆಗೇ ಯಕ್ಷಗಾನದಲ್ಲಿ ಆಸಕ್ತಿ ಬಿತ್ತಲ್ಪಟ್ಟಿತು. ನಿತ್ಯ ಸಾಯಂಕಾಲದ ಹೊತ್ತಿಗೆ ಮನೆಯಂಗಳದಲ್ಲೇ ಮನೆ ಮಂದಿಯ, ಗೆಳೆಯರ ಜೊತೆಗೂಡಿಕೊಂಡು ನಿತ್ಯ ಬಯಲಾಟವಾಗುತ್ತಿತ್ತು. ತಾಳಮದ್ದಳೆ ನಡೆಯುತ್ತಿತ್ತು.

ತನ್ನ ಹದಿಮೂರನೆ ವಯಸ್ಸಿನಲ್ಲೇ ಶ್ರೀ ಕೋಳ್ಯೂರು ಶಂಕರ ನಾರಾಯಣ ಯಕ್ಷಗಾನ ನಾಟಕ ಸಭಾ (ವೆಂಕಟ್ರಮಣ ಶಾಸ್ತ್ರಿಗಳು ನಡೆಸುತ್ತಿದ್ದ) ದಲ್ಲಿ ರಂಗಪ್ರವೇಶ. ತಂದೆ ಮಗನ ಹಿರಣ್ಯಕಶ್ಯಪ ಪ್ರಹ್ಲಾದ, ಕಂಸ–ಕೃಷ್ಣ ಜೋಡಿ ಯಶಸ್ವಿಯಾಗಿತ್ತು. ಆ ಹೊತ್ತಿಗೆ ಪುತ್ತೂರಿನಲ್ಲಿ ಶಿವರಾಮ ಕಾರಂತರು ನಡೆಸುತ್ತಿದ್ದ ಕಿನ್ನರ ನೃತ್ಯ ತಂಡದಲ್ಲಿ ಸೇರಿ ಮೂಕಾಭಿನಯ ಅಭ್ಯಸಿಸಿದರು. ಮನೆಯಲ್ಲಿ ಹಿರಿಯರ ನಿಷೇಧದ ಹೊರತಾಗಿಯೂ, ಕಟೀಲು ಮೇಳಕ್ಕೆ ಸೇರಿದರು. ತನ್ನಲ್ಲಿನ ನಾಟ್ಯಗಾರಿಕೆಯ ಕೊರತೆಯನ್ನು ಸ್ವತಃ ಕಂಡುಕೊಂಡ ಶಾಸ್ತ್ರಿಗಳು ಪ್ರಸಿದ್ಧ ಕಲಾವಿದರಾದ ಕಾವುಗೋಳಿ

ಕಣ್ಣನ್‌ರವರಲ್ಲಿ ನಾಟ್ಯಾಭ್ಯಾಸ ಮಾಡಿದರು. ಅಂದಿನ ಭರತನಾಟ್ಯ ಪ್ರವೀಣ ಡಾ. ಪರಮಶಿವನ್‌ರಿಂದ ಭರತನಾಟ್ಯದ ನಡೆಗಳನ್ನೂ ಕಲಿತ ಶಾಸ್ತ್ರಿಗಳು ಯಕ್ಷಗಾನ ನೃತ್ಯಕ್ಕೆ ಸ್ವಸಂಸ್ಕಾರ ನೀಡಿ ತಾನೊಬ್ಬ ಪರಿಪೂರ್ಣ ಕಲಾವಿದರಾಗಿ ರೂಪುಗೊಂಡರು. ಇಷ್ಟರಲ್ಲಿ ಸೌಭಾಗ್ಯವತಿ ಗಂಗಮ್ಮನವರ ಕೈ ಹಿಡಿದು ಒಂದು ಗಂಡು ಹಾಗೂ ಒಂದು ಹೆಣ್ಣು ಮಗುವಿಗೆ ತಂದೆಯಾಗಿ ಸಂಸಾರಿಯಾದರು.

ಮುಂದಿನ ತಿರುಗಾಟವನ್ನು ಇರಾಶ್ರೀ ಸೋಮನಾಥೇಶ್ವರ ಮೇಳದಲ್ಲಿ ಪ್ರಮುಖ ಪಾತ್ರಧಾರಿ ಹಾಗೂ ವ್ಯವಸ್ಥಾಪಕನಾಗಿ ಪೂರೈಸಿದರು. ಆಗಷ್ಟೇ ಇವರ ಪ್ರತಿಭೆಯಿಂದ ಪ್ರಭಾವಿತರಾದ ಕೀರ್ತಿಶೇಷ ಪೂಜ್ಯ ಮಂಜಯ್ಯ ಹೆಗ್ಗಡೆಯವರು ಶಾಸ್ತ್ರಿಗಳನ್ನು ಕರೆಸಿಕೊಂಡರು. ಆ ಬಳಿಕದ ತಿರುಗಾಟದ ಬೆಳ್ಳಿಹಬ್ಬವನ್ನು ಶಾಸ್ತ್ರಿಗಳು ಶ್ರೀ ಧರ್ಮಸ್ಥಳ ಮೇಳದಲ್ಲಿ ಪೂರೈಸಿದರು. ಪ್ರಧಾನ ನಟನಾಗಿ ಮೇಳದ ಯಜಮಾನಿಕೆಯನ್ನೂ ನಿರ್ವಹಿಸಬೇಕಾಗಿದ್ದ ಆ ಕಾಲದಲ್ಲಿ ವಿಠಲರಿಗೆ ಹೆಗಲು ಕೊಟ್ಟು ಮೇಳದ ವ್ಯವಸ್ಥೆಯನ್ನು ನೋಡಿಕೊಳ್ಳುವಲ್ಲಿ ಸಹಕರಿಸಿದರು, ಸಹೋದರ ರಾಮಶಾಸ್ತ್ರಿಗಳು.

ತನ್ನ ಈ ಯಶಸ್ವೀ ತಿರುಗಾಟದಲ್ಲಿ ಆ ಕಾಲದ ದಿಗ್ಗಜರು, ಹೇಮಾಹೇಮಿಗಳು ಹಿಮ್ಮೇಳವನ್ನು ವೈಭವೀಕರಿಸಿದರು. ಶೇಣಿಯವರಿಗೆ ಗೆಜ್ಜೆ ಕಟ್ಟಿದ ಕೀರ್ತಿ, ದೇರಾಜೆಯವರಿಗೆ ವೇಷ ತೊಡಿಸಿದ ಹೆಗ್ಗಳಿಕೆ, ದೊಡ್ಡ ಸಾಮಗ ಹಾಗೂ ಶೇಣಿ ಜೋಡಿಯನ್ನು ರಂಗಕ್ಕೇರಿಸಿದ ಹೆಮ್ಮೆ ವಿಠಲ ಶಾಸ್ತ್ರಿಗಳದ್ದು. ಮೂಲೆಪಾಲಾಗಿದ್ದ ರಾವಣವಧೆ, ಮಾಗಧವಧೆ, ಕೃಷ್ಣ ಸಂಧಾನ, ಅಂಗದ ಸಂಧಾನ, ವಾಮನ ಚರಿತ್ರೆ, ಚಂದ್ರಾವಳಿ ವಿಲಾಸ, ಪ್ರಸಂಗಗಳು ರಂಗದಲ್ಲಿ ಮೆರೆದವು.

ಈ ಅಗ್ರಪಂಕ್ತಿಯ ಕೂಟದ ಧರ್ಮಸ್ಥಳ ಮೇಳವನ್ನು 1950ರಲ್ಲಿ ಕಲ್ಯಾಣಪುರಹೊಳೆ ದಾಟಿಸಿದ, ಸೀಮೋಲ್ಲಂಘನ ಮಾಡಿದಂದೇ ಉತ್ತರ ಕನ್ನಡಕ್ಕೆ 70 ಪ್ರದರ್ಶನಗಳು ಬುಕ್ಕಿಂಗ್ ಆಗಿತ್ತು. ಬ್ರಹ್ಮ ಕಪಾಲದ ಈಶ್ವರ, ದಕ್ಷಾಧ್ವರದ ಈಶ್ವರ, ಚೂಡಾಮಣಿಯ ಹನುಮಂತ, ಕ್ಷೇತ್ರ ಮಹಾತ್ಮೆಯ ಶಿವ ಹಾಗೂ ಅಣ್ಣಪ್ಪ, ಕೃಷ್ಣಲೀಲೆ ಕಂಸವಧೆಯ ಕೃಷ್ಣ, ಪಟ್ಟಾಭಿಷೇಕ ಪಂಚವಟಿಯ ರಾಮ, ಅಲ್ಲದೆ ಕರ್ಣ, ಶೂರ್ಪನಖಿ, ಸುಧನ್ವ, ಭರತ, ಭೀಮ, ಕೀಚಕ, ಭಸ್ಮಾಸುರ, ರಾವಣೋದ್ಭವದ ರಾವಣ, ವಿಶ್ವಾಮಿತ್ರ, ಕಂಸ, ಜರಾಸಂಧ, ದೂರ್ವಾಸ ಹೀಗೆ ಶಾಸ್ತ್ರಿಗಳು ಮಾಡದ ವೇಷಗಳು ತೀರಾ ವಿರಳ. ಆದೂರ ಪ್ರೇಕ್ಷಕರು ಮುಗಿ ಬೀಳುತ್ತಿದ್ದುದು ಶಾಸ್ತ್ರಿಗಳ ಕೃಷ್ಣ, ಈಶ್ವರ ಹಾಗೂ ಹನುಮಂತನ ಪಾತ್ರಗಳಿಗೆ. ಬಡಗಿನಾಚೆ ದಿಗ್ವಿಜಯ ಮಾಡಿದ ಶಾಸ್ತ್ರಿಗಳು ಮೂಡಬಿದಿರೆಯಲ್ಲಿ ನಿರಂತರ 48 ದಿನಗಳ ಒಂದೇ ರಂಗಸ್ಥಳದಲ್ಲಿ

ಕಿಕ್ಕಿರಿದ ಪ್ರೇಕ್ಷಕರ ಮುಂದೆ ನರ್ತಿಸಿದ್ದರು. ಅನೇಕ ಜೋಡಾಟಗಳನ್ನೂ ವ್ಯವಸ್ಥೆಗೊಳಿಸಿ ಯಶಸ್ವಿ ಸಂಘಟಕ ಎನಿಸಿದ್ದರು.

ತನ್ನ ಕಲಾಪ್ರದರ್ಶನದುದ್ದಕ್ಕೂ ಯಕ್ಷಗಾನದಲ್ಲಿ ಹೊಸ ಕ್ರಾಂತಿಯನ್ನುಂಟು ಮಾಡಿದ ಕೀರ್ತಿ ಶಾಸ್ತ್ರಿಗಳದು. ಜುಟ್ಟು ಬಿಗಿದ ವನವಾಸದ ರಾಮ-ಲಕ್ಷ್ಮಣರು, ಚೋಲೆ ಹಾಕಿದ ಹನುಮಂತ, ನಾಟಕೀಯ ಮೈಬಿಟ್ಟ ಪಾತ್ರಗಳು ಇದನ್ನೆಲ್ಲ ರಂಗಕ್ಕೆ ತಂದು, ಪ್ರದರ್ಶಿಸಿ ವಿದ್ವಾಂಸರಿಂದ ಮೆಚ್ಚುಗೆ ಗಳಿಸಿಕೊಂಡಿದ್ದಾರೆ. ಯಾವುದೇ ಪಾತ್ರವಿರಲಿ ರಂಗದ ಚಲನೆ, ಚುರುಕುತನ, ಪೂರ್ಣ ಪಾತ್ರ ತಲ್ಲೀನತೆ, ಪ್ರತಿಸಲವೂ ಒಂದೇ ತಾಳವಾದರೂ ಬಿಡಿತ, ಮುಕ್ತಾಯದ ಕುಣಿತದಲ್ಲಿನ ವೈವಿಧ್ಯತೆ, ಅಭಿನಯ, ಹೀಗೆ ಎಲ್ಲದರಲ್ಲೂ ಶಾಸ್ತ್ರಿಗಳಿಗೆ ಶಾಸ್ತ್ರಿಗಳೇ ಸಾಟಿ. ಕುಣಿತಕ್ಕೆ ನಾಜೂಕು, ವಿಲಾಸ, ನಯ, ಮಾತುಗಾರಿಕೆಗೆ ಸಾಹಿತ್ಯ ಹಾಗೂ ಭಾವಪೂರ್ಣತೆ, ವೇಷಗಾರಿಕೆಗೆ ನಾವೀನ್ಯ ಸೊಬಗನ್ನು ನೀಡಿದವರಲ್ಲಿ ಶಾಸ್ತ್ರಿಗಳು ಏಕಮೇವಾದ್ವಿತೀಯ. ವಿಠಲ ಶಾಸ್ತ್ರಿಗಳು ಬಹುವಾಗಿ ಮೆರೆಯುವಲ್ಲಿ ಇವರ ಯಶಸ್ಸಿನ ಹಿಂದೆ ರಾಮಶಾಸ್ತ್ರಿಗಳಾದರೆ, ಮುಂದೆ ರಂಗದಲ್ಲಿ ದಿ. ಅಗರಿ ಹಾಗೂ ನೆಡ್ಲೆಯವರು. ಈ ತ್ರಿಮೂರ್ತಿಗಳ ಸಂಕಲ್ಪದಿಂದ ಯಕ್ಷಕಲಾ ಮಾತೆ ವಿಠಲ ಶಾಸ್ತ್ರಿಗಳ ಮೂಲಕ ಅಭಿವ್ಯಕ್ತಗೊಂಡಳು.

ಯಕ್ಷರಂಗದ ಈ ತ್ರಿವಿಕ್ರಮಮೂರ್ತಿ ಅಸಂಖ್ಯ ಶಿಷ್ಯರಿಗೆ ಕುರಿಯದ ತನ್ನ ಮನೆಯಲ್ಲಿ ಊಟ ಹಾಕಿ ತನ್ನಲ್ಲಿನ ಕಲೆಯನ್ನು ಧಾರೆ ಎರೆದರು. ಎದ್ದು ಬಿದ್ದು ಬಿದ್ದೆದ್ದು ನಡೆಯುವ ಮಗುವೂ ಶಾಸ್ತ್ರಿಗಳಿಂದ ನಾಟ್ಯ ಕಲಿತದ್ದಿದೆ. ಈಗಿನ ಬಹುಮಂದಿ ಸಿದ್ಧ ಪ್ರಸಿದ್ಧರು ಕುರಿಯ ಗುರುಕುಲದ ವಿದ್ಯಾರ್ಥಿಗಳು ಎನ್ನುತ್ತಿದ್ದಾರೆ ಮಾತ್ರವಲ್ಲ ಇವರ ಕುಣಿತದಲ್ಲಿ ಶಾಸ್ತ್ರಿಗಳ ಪಟ್ಟನ್ನು ಕಾಣಬಹುದು. ಮೇಳದಲ್ಲೂ ಸದಾ ವ್ಯವಸಾಯಿ ಶ್ರೀಯುತ ಕುರಿಯರು. ಬೆಳಿಗ್ಗೆ ಹಿಂದಿನ ಪ್ರದರ್ಶನದ ಸಿಂಹಾವಲೋಕನ, ಮಧ್ಯಾಹ್ನದ ಬಳಿಕ ಅಂದಿನ ಪ್ರಸಂಗಕ್ಕೆ ತಯಾರಿ ಈ ಮಧ್ಯೆ ನೃತ್ಯಾಭ್ಯಾಸ, ಸಂಜೆ ಧ್ವನಿವರ್ಧಕದಲ್ಲಿ ಪ್ರಚಾರ, ಹೀಗೆ ಸಂಚಾಲಕರಾಗಿ, ನಿರ್ದೇಶಕರಾಗಿ, ಪ್ರಧಾನ ನಟನಾಗಿ ಶಾಸ್ತ್ರಿಗಳು ಬಹುಮುಖ ಪ್ರತಿಭೆಯುಳ್ಳವರು.

'ನನ್ನದೇನಿದೆ? ಇದೆಲ್ಲಾ ತಮ್ಮನ ಸಾಧನೆ, ನಾನು ಈ ಎತ್ತರಕ್ಕೆ ಏರಲು ನನ್ನ ತಮ್ಮನೇ ಕಾರಣ' ಎನ್ನುವ ವಿಠಲರ ಹೃದಯ ಶ್ರೀಮಂತಿಕೆಯ ಮುಂದೆ ಎಲ್ಲರೂ ತೀರಾ ಕುಬ್ಜರೇ ಹೌದು. ತೀರಾ ಅಸೌಖ್ಯವಿದ್ದಾಗ್ಯೂ ಅಭಿಮಾನಿಗಳಿಗಾಗಿ ವೇಷ ತೊಟ್ಟ ಶಾಸ್ತ್ರಿಗಳು ವಿಶ್ರಮಿಸಿದ್ದಿಲ್ಲ. ಹಾಗೂ ಸಹಕಲಾವಿದರ ಬಗ್ಗೆ ಅಪಾರ ಕಾಳಜಿ,

ಅದಮ್ಯ ಪ್ರೀತಿ ಇದ್ದ ಶಾಸ್ತ್ರಿಗಳು ಇತರರ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸುತ್ತಿದ್ದರು.

ಶಾಸ್ತ್ರಿಗಳ ಶರೀರಕ್ಕಾದ ಎಡಬಿಡದ ದಣಿವಿನಿಂದಾಗಿ 1964 ಜನವರಿ 14 ಅವರ ಕೊನೆಯ ತಿರುಗಾಟವಾಯಿತು. ಕ್ಷೇತ್ರ ಮಹಾತ್ಮೆಯ ಈಶ್ವರನಾಗಿ ತಾಂಡವವನ್ನಾಡುತ್ತಿದ್ದಂತೆ ಹೃದಯಾಘಾತಕ್ಕೊಳಗಾಗಿ ರಂಗದಲ್ಲಿ ಕುಸಿದ ಶಾಸ್ತ್ರಿಗಳು ಮತ್ತೆ ಕುಣಿಯಲೇ ಇಲ್ಲ. ತಮ್ಮ ರಾಮ ಶಾಸ್ತ್ರಿಗಳ ಸಾರಥ್ಯದ ತನ್ನ ಎಗ್ಗಿಲ್ಲದ ತಿರುಗಾಟಕ್ಕೆ ಮಂಗಲ ಹಾಡಿದರು. ತದನಂತರ ಊರಲ್ಲಿ ಮಾತ್ರವಲ್ಲದೆ ದೂರದ ಮದ್ರಾಸಿಗೂ ತೆರಳಿ ಅನೇಕರಿಗೆ ತರಬೇತಿ ನೀಡಿದರು. ಶ್ರೀಕ್ಷೇತ್ರ ಧರ್ಮಸ್ಥಳದ ಯಕ್ಷಗಾನ ತರಬೇತಿ ಕೇಂದ್ರದಲ್ಲಿ ಮೊದಲ ಗುರುವಾಗಿ ವಿದ್ಯಾದಾನ ಮಾಡಿದರು. 1972 ನವೆಂಬರ್ 19ರಂದು ಮನೆಯಲ್ಲೇ ಹಾಲು ಕುಡಿದು ಮಲಗಿದ ಶಾಸ್ತ್ರಿಗಳು ಮತ್ತೆ ಏಳಲಿಲ್ಲ. ಅನೇಕರನ್ನು ಕುಣಿಸಿದ. ನರ್ತಿಸಿದ ನಟರಾಜ ನಿಶ್ಚೇಷ್ಟಿತರಾದರು. ಕೀರ್ತಿ ಶೇಷರಾದರು.

ಶಾಸ್ತ್ರಿಗಳದು ಸಿದ್ಧಿ-ಪ್ರಸಿದ್ಧಿಗಳೆರಡನ್ನೂ ಗಳಿಸಿದ ಸಾರ್ಥಕ ಅನುಸರಣೀಯ ಜೀವನ ಅವರು ಏರಿದ ಎತ್ತರ ಕಲ್ಪನಾತೀತ. ಯಕ್ಷಗಾನ ಬಯಲಾಟವನ್ನು ಮರ್ಯಾದೆಯ ಮಣೆಗೇರಿಸಿದವರಲ್ಲಿ ಶಾಸ್ತ್ರಿಗಳು ಮೊದಲಿಗರು. ರಾಜ್ಯ ಹಾಗೂ ರಾಷ್ಟ್ರದಾದ್ಯಂತ ಕಲೆಯ ಮೆರುಗನ್ನು ಮೆರೆಸಿದ ಶಾಸ್ತ್ರಿಗಳಿಗೆ ರಾಜ್ಯ ಪ್ರಶಸ್ತಿ ಬಂದಿತ್ತು. ಅಸಂಖ್ಯ ಸನ್ಮಾನಗಳು ನಡೆದಿತ್ತು. ಕುರುಡ ಪದವಿನಲ್ಲಿ ಅವರ ಹೆಸರಿನಲ್ಲಿ ಸ್ಮಾರಕ ಪ್ರೌಢ ಶಾಲೆ ಇದೆ. ಇಂದು ನಾವು ಅಂದಿದ್ದ ಯಾರಲ್ಲಿ ಕೇಳಿದರೂ ''ಏತಲ ಮಾವನ ಹಾಂಗೆ ಇವು ಆರೂ ಅಲ್ಲ'' 'ಶಾಸ್ತ್ರಿಗಳ ಮುಂದೆ ಯಾರೂ ಇಲ್ಲ' ಇದನ್ನೇ ಕೇಳುತ್ತೇವೆ. ಹಾಗಾದ್ದರಿಂದ ನಮಗನ್ನಿಸುತ್ತಿದೆ ಶಾಸ್ತ್ರಿಗಳು ಈಗ ಇರುತ್ತಿದ್ದರೆ...! ಅಸಂಬದ್ಧ ಅಶ್ಲೀಲ ಪ್ರಸಂಗಗಳು ಆಗುತ್ತಿದ್ದುವೇ, ಇದ್ದರೆ ವಿರೋಧಿಸುತ್ತಲೂ ಇದ್ದರು. ಅಥವಾ ಕೊರಗುತ್ತಿದ್ದರು. ಹಾಳಾಗುತ್ತಿರುವ, ಮೌಲ್ಯ ಕಳಕೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ ಯಕ್ಷಗಾನವನ್ನು ಮತ್ತೊಮ್ಮೆ ನಿಜ ವೈಭವೀಕರಿಸುವ, ಮೆರೆಸುವ, ಶುದ್ಧೀಕರಣಗೊಳಿಸುವ ಜವಾಬ್ದಾರಿ ನಮ್ಮ ಮೇಲಿದೆ. ಅದನ್ನು ಮಾಡೋಣ ನಿರ್ವಹಿಸೋಣ.

(ಚಿನ್ಮಯಿ ಉಜಿರೆ)

ಯಕ್ಷಲೋಕದ ವನಸುಮ - ಪೊಳ್ಳಕಜೆ

ಕಡುಬಡತನದಲ್ಲಿ ಹುಟ್ಟಿ ಕಷ್ಟದಲ್ಲಿಯೇ ವಿದ್ಯಾಭ್ಯಾಸವನ್ನು ಮಾಡಿ, ಶಿಕ್ಷಕರಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ ಪೊಳ್ಳಕಜೆ ಗೋಪಾಲಕೃಷ್ಣ ಭಟ್ಟರು, ಕೇವಲ ಶಿಕ್ಷಣ ಕ್ಷೇತ್ರಕ್ಕಾಗಿ ತಮ್ಮ ಸೇವೆಯನ್ನು ಮೀಸಲಾಗಿರಿಸಲಿಲ್ಲ. ಕಲಾಕ್ಷೇತ್ರದಲ್ಲಿಯೂ ಕಲೆಗಾಗಿಯೇ ನಿಷ್ಠೆಯಿಂದ ದುಡಿದವರು. ಯಕ್ಷಗಾನ ಲೋಕದಲ್ಲಿ ಅವರೊಂದು ಎಲೆಯಮರೆಯ ಕಾಯಿ.

'ಪೊಳ್ಳಕಜೆ' ಎಂದೇ ಹೆಸರಾಗಿರುವ ಇವರು ಹುಟ್ಟಿದ್ದು ದ.ಕ. ಜಿಲ್ಲೆಯ ಕನ್ಯಾನ ಎಂಬ ಗ್ರಾಮದಲ್ಲಿ. ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಹತ್ತನೆಯ ತರಗತಿಯವರೆಗೆ ಓದಿ ಆಮೇಲೆ ಸರ್ಕಾರಿ ಕಲಾ ಶಾಲೆಯಲ್ಲಿ ಇಂಟರ್ ಮೀಡಿಯೆಟ್ ಮುಗಿಸಿದ್ದಾರೆ. ಅನಂತರ ಅಧ್ಯಾಪಕರಾಗಿ ಶಿಕ್ಷಣ ಕ್ಷೇತ್ರಕ್ಕೆ ಕಾಲಿರಿಸಿ, ಮುಖ್ಯೋಪಾಧ್ಯಾಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಮೊದಲಿನಿಂದಲೂ ಯಕ್ಷಗಾನದ ಕಡೆಗೆ ಒಲವು ಇದ್ದ 'ಪೊಳ್ಳಕಜೆ' ವಿದ್ಯಾರ್ಥಿ ಜೀವನದಲ್ಲಿಯೇ ಆ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ತಮ್ಮ ವಿದ್ಯಾರ್ಥಿಗಳಿಗೂ ಕೂಡ ಶಿಕ್ಷಣದ ಜೊತೆಗೆ ಯಕ್ಷಗಾನ ಕಲೆಯನ್ನೂ ಧಾರೆಯೆರೆದಿದ್ದಾರೆ.

ಯಕ್ಷಗಾನದ ವೇಷಗಳಲ್ಲಿ ನಳ ದಮಯಂತಿಯ ಪುಷ್ಕರ, ಋತುಪರ್ಣ, ಕೃಷ್ಣಾರ್ಜುನದ ಅರ್ಜುನ, ದೇವೇಂದ್ರ, ಮಹಿಷಾಸುರ ಪಾತ್ರಗಳಲ್ಲಿ ಇವರನ್ನು ಸರಿಗಟ್ಟುವವರೇ ವಿರಳ. ತಾಳಮದ್ದಳೆಯಲ್ಲಿ ಕೌರವ, ಭೀಮ, ರಾವಣರ ಪಾತ್ರಗಳು ಇವರಲ್ಲಿ ಪುನರ್ಜನ್ಮ ಪಡೆಯುತ್ತವೆ. ದೂತನ ಪಾತ್ರದಿಂದ ಹಿಡಿದು, ಶಕುನಿ, ಗುರುಕೃಪ, ದ್ರೋಣ ಇತ್ಯಾದಿ ಪಾತ್ರಗಳಲ್ಲಿ ಇವರಿಗೆ ಸರಿಸಾಟಿಯಿಲ್ಲವೆಂದೇ ಹೇಳಬೇಕು.

ದಿ. ಮಾಧವ ಶೆಟ್ಟರಿಂದ ಶಾಸ್ತ್ರೀಯ ನಾಟ್ಯಾಭ್ಯಾಸ ಮಾಡಿರುವ ಇವರು ಈಗಲೂ ಕೂಡ ತಮ್ಮ ಬಳಿ ಬರುವ ಯಕ್ಷಗಾನ ಕಲಾಸಕ್ತರಿಗೆ ಪ್ರಾಂಜಲ ಮನಸ್ಸಿನಿಂದ ಹೇಳಿಕೊಡುವ ಪೊಳ್ಳ ಕಜೆಯವರು, ಚಿಕ್ಕಮಕ್ಕಳಿಗೆ ನಾಟ್ಯ ಕಲಿಸಿ ಅವರನ್ನು ಕುಣಿಸಿ ತಣಿಸುವಲ್ಲಿ ಅಪ್ರತಿಮರು. ಕನ್ಯಾನ ಜ್ಯೂನಿಯರ್ ಕಾಲೇಜಿನಲ್ಲಿ ಹಲವಾರು ವರ್ಷ ಯಕ್ಷಗಾನ ತಂಡವನ್ನು ಕಟ್ಟಿ ಕುಣಿಸಿದ ಕೀರ್ತಿ ಇವರದು. ನೀರ್ಪಾಜೆ ಶಾಲೆಯಲ್ಲಿ ಯಕ್ಷಗಾನ ಶಿಷ್ಯರನ್ನು ಸೃಷ್ಟಿಸಿದ್ದು ಅವರ ವೈಶಿಷ್ಟ. ಬಣ್ಣದ ವೇಷಗಳಿಗೆ ಅವರ ಶಿಷ್ಯ ಸಾಮ್ರಾಜ್ಯವೇ ಇದೆ. ಕನ್ಯಾನ ಯಕ್ಷಗಾನ ಸಂಘದ ಕಾಯಂ ಸದಸ್ಯರಾಗಿ ದುಡಿಯುತ್ತಿದ್ದ

ಇವರು, ಬಲರಾಮ, ದೇವೇಂದ್ರ, ಪೂತನಿ, ಶೂರ್ಪನಖಿ ಪಾತ್ರಗಳ ಸೃಷ್ಟಿ ಬ್ರಹ್ಮರು. ಈಗಲೂ ಕೂಡ ಪ್ರತಿ ದಿನ ಸಾಯಂಕಾಲ ಅವರ ಮನೆಯಿಂದ ಯಕ್ಷಗಾನದ ಹಾಡುಗಳು ಸಂಧ್ಯಾರಾಗದಂತೆ ಗಾಳಿಯಲ್ಲಿ ತೇಲಿಬಂದು ನಾದಲೋಕವನ್ನೇ ಸೃಷ್ಟಿಸುತ್ತವೆ. ಇನ್ನು ಮುಂದೆಯೂ ಕೂಡ ಅವರ ಕಲಾ ಸೇವೆ ಸುದೀರ್ಘ ಕಾಲ ಈ ನಾಡಿಗೆ ಸಲ್ಲಲಿ, ಆ ನಾದ ಸೌರಭ ಸರ್ವದಿಕ್ಕಿಗೂ ಪಸರಿಸಲಿ ಎಂದು ಹಾರೈಸೋಣ. (ಶ್ರೀಯುತರು ಈಗ ದಿವಂಗತರು). (ಸಂಗ್ರಹ)

ಯಕ್ಷಗಾನದ ಹಾಸ್ಯಕಲಾವಿದ ದೇಲಂತಬೆಟ್ಟು ಕೃಷ್ಣಭಟ್

1960ರ ದಶಕದ ಯಕ್ಷಗಾನ ಪ್ರದರ್ಶನಗಳನ್ನು ಕಂಡವರಿಗೆ ಇಂದಿಗೂ ದೇಲಂತಬೆಟ್ಟು ಕೃಷ್ಣಭಟ್ಟರ ಹೆಸರು ಹೇಳಿದರೆ ಅವರು ನಿರ್ವಹಿಸುತ್ತಿದ್ದ ವೈವಿಧ್ಯಮಯ ಹಾಸ್ಯಪಾತ್ರಗಳು ಕಣ್ಣಿಗೆ ಕಟ್ಟುತ್ತವೆ. ಇಂದಿನಂತೆ ಗಿರಕಿ ಹೊಡೆದು ಅಶ್ಲೀಲ ಅಭಿರುಚಿಯ ವಾಕ್ಯಗಳಿಂದ ನಗಿಸುವುದೇ ಆಗ ಮನರಂಜನೆ ಎನಿಸದೆ ಶುದ್ಧ ಸಾಹಿತ್ಯವನ್ನೇ ಬಳಸಿ ಉನ್ನತ ಅಭಿರುಚಿಯ ಸಾಂಸ್ಕೃತಿಕ ಹಾಸ್ಯ ಪಾತ್ರ ನಿರ್ವಹಿಸಬಹುದೆಂಬುದನ್ನು ಸಾಬೀತು ಪಡಿಸಿದ ಕಲಾವಿದರಿದ್ದರು. ಆ ದಿಸೆಯಲ್ಲಿ ಪೆರುವೋಡಿ ನಾರಾಯಣ ಭಟ್ಟರ ಅನಂತರ ಕೇಳಿ ಬಂದ ಹೆಸರೆಂದರೆ ಕೃಷ್ಣಭಟ್ಟರದು. ಅವರಿಂದು ವೃತ್ತಿ ನಟರಾಗಿ ದುಡಿಯುತ್ತಿಲ್ಲವಾದರೂ ಬಿಡುವಿನ ಸಮಯದಲ್ಲಿ ಕಲಾರಂಗಕ್ಕೆ ತನ್ನಿಂದಾದ ಸೇವೆ ಸಲ್ಲಿಸುತ್ತಿದ್ದಾರೆ.

1936ರಲ್ಲಿ ಕನ್ಯಾನ ಗ್ರಾಮದ ದೇಲಂತಬೆಟ್ಟು ಎಂಬಲ್ಲಿ ಕೃಷ್ಣಭಟ್ಟರ ಜನನ. ಅವರ ತಂದೆ ಮಹಾಬಲ ಭಟ್ಟರು. ತಾಯಿ ಲಕ್ಷ್ಮೀ ಅಮ್ಮ. ಕೃಷ್ಣಭಟ್ಟರ ತಂದೆಯ ಅಜ್ಜ (ಅವರ ಹೆಸರೂ ಮಹಾಬಲ ಭಟ್ಟರು) ತಾಳ ಮದ್ದಳೆಯ ಹೆಸರಾಂತ ಅರ್ಥಧಾರಿಗಳೆಂಬುದನ್ನು ಬಿಟ್ಟರೆ ಯಕ್ಷಗಾನ ಕಲೆಯ ವಿಚಾರದಲ್ಲಿ ಅವರಿಗೆ ಕೌಟುಂಬಿಕ ಹಿನ್ನೆಲೆ ಇನ್ನೇನೂ ಇಲ್ಲ. ಆದರೂ ಎಳೆತನದಲ್ಲೆ ಕೃಷ್ಣಭಟ್ಟರಿಗೆ ಆಟ ನೋಡುವುದಕ್ಕಿಂತ ಹಾಡುವ, ಮೃದಂಗ ಬಾರಿಸುವ ಆಸೆ ಹೆಚ್ಚಾಗಿತ್ತು.

ಆರನೆಯ ತರಗತಿ ಕಲಿತ ಮೇಲೆ ಕೃಷ್ಣ ಭಟ್ಟರ ವಿದ್ಯಾಭ್ಯಾಸ ಕೊನೆಗೊಂಡಿತು. ಆಗ ದೇಲಂತಬೆಟ್ಟಿನ ದೇವಸ್ಥಾನದಲ್ಲಿ ಹೊಸಹಿತ್ಲು ಮಹಾಲಿಂಗ ಭಟ್ಟರು ಮತ್ತು ಕರ್ಗಲ್ಲು ಸುಬ್ಬಣ್ಣ ಭಟ್ಟರು ಯಕ್ಷಗಾನ ನಾಟ್ಯದ ತರಬೇತಿ ನೀಡುತ್ತಿದ್ದರು. ಎರಡು ದಿವಸಕ್ಕೊಮ್ಮೆ ಕುರ್ಯದ ವಿಠಲ ಶಾಸ್ತ್ರಿಗಳು ಬಂದು ನಾಟ್ಯಾಭ್ಯಾಸವನ್ನು ತಿದ್ದುತ್ತಿದ್ದರು. ಆಗ ಪೆರುವೋಡಿ ನಾರಾಯಣ ಭಟ್ಟರು, ಕರುವೋಲು ದೇರಣ್ಣ ಶೆಟ್ಟರು ಹೀಗೆ ಅನೇಕ ಮಂದಿ ಕಲಾವಿದರು ಅಲ್ಲಿ ನಾಟ್ಯಾಭ್ಯಾಸ ಕೈಗೊಂಡಿದ್ದರು.

13ರ ಹರೆಯದ ಕೃಷ್ಣಭಟ್ಟರು ಅಲ್ಲಿಗೆ ಹೋಗಿ ಅಭ್ಯಾಸವನ್ನು ತದೇಕಚಿತ್ತರಾಗಿ ನೋಡುತ್ತಾ ನಿಲ್ಲುತ್ತಿದ್ದರು. ಹೆಜ್ಜೆಗಳನ್ನು ನೆನಪಿಟ್ಟುಕೊಂಡು ಮನೆಗೆ ಬಂದು ಏಕಲವ್ಯನ

ಹಾಗೆ ಅಭ್ಯಸಿಸುತ್ತಿದ್ದರು. ತನಗೆ ತಾನೇ ಗುರುವಾಗಿ ಎಲ್ಲ ರೀತಿಯ ಹೆಜ್ಜೆಗಳನ್ನೂ ಕಲಿತುಕೊಂಡ ಅವರು ಅನಂತರ ಅವರ ಗ್ರಾಮದವರೇ ಆದ ಶಾಂತಿಮೂಲೆ ನಾರಾಯಣ ಭಟ್ಟರಿಂದ ಮೃದಂಗವಾದನದ ಪ್ರಾರಂಭಿಕ ಪಾಠವನ್ನು ಕಲಿತುಕೊಂಡರು. ಬಳಿಕ ಮಾಂಬಾಡಿ ನಾರಾಯಣ ಭಾಗವತರಿಂದ ಭಾಗವತಿಕೆ ಮತ್ತು ಮೃದಂಗ ವಾದನಗಳೆರಡನ್ನೂ ಶಾಸ್ತ್ರೋಕ್ತವಾಗಿ ಕಲಿಯುವ ಅವಕಾಶ ಸಿಕ್ಕಿತು.

ಕನ್ಯಾನದಲ್ಲಿ ಒಂದು ಸಲ ದಕ್ಷಯಜ್ಞ ನಾಟಕ ನಡೆಯಿತು. ಅದರಲ್ಲಿ ಪೆರವೋಡಿಯವರೊಂದಿಗೆ ಕೃಷ್ಣಭಟ್ಟರೂ ಯಜ್ಞಕ್ಕೆ ಹೋಗುವ ಬ್ರಾಹ್ಮಣನಾಗಿ ಮೊದಲ ಬಾರಿಗೆ ರಂಗಪ್ರವೇಶ ಮಾಡಿದರು. ಪೆರವೋಡಿಯವರ ಸ್ನೇಹ ಮಾತ್ರವಲ್ಲ ಮಾರ್ಗದರ್ಶನವೂ ಆ ಹಂತದಲ್ಲಿ ಸಿಕ್ಕಿತು. ಯಕ್ಷಗಾನದ ಹಾಸ್ಯ ಪಾತ್ರದ ನೃತ್ಯ, ಅಭಿನಯ, ಮುಖವರ್ಣಿಕೆ, ಮಾತುಗಾರಿಕೆ ಇವೆಲ್ಲದರಲ್ಲೂ ಪೆರುವೋಡಿ ನಾರಾಯಣ ಭಟ್ಟರು ಕೃಷ್ಣ ಭಟ್ಟರಿಗೆ ಗುರುಗಳಾಗಿ ಯಕ್ಷಗಾನಕ್ಕೂ ರಂಗಪ್ರವೇಶಗೊಳಿಸಿದರು.

ಪೆರುವೋಡಿಯವರ ಯಜಮಾನಿಕೆಯಲ್ಲಿದ್ದ ಮೂಲ್ಕಿ ಮೇಳವನ್ನು ಸೇರಿಕೊಂಡ ಕೃಷ್ಣಭಟ್ಟರು ಅನೇಕ ವರ್ಷಗಳ ಕಾಲ ಹಾಸ್ಯ ಪಾತ್ರಗಳಲ್ಲೆ ಜನರನ್ನು ರಂಜಿಸಿದರು. ನಳ ದಮಯಂತಿಯ ಸುದೇವ, ಕೃಷ್ಣಲೀಲೆಯ ಮಕರಂದ, ವಿಜಯ, ದಕ್ಷಾಧ್ವರದ ನಾರದ, ಬ್ರಾಹ್ಮಣ, ಗಿರಿಜಾ ಕಲ್ಯಾಣದ ಬ್ರಹ್ಮ ಚಿತ್ರಾಕ್ಷಿ ಕಲ್ಯಾಣದ ಮುದುಕಿ, ಅತಿಕಾಯ ಕಾಳಗದ ದೂತ, ಜಾಂಬವ, ಕೃಷ್ಣಾರ್ಜುನ ಕಾಳಗದ ನಾರದ, ಇತ್ಯಾದಿ ಪಾತ್ರಗಳಿಂದ ಅಂದಿನ ಜನಮನದಲ್ಲಿ ಚಿರಸ್ಥಾಯಿಯಾಗಿದ್ದರು. ಅವರ ಪಾತ್ರಗಳಿಗೆ ಕಡತೋಕ ಭಾಗವತರ ಒಳ್ಳೆಯ ಪ್ರೋತ್ಸಾಹವೂ ಇತ್ತು.

ಮೂಲ್ಕಿ ಮೇಳ ನಿಂತು ಹೋದ ಮೇಲೆ ಕೃಷ್ಣಭಟ್ಟರು ಕೂಡ್ಲು ಮೇಳದಲ್ಲಿ ಭಾಗವತರಾಗಿ, ಮೃದಂಗವಾದಕರಾಗಿ ಕೆಲಸ ಮಾಡಿದರು. ಧ್ವನಿ ವರ್ಧಕದ ಅಗತ್ಯವಿಲ್ಲದೆ, ಉಚ್ಚ ಕಂಠದಲ್ಲಿದ್ದ ಹಾಡುಗಾರಿಕೆ ತುಂಬಾ ದೂರಕ್ಕೆ ಕೇಳುತ್ತಿತ್ತಂತೆ. ಉತ್ತರಕನ್ನಡ ಜಿಲ್ಲೆಯಲ್ಲೂ ಕೃಷ್ಣಭಟ್ಟರು ಯಕ್ಷಗಾನದಲ್ಲಿ ಭಾಗವಹಿಸಿ ಅಲ್ಲಿಯೂ ಅಭಿಮಾನಿಗಳನ್ನು ಗಳಿಸಿಕೊಂಡಿದ್ದಾರೆ.

ಅಂದಿನ ಹಾಸ್ಯಕ್ಕೂ ಇಂದಿನ ಹಾಸ್ಯಕ್ಕೂ ವ್ಯತ್ಯಾಸವೇನಿದೆ ಎಂದು ಕೇಳಿದರೆ, "ಇಂದಿನ ಹಾಸ್ಯ ನಗೆ ಬರಿಸುವುದಕ್ಕಾಗಿಯೇ ಸೃಷ್ಟಿಸಲ್ಪಡುತ್ತಿದೆ. ಅಂದು ಸಭಾ ಲಕ್ಷಣಕ್ಕೆ ಅನುಗುಣವಾಗಿ ರೂಪಿತವಾಗುತ್ತಿದ್ದ ಪಾತ್ರಗಳಲ್ಲಿ ದೂತ ಕೇವಲ ದೂತನಾಗಿರುತ್ತಿದ್ದನಲ್ಲದೆ ಇಂದಿನಂತೆ ಮೇಧಾವಿಯಾಗಿರುವಂತೆ ತೋರಿಸುತ್ತಿರಲಿಲ್ಲ.

ಇಂದಿನ ಹಾಗೆ ಸಭಾರಂಜನೆಗಾಗಿ ಅಶ್ಲೀಲ, ರಾಜಕೀಯಗಳನ್ನು ಬೆರೆಸದೆ ದ್ವಂದ್ವಾರ್ಥದ ಶುದ್ಧ ಸಾಹಿತ್ಯದಲ್ಲಿ ಪ್ರೇಕ್ಷಕರನ್ನು ಅಂದು ನಗೆಗಡಲಿಲ್ಲ ತೇಲಿಸುತ್ತಿದ್ದೆವು'' ಎನ್ನುತ್ತಾರೆ.

ಆ ಕಾಲದಲ್ಲಿ ಹಾಸ್ಯ ಪಾತ್ರಧಾರಿ ಭಾಗವತಿಕೆ, ಹಿಮ್ಮೇಳಗಳಲ್ಲಿ ಅಗತ್ಯವಿದ್ದರೆ ಎಲ್ಲಾ ಪಾತ್ರಗಳನ್ನೂ ನಿರ್ವಹಿಸಲು ಸಮರ್ಥನೂ ಆಗಿರಬೇಕಿತ್ತಂತೆ.

ವೃತ್ತಿ ಮಾತ್ಸರ್ಯವು ಅನೇಕ ಕಲಾವಿದರ ಪತನಕ್ಕೆ ಕಾರಣವಾಗಿದೆಯಲ್ಲವೆ ಎಂಬ ಪ್ರಶ್ನೆಗೆ, ''ಹೌದು ಅಂದೂ ಆ ಪಿಡುಗು ಇತ್ತು. ಒಂದು ಸಲ ಉರ್ವದಲ್ಲಿ ಚಿತ್ರಾಕ್ಷಿ ಕಲ್ಯಾಣ ಆಟ. ರಾಕ್ಷಸಿಯು ಮುದುಕಿಯ ವೇಷ ಮಾಡಿ ಬರುವ ಸಂದರ್ಭ. ನಾನು ನಿರ್ವಹಿಸಿದ ಮುದುಕಿಯ ವೇಷವನ್ನು ಮೆಚ್ಚಿ ಪ್ರೇಕ್ಷಕರು ರಂಗಸ್ಥಳಕ್ಕೆ ಬಂದು ನನ್ನ ಕೊರಳಿಗೆ ಹೂಮಾಲೆ ಹಾಕಿದರು. ಈ ಒಂದೇ ವಿಷಯಕ್ಕೆ ಭಾಗವತರು, ಹಿರಿಯ ಕಲಾವಿದರು ಮತ್ಸರ ಭಾವನೆಯಿಂದ ನನಗೆ ನೀಡಿದ ಮಾನಸಿಕ ಕಿರುಕುಳ ನನಗಿನ್ನೂ ಮರೆತಿಲ್ಲ'' ಎನ್ನುತ್ತಾರೆ.

ಕಾರಣಾಂತರಗಳಿಂದ ಯಕ್ಷಗಾನ ಮೇಳದಿಂದ ನಿವೃತ್ತರಾದರೂ ಕೃಷ್ಣ ಭಟ್ಟರು ನಾಟಕಗಳಲ್ಲಿ ಪಾತ್ರ ವಹಿಸುವುದನ್ನು ಬಿಡಲಿಲ್ಲ. ಕಿರಿಯರಿಗೆ ತರಬೇತಿ ನೀಡಿ ನಾಟಕಗಳನ್ನು ಮಾಡಿಸುತ್ತಿದ್ದರು. ಅವಕಾಶ ಸಿಕ್ಕಿದರೆ ಈಗಲೂ ತಾಳ ಮದ್ದಳೆಗಳಲ್ಲಿ ಭಾಗವಹಿಸುತ್ತಾರೆ. ಎಲ್ಲಾ ಬಗೆಯ ಪಾತ್ರಗಳನ್ನು ನಿರ್ವಹಿಸುತ್ತಿದ್ದರೂ ಹಾಸ್ಯ ಪಾತ್ರಗಳೆಂದರೆ ಅವರಿಗೆ ಅಚ್ಚುಮೆಚ್ಚು ಶುದ್ಧ ಯಕ್ಷಗಾನ ಶೈಲಿಯ ನಿಕಟ ಪರಿಚಯವಿರುವ ಅವರು ಇಂದಿನ ಗಿಮಿಕ್ಸ್ ಪದ್ಧತಿಯ ಬದ್ಧ ವಿರೋಧಿ. ಈಗಲೂ ಸಂದರ್ಭ ವಶಾತ್ ಭಾಗವತಿಕೆ ಮಾಡುತ್ತಾರೆ. (ಶ್ರೀಯುತರು ಈಗ ದಿವಂಗತರು). **(ಸಂಗ್ರಹ)**

ಸ್ವಕಥಾ ಸಂಗ್ರಹಿತ ಪ್ರಸಂಗಗಳ ಪರಿಚಯ

ಶ್ರೀದೇವಿ ಶಾಕಂಭರೀ ವಿಲಾಸ

ಆಂಗಿಕ, ವಾಚಿಕ, ಸಾತ್ವಿಕ, ಆಹಾರ್ಯ ಎಂದು ಭರತನು ಲಕ್ಷಣಿಸಿರುವ ಚತುರ್ವಿಧ ನಾಟ್ಯಾಂಗಗಳನ್ನು ಇಂದಿಗೂ ತನ್ನ ರಂಗಶರೀರದಲ್ಲಿ ಉಳಿಸಿಕೊಂಡಿರುವ ಶಿಷ್ಟ ಕಲಾ ಪ್ರಕಾರ ಯಕ್ಷಗಾನ. ಈ ಚತುರಂಗಗಳ ಪ್ರಯೋಗಾಭಿವ್ಯಕ್ತಿಗೆ ಮೂಲಮಾತೃಕೆಯಾದುದು ಯಕ್ಷಗಾನ ಪ್ರಬಂಧವೆಂದು ಪಾರಿಭಾಷಿಕವಾಗಿ ಕರೆಯಲ್ಪಡುವ ಪ್ರಸಂಗ ಸಾಹಿತ್ಯ. ತಾತ್ಪೂರ್ತಿಕವಾಗಿ ಕಾವ್ಯಕೃತಿಯ ಸುಕೃತ ಶರೀರವನ್ನು ಹೊಂದಿದ್ದೂ ರಂಗಕ್ರಿಯೆಯ ಸಮಗ್ರ ನಿರ್ವಹಣೆಯ ಸಂಪೂರ್ಣ ಹೊಣೆಯನ್ನು ಅತ್ಯಂತ ಎಚ್ಚರದಿಂದ ನಿಭಾಯಿಸುವ ಕೌಶಲವನ್ನೂ ಪ್ರಸಂಗ ಸಾಹಿತ್ಯ ಮೈಗೂಡಿಸಿಕೊಂಡಿರುತ್ತದೆ. ರಸ, ಭಾವ, ವರ್ಣನೆ, ಶಬ್ದ ಸಾಧುತ್ವ, ಪದಮೈತ್ರಿ, ಲೋಕೋಕ್ತಿ ಪ್ರಯೋಗ, ಛಾಂದಸಶುದ್ಧಿ ಇತ್ಯಾದಿ ಕಾವ್ಯ ದ್ರವ್ಯಗಳ ಗು ಣಲಕ್ಷಣಗಳನ್ನೆಲ್ಲಾ ಕೋದು ಕಟ್ಟಬೇಕಾದ ಕಮನೀಯ ಕಾವ್ಯ ಪಂಕ್ತಿ ಸಮುಚ್ಚಯ ಯಕ್ಷಗಾನ ಪ್ರಬಂಧ ಅಥವಾ ಪ್ರಸಂಗ. ಬಂಧುರ ಕಾವ್ಯನಿರ್ಮಿತಿಯಷ್ಟೇ ಲಕ್ಷ್ಯ ಇಲ್ಲಿ ಕವಿಯ ಉದ್ದೇಶವಾದರೆ ಸಾಲದು. ಅವನ ಲಕ್ಷ್ಯ ಸಹೃದಯ ಪ್ರೇಕ್ಷಕನ ರಸಾನಂದದತ್ತ ಕೇಂದ್ರೀಕೃತವಾಗಬೇಕು. ಪ್ರಸಂಗ ಬರೀ ಓದುಗಬ್ಬವಲ್ಲ, ಹಾಡುಗಬ್ಬವೂ ಅಲ್ಲ. ಆಡುಗಬ್ಬ, ಸಾತ್ವಿಕ ಅಂಗಿಕಗಳನ್ನು ಚೋದಿಸುವ, ಜೃಂಭಿಸುವ ನಿರ್ದೇಶಿಸುವ ಸೂಕ್ತ ಪದವನ್ನು ಶಕ್ತಶಬ್ದವನ್ನು ಯೇನಕೇನ ಸಾಹಸದಿಂದ ಪದ್ಯದ ಛಂದೋಮಿತಿಯಲ್ಲಿ ವೃತ್ತ ನಿರ್ಮಾಣ ನಿಯಮಗಳ ನಿಬದ್ಧತೆಯಲ್ಲಿ ಅಡಕಗೊಳಿಸುವ ಸಶ್ರಮ ಭಾಷಾ ನುಭವವೂ ರಂಗಾನುಭವವೂ ಪ್ರಸಂಗ ರಚಯಿತನಿಗಿರಬೇಕಾಗುತ್ತದೆ.

ರಚನೆಯ ಹೆಜ್ಜೆ ಹೆಜ್ಜೆಯಲ್ಲಿ ಕವಿಯನ್ನು ಜಗ್ಗಿ ಜಾರಿಸುವ ಪ್ರಾಸ ಪ್ರಪೂರ್ಣತೆಯ ಪ್ರಸಂಗಶೈಲಿ, ಅಕ್ಷರಶಃ ಯಕ್ಷ ಕವಿಯನ್ನು ಒರಗಿಸುವ ಒರೆಗಲ್ಲು. ಜೊತೆಗೆ ಯಕ್ಷಗಾನ ಛಂದೋರಚನೆಯನ್ನು ಸ್ವಯಂ ಹಾಡಿಕೊಳ್ಳುವ ಗಾನಾನುಭವವೂ ಬೇಕು. ಯಾಕೆಂದರೆ ಮಾತ್ರೆ ಅಂಶ ಪದ ಯತಿಗಳನ್ನು ಕೆತ್ತಿ ಕೊಯ್ದು ರಾಗತಾಳ ಬಂಧಗಳಲ್ಲಿ ಪದ್ಯವನ್ನು ರಚಿಸಲು ಸಾಧ್ಯವೇ ಇಲ್ಲ. ಹೀಗೆ ಶುಷ್ಕ ಪಾಂಡಿತ್ಯ ಏನೇನೂ ಕೆಲಸಕ್ಕೆ

ಬಾರದೇ, ಭಾಷಾಜ್ಞಾನ, ರಂಗಾನುಭವ ರಸಜ್ಞತೆಗಳು ಮುಪ್ಪುರಿಗೊಂಡು ಮೂಡಿ ಬರುವ ಕಾವ್ಯವೇ ಯಕ್ಷಗಾನ ಪ್ರಸಂಗ. ಪ್ರಸಂಗದ ಪಾತ್ರದೊಂದಿಗೆ ಮನೋರಂಗದಲ್ಲಿ ತಾನೂ ರಂಗಸ್ಥಳಕ್ಕೆ ಧುಮುಕಿ, ತಾನೇ ಆ ಪಾತ್ರವಾಗಿ ಕುಣಿಯುತ್ತಾ, ಭಾವೋಚಿತ ಶಬ್ದಗಳನ್ನು ಹಾಡುವವನ ಗೇಯರಮಣೀಯತೆಗೊಪ್ಪುವಂತೆ ಪೋಣಿಸುತ್ತಾ, ನಟನ ಚಲನೆಗೆ ಸಹಕಾರಿಯಾಗುವಂತೆಯೂ ಹೊಂದಿಸುತ್ತಾ, ಪದ್ಯದ ಸಾರ್ಥಕತೆಯನ್ನು ಸಾಧಿಸುವುದು ಸುಲಭವಲ್ಲ, ಯಕ್ಷಗಾನ ಪದ್ಯರಚನೆ ಎಷ್ಟು ಕಠಿಣತಮ ಎಂಬುದು, ಆ ಕ್ಷೇತ್ರದಲ್ಲಿ ಕೈಯಿಟ್ಟಾಗಲೇ ಆಗುವ ಅನುಭವ.

ಇದುವರೆಗೆ ಚುಟುಕಾಗಿ ಯಕ್ಷಗಾನ ಪದ್ಯ ರಚನೆಯ ಪರಿಶ್ರಮವನ್ನು ವಿವರಿಸಿದ್ದು ಶ್ರೀ ತಲೆಂಗಳ ರಾಮಕೃಷ್ಣ ಭಟ್ಟರು ಯಕ್ಷಗಾನ ರಂಗಭೂಮಿಗೆ ಒದಗಿಸಿದ ಅಪೂರ್ವ ಪ್ರಸಂಗ 'ಶ್ರೀ ದೇವಿ ಶಾಕಂಭರೀ ವಿಲಾಸ'ದ ಸಾರಸ್ವತ ಸಿದ್ಧಿಯನ್ನು ಪರಿಚಯಿಸುವ ಪ್ರಯತ್ನಕ್ಕಾಗಿ. ಯಕ್ಷಗಾನ ಪ್ರಯೋಗವೆಂದರೆ ಸಾಧಾರಣವಾಗಿ ಒಂದು ರಾತ್ರಿಯ ಪ್ರದರ್ಶನಾವಧಿಯನ್ನು ತುಂಬುವ ಕಥಾಗತಿಗರ್ಭಿತವೆಂದೇ ಗ್ರಹಿಕೆ. ಅಂದರೆ ಸುಮಾರು ಎಂಟು ಗಂಟೆಗಳ ಕಾಲ ಸಹೃದಯ ಪ್ರೇಕ್ಷಕನನ್ನು ರಸಾನುಭವದ ಅಂಚಲ್ಲೇ ಕೊಂಡೊಯ್ಯಬೇಕು. ಕತೆಯ ಓಟದಲ್ಲಿ ಏಕತಾನತೆಯನ್ನು ಭಂಗಿಸಿ, ಕುತೂಹಲ ಕೆರಳಿಸಿ, ಕತೆಯ ಹೂರಣವನ್ನು ಕೊನೆತನಕ ಮರೆಯಲ್ಲಿಟ್ಟು, ಬಿಡಿಬಿಡಿಯಾಗಿ ಕಾಣುವ ಭ್ರಾಂತಿ ಹುಟ್ಟಿಸುವ ಕತೆ ಕಟ್ಟುತ್ತಲೇ ಏಕಸೂತ್ರತೆಯನ್ನು ಆಪಾದ ಶಿರಃ ಪರ್ಯಂತ ಕಾಯ್ದುಕೊಳ್ಳುತ್ತಾ ಸಾಗಬೇಕು. ಈ ಎಲ್ಲ ಸಫಲತೆಯನ್ನೂ ಶ್ರೀ ತಲೆಂಗಳರು ಶಾಕಂಭರಿ ವಿಲಾಸದಲ್ಲಿ ಸಲೀಲವಾಗಿ ಸಾಧಿಸಿದ್ದಾರೆ. ಅಚ್ಚರಿ ಹುಟ್ಟಿಸುವಂತೆ, ಪುರಾಣಾಂತರಗಳಲ್ಲಿ ಬರುವ ಕಥಾನಕಗಳನ್ನು ಒಪ್ಪವಾಗಿ ಜೋಡಿಸಿ ಓರಣಗೊಳಿಸಿ ಶಿವಶಕ್ತಿ ಸಿದ್ಧಾಂತವನ್ನು ಅನಾವರಣಗೊಳಿಸಿದ್ದಾರೆ. ಮೂಲತಃ ದೇವೀ ಮಹಾತ್ಮ್ಯದ ದುರ್ಬಲ ಎಳೆಯೊಂದರ ಹಂದರಕ್ಕೆ, ಪೌರಾಣಿಕ ರಂಗಾಲಂಕರಣ ಮಾಡಿದ್ದಾರೆ. ಇದೇ ಕವಿಕಾವ್ಯ ಕೌಶಲವೂ ಹೌದು. ದೇವೀ ಮಹಾತ್ಮ್ಯ ಪ್ರಸಂಗದಲ್ಲಿ ದೇವಿ ಆಗಾಗ ಬಂದು ದಾನವ ಧ್ವಂಸಿನಿಯಾದರೆ, ಶಾಕಂಭರೀ ವಿಲಾಸದಲ್ಲಿ, ಆಗಾಗ ಕಾಣಿಸಿ ಅನುಗ್ರಾಹಕಳಷ್ಟೇ ಆಗುತ್ತಾಳೆ. ಅಂದರೆ ಪ್ರಸಂಗದ ಪ್ರಧಾನ ಶೀರ್ಷಳಾಗಿ ಬರುವ ಶಾಕಂಭರಿ ಯಾರನ್ನೂ ವಧಿಸುವುದೇ ಇಲ್ಲವೇ? ಎಂಬ ಕುತೂಹಲ ಕೊನೆತನಕ ಪ್ರೇಕ್ಷಕನನ್ನು ಕೈ ಹಿಡಿದು ಕರೆದೊಯ್ಯುತ್ತದೆ. ಇನ್ನೇನು ಕತೆ ಮುಗಿಯುತ್ತದೆ ಎಂದಾಗ ದುರ್ಗಮಾಸುರನ ವಧೋದ್ಯೋಗಕ್ಕೆ ತಾನೇ ಮುಂದಾಗುತ್ತಾಳೆ. ಬಿಡಿಯಾಗಿ ವಿಂಗಡಿಸಿದರೆ ನಾಲ್ಕಾರು ಪ್ರಸಂಗವಾಗಿಯೂ, ಇಡಿಯಾಗಿ ಗ್ರಹಿಸಿದರೆ ಒಂದೇ

ಪ್ರಸಂಗವಾಗಿಯೂ ಪರಿವರ್ತಿಸುವ, ನಮನೀಯತೆ ಈ ಕೃತಿಗಿದೆ. ಮೇಳದವರ ರಂಗಪ್ರದರ್ಶನಕ್ಕೆ ಬೇಕಾದ ಸಮಸ್ತ ಸಂಭಾರವನ್ನೂ ಈ ಕೃತಿ ಗರ್ಭೀಕರಿಸಿಕೊಂಡಿದೆ.

ಸಮಗ್ರ/ಶುದ್ಧ/ಪಾರಂಪರಿಕ ಪ್ರಸಂಗಗಳೇ ವಿರಳ/ ಅಪ್ರಸ್ತುತವೆನಿಸುವ ಇಂದಿನ ಯಾಕ್ಷಗಾನಿಕ ವಾತಾವರಣದಲ್ಲಿ, ಶ್ರೀ ತಲೆಂಗಳ ರಾಮಕೃಷ್ಣ ಭಟ್ಟರು ಹೃದ್ಯವಾದ ಪೂರ್ಣಕೃತಿಯೊಂದನ್ನು ನೀಡಿ, ಯಕ್ಷ ಸಾಹಿತ್ಯದ ರುಚಿಯನ್ನೂ ಶುಚಿಯನ್ನೂ ಪುನಃ ಪ್ರಕಾಶಿಸಿದ್ದಾರೆ. ಮುಖ್ಯವಾಗಿ ಯಕ್ಷಗಾನ ಪ್ರಸಂಗ ಸಾಹಿತ್ಯದ ಸೌಗಂಧವನ್ನೂ ಸೌಕುಮಾರ್ಯವನ್ನೂ ಪುನರ್‌ಜ್ಜೀವಿಸಿದ್ದಾರೆ. ಹರಕತ್ತಿಗೆ ಹಗ್ಗ ಹೊಸೆವ ಅಭಿನವ ಯಕ್ಷ ಕವಿ ಪ್ರಚಂಡರಿಗೆ ಈ ಕೃತಿಯ ಮೂಲಕ ಶ್ರೀ ತಲೆಂಗಳರು ಹೊಳೆಗನ್ನಡಿ ಹಿಡಿದಿದ್ದಾರೆ.

ಯಕ್ಷಗಾನ ಪ್ರಸಂಗ ಸಾಹಿತ್ಯ ಶಾರದೆಯ ಭವ್ಯಾಭರಣವಾಗಿ ಪ್ರಕಾಶ ಗೊಂಡ ಶಾಕಂಭರೀ ವಿಲಾಸವಲ್ಲದೆ, ಶ್ರೀ ತಲೆಂಗಳ ರಾಮಕೃಷ್ಣ ಭಟ್ಟರು ರಚಿಸಿದ ಇನ್ನೂ ಅನೇಕ ಪ್ರಸಂಗಗಳು ಪ್ರಕಟಗೊಂಡು ಯಕ್ಷ ಸಾಹಿತ್ಯ ಸಂಪತ್ಸಮೃದ್ಧವಾಗಲಿ ವಿದ್ವತ್ಸಮೃದ್ಧವಾಗಲಿ ಎಂದು ಆಶಿಸುತ್ತೇನೆ.

(ಶ್ರೀದೇವಿಶಾಕಂಭರೀ ವಿಲಾಸ - ಪ್ರಸಂಗರಚನೆ - ವಿದ್ವಾನ್ ತಲೆಂಗಳ ರಾಮಕೃಷ್ಣಭಟ್ಟ, ಕಥಾ ಸಂಯೋಜನೆ - ಶ್ಯಾಂಭಟ್ ಪೆರ್ನಡ್ಕ ಮತ್ತು ರಾಜಗೋಪಾಲ್ ಕನ್ಯಾನ. ಪ್ರಕಾಶನ - ಭಾರದ್ವಾಜ ಪ್ರಕಾಶನ ಮಂಗಳೂರು, ಬೆಲೆ.. ರೂ. 20/-, ಪುಟ - 72, ಪ್ರಕಟಿತ ವರ್ಷ - 2000).

ಪ್ರಸಂಗ ವಿಮರ್ಶೆ–1

ಮಯೂರವರ್ಮ ವಿಲಾಸ

ಕರ್ನಾಟಕದಲ್ಲಿ ಪ್ರಥಮ ಕನ್ನಡಿಗ, ರಾಜ್ಯ ಕಟ್ಟಿದ ಕತೆಯನ್ನು ಪ್ರಕೃತ ಬೆಂಗಳೂರಿನಲ್ಲಿ ಉದ್ಯೋಗಿಯಾಗಿರುವ ಶ್ರೀ ಕೆ.ಪಿ. ರಾಜಗೋಪಾಲ್ ಕನ್ಯಾನರು ಸುಂದರವಾಗಿ ಸಂಯೋಜಿಸಿ, ಯಕ್ಷಗಾನ ರೂಪಕ್ಕೆ ಇಳಿಸಿದ್ದಾರೆ. ಯಕ್ಷಗಾನದಲ್ಲಿ ತಲೆಬುಡವಿಲ್ಲದ ಕಥೆಗಳು ಇತ್ತೀಚೆಗೆ ಕಾಲ್ಪನಿಕವಾಗಿ ರೂಪುಗೊಂಡು ಪ್ರೇಕ್ಷಕರನ್ನು ಕೀಳು ಮಟ್ಟಕ್ಕೆ ಒಯ್ಯುತ್ತಿರುವಂತಹ ಈ ಸಂದರ್ಭದಲ್ಲಿ ಇಂತಹ ಐತಿಹಾಸಿಕ ಕತೆಗಳ ಪ್ರದರ್ಶನಗಳು (ಯಕ್ಷಗಾನ ವೇಷ ಭೂಷಣದಲ್ಲಿ) ನಿಜವಾಗಿಯೂ ನಮ್ಮ ಇತಿಹಾಸ ಪ್ರಜ್ಞೆ ಮರುಕಳಿಕೆಗೆ, ಕಲಾವಿದರಿಗೆ ನಿಜವಾದ ಅಭಿನಯ ಪ್ರೇರಕವಾಗಬಲ್ಲುದು. ತುಳುವಿನಲ್ಲೂ ಪ್ರದರ್ಶಿಸಲೂ ಅನುಕೂಲವಾಗಬಲ್ಲುದು. ಬ್ರಾಹ್ಮಣನೊಬ್ಬನಿಂದ ಕದಂಬ ವಂಶದಲ್ಲಿ ಕನ್ನಡನಾಡು ಸ್ಥಾಪನೆ, ಕಾಂಚೀ ರಾಜ್ಯದೊಡನೆ ಸಂಬಂಧ, ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ತರಿಸಿ ಕನ್ನಡ ನೆಲದಲ್ಲಿ ನೆಲೆಗೊಳಿಸುವುದು, ಬಾರಕೂರು ರಾಜ್ಯದೊಡನೆ ಕದಂಬರ ಮಿತ್ರತ್ವ, ಇವೆಲ್ಲವುಗಳಿಂದ ಕಥೆ ಪರಿಪುಷ್ಟವಾಗಿದೆ. ವಿದ್ವಾಂಸರಾದ ತಾಳ್ತಜೆ ಕೃಷ್ಣಭಟ್ಟರ ಕವಿತಾ ಶಕ್ತಿಯೂ ಗಮನಾರ್ಹವಾಗಿದೆ. ಸಂಗ್ರಹಕ್ಕೆ ಯಕ್ಷಗಾನ ದೃಷ್ಟಿಯಿಂದಲೂ, ಇತಿಹಾಸ ದೃಷ್ಟಿಯಿಂದಲೂ ಯೋಗ್ಯ. ಮುದ್ರಣ ಅತ್ಯುತ್ತಮವಾಗಿದೆ.

ಕವಿ: ತಾಳ್ತಜೆ ಕೃಷ್ಣಭಟ್ಟ, ಪಂಜಳ, ಕಥಾಸಂಯೋಜನೆ: ಕೆ.ಪಿ.ರಾಜಗೋಪಾಲ್ ಕನ್ಯಾನ, ಪ್ರಕಾಶನ : ಪ್ರತಿಮಾ ಪ್ರಕಾಶನ, ಪೆರ್ನಡ್ಕ ಕನ್ಯಾನ–574279, ಬಂಟ್ವಾಳ ತಾಲೂಕು, ದ.ಕ. ಪುಟ–16+40, ಬೆಲೆ ರೂ. 15/–

ಪ್ರಸಂಗ ವಿಮರ್ಶೆ–2

ಹವ್ಯಕರ ಮೂಲನೆಲೆಯ ಇತಿಹಾಸ ಪ್ರಸಂಗ. ಯಕ್ಷಗಾನ ಶೈಲಿಯ ವಸ್ತು – ಮಯೂರವರ್ಮ ವಿಲಾಸ.

ಪ್ರಸಂಗದ ವೈಶಿಷ್ಟ್ಯವೆಂದರೆ ಆರು ಅಂಕಗಳಾಗಿ ವಿಭಾಗಿಸಿದ್ದು ನಾಟಕೀಯ

ನಿರ್ದೇಶನದಿಂದ ಕೂಡಿ 189 ಪದ್ಯಗಳಲ್ಲಿ ಸಂಗ್ರಹಿಸಲಾಗಿದೆ

"ಕಾಂಚಿಶನತುಳ ಬಲವಂತ ಸಂಚಿತ ಭಾಗ್ಯ 1 ಪಂಚತ್ರಿ (ಎಂಟು) ಮಂತ್ರಿಮಂಡಲದೀ । ಇಂಚರದ ವೇದವಾದ್ಯದ ಘೋಷದೊಡನೆಯೇ ಮಿಂಚಿ ಮೆರೆದಿರ್ದನೋಲಗದೀ ॥"

ಹೀಗೆ ನಾಟಿರಾಗದ ಝಂಪೆ ತಾಳದಲ್ಲಿ ಪ್ರಾರಂಭವಾಗುವ ಕಥಾವಸ್ತು ಅಲ್ಲಲ್ಲಿ ಕಥಾ ನಿರೂಪಣೆಯೊಂದಿಗೆ ಬೆಳೆದ ಜಾನಪದ ಹಿನ್ನೆಲೆಯ ವಸ್ತುವಿದು. ಕೇಳಿ ಬಡಿಯುವ, 'ಚೌಕಿ ಪೂಜೆ' ಆದ ಮೇಲೆ ಯಕ್ಷಗಾನ ಪ್ರೇಮಿಗಳಿಗೆ ಹೊಸತೊಂದು 'ಶಾಭಾ! ಭಾಲಾ!' ನುಡಿಯುವ, ಪೀಠಿಕೆ ಬಡಿಯುವ, 'ಮಂಗಳ' ದೊಂದಿಗೆ ಕವಿ ಪರಿಚಯವನ್ನೂ ವಿಶೇಷ ರೀತಿಯ ಯಕ್ಷಗಾನ ಕಲಾ ಸಂಸ್ಕಾರಗಳೊಂದಿಗೇ ಪರಿಚಯ ಮಾಡಿ ಕೊಟ್ಟಿರುವುದು ಈ ಸಣ್ಣ ಕೃತಿಯ ವೈಶಿಷ್ಟ್ಯ ಎನ್ನಬಹುದು. ಹಿನ್ನೆಲೆಯ ಪರಿಚಯಕ್ಕೆ ಹೊಂದಿಸಿಕೊಳ್ಳುವಂತೆ ಕೆಲವು ಪದ್ಯಗಳಿಗೆ ಅರ್ಥ ವಿವರಣೆಗಳನ್ನೂ ಒದಗಿಸಲಾಗಿದೆ.

ಒಂದನೇ ಅಂಕದಲ್ಲಿ ಏಳು ಪಾತ್ರಗಳು 24 ಪದ್ಯಗಳ ಅರ್ಥ ವಿವರಣೆ ಮಾಡುತ್ತಿದ್ದರೆ, ಕ್ರಮವಾಗಿ ಎರಡನೇ ಅಂಕದಲ್ಲಿ 2 ಪಾತ್ರಗಳು 29 ಪದ್ಯಗಳು, ಮೂರನೇ ಅಂಕದಲ್ಲಿ 6 ಪಾತ್ರಗಳು 38 ಪದ್ಯಗಳನ್ನು, ನಾಲ್ಕನೇ ಅಂಕದಲ್ಲಿ ಮೂರು ಪಾತ್ರಗಳು 30 ಪದ್ಯಗಳನ್ನೂ 5ನೇ ಅಂಕದಲ್ಲಿ 15 ಪಾತ್ರಗಳು 21 ಪದ್ಯಗಳನ್ನು 6ನೇ ಅಂಕದಲ್ಲಿ 11 ಪಾತ್ರಗಳು 47 ಪದ್ಯಗಳನ್ನೂ ಅರ್ಥ ವಿವರಿಸುವುದರೊಂದಿಗೆ ಪ್ರಸಂಗ ಕೊನೆಗೊಳ್ಳುತ್ತದೆ. ಒಟ್ಟು ಮೂವತ್ತ ಮೂರು ಪಾತ್ರಗಳು ಐತಿಹಾಸಿಕ ಹಿನ್ನೆಲೆಯ ಪಾತ್ರಗಳೇ ಆದುದರಿಂದ ಇಲ್ಲಿ ಪೌರಾಣಿಕದ ಪರಂಪರೆಯನ್ನು ವೈಭವೀಕರಿಸಬಹುದೇ ಹೊರತು, ಯಕ್ಷರ ಛಾಯಾಪಾತ್ರಗಳಾಗಿ, ಯಕ್ಷಗಾನದ ಧೀಂಗಿಣಗಳನ್ನು ಬೆಳೆಸಿ ಕೊಳ್ಳಲು ಅವಕಾಶ ಕಡಿಮೆ. ಅದಕ್ಕಾಗಿಯೆ (ಧೀಂಗಿಣಕ್ಕಾಗಿ) ಕೆಲವು ಪಾತ್ರಗಳೂ ಇವೆ.

ಮುಖ್ಯವಾಗಿ ಐದನೆ ಅಂಕ ಆರಂಭದಲ್ಲೆ ಸುಮೇಧ ಪಾರ್ತಿಯರ ಸಂವಾದ ಮೊದಲ್ಗೊಂಡು ಹವ್ಯಕರ ಮೂಲ ಇತಿಹಾಸ ಆರಂಭವಾಗುತ್ತದೆ. **"ಅಪ್ಪೋ ಕೇಳಿತ್ತೊ ಏ ಎಲ್ಲಿದ್ದೆ ಏ ಪಾರ್ತಿ। ಅಪ್ಪಣ್ಣ ಭೀಮ ಸುಬ್ರಾಯ ಇಪ್ಪ ಮನೆಲಿ ಚಿನ್ನ ಮಡುಗಿ ದಿನಾಲು । ಬಪ್ಪೋರು ಆರೋ ಗೊಂತಿಲ್ಲೆ"** ಎಂಬ ರೂಪಕತಾಳದ ಸಾಂಗತ್ಯವೇ ಈ ಪ್ರಸಂಗದ ಬೀಜ ರೂಪವೆನ್ನಬಹುದು. ತ್ರಿನೇತ್ರ ಕದಂಬನ ಹುಟ್ಟು ಅವನ ಪೌತ್ರನೇ ಮಯೂರವರ್ಮನೆಂಬ ಇತಿಹಾಸದ ಬೀಜ ಬೆಳೆದು, ಈ

ತುಳುನಾಡಿನ ಅಥವಾ ಕರಾವಳಿ ನೆಲದಲ್ಲಿ ಯಜ್ಞಕಾರ್ಯಗಳು ನಡೆಯಬೇಕೆಂಬ ಮಹತ್ವಾಕಾಂಕ್ಷೆ, ಆದರಿಂದ ನಾಡು ಫಲಭರಿತ ಸುವೃಷ್ಟಿ ಸಮೃದ್ಧಿಗಳನ್ನು ತರಬಲ್ಲುದೆಂಬ ಯೋಚನೆ, ಬೀಜ-ಬಿಂದು-ಪತಾಕೆಗಳಾಗಿ ಈ ಕಥಾ ವಸ್ತುವಿನ ವಿಶ್ಲೇಷಣೆಯಾಗುತ್ತದೆ. ಸೋಮಯಾಜಿ ಶಂಕ್ರಿ ಪಾತ್ರಗಳು ಮಯೂರವರ್ಮನ ಸಂವಾದದೊಂದಿಗೆ ಹವ್ಯಕ ಭಾಷೆಯ ಸಿಂಹಾವಲೋಕನವೂ ಆಗುತ್ತದೆ. ದೈವಾಧೀನಂ ಜಗತ್ಸರ್ವಂ ಮಂತ್ರಾಧೀನಂತು ದೈವತಂ । ತನ್ಮಂತ್ರಂ ಬ್ರಾಹ್ಮಣಾಧೀನಂ ಬ್ರಾಹ್ಮಣೋ ಮಮ ದೇವತಾ । " **(ಜಗವು ದೇವಾಧೀನ । ಆ ದೈವ । ಮಿಗೆ ಮಂತ್ರದಾಧೀನವು । ಮಗುಳವವು ಬ್ರಾಹ್ಮಣಾಧೀನಗಳೆನಲು । ಜಗಕೆ ದೈವವು ಬ್ರಾಹ್ಮಣ ॥).** ಮಯೂರನ ಈ ಬ್ರಾಹ್ಮಣ ನಿಷ್ಠೆಯಿಂದಾಗಿ, ಆಯ್ಕೆ ಮಾಡಿದ 32 ಕುಟುಂಬಗಳನ್ನು ಗೋದಾವರೀ ತೀರದಿಂದ ಕರೆತಂದು ತನ್ನ ರಾಜ್ಯ ಬನವಾಸಿಯಲ್ಲಿ ನೆಲೆಗೊಳಿಸುತ್ತಾನೆ ಎಂಬಲ್ಲಿಗೆ ವಸ್ತು ಫಲನೀಡಿದೆ. ಆಮೇಲೆ ಬರುವ ವಸ್ತು ಪ್ರಸಂಗ ಮಂಗಲಮಯವಾಗಿ ಕೊನೆಗೊಳ್ಳುತ್ತದೆ.

ಮೊದಲಿನ ನಾಲ್ಕು ಅಂಕಗಳು, ಬಾಲವಟುವಾಗಿ ಕಾಂಚಿಯ ವಿದ್ಯಾಪೀಠಕ್ಕೆ ತೆರಳಿ ವಿದ್ಯಾಭ್ಯಾಸದೊಂದಿಗೆ ಶಾಸ್ತ್ರ-ಶಸ್ತ್ರ ವಿದ್ಯೆಗಳೆರಡನ್ನೂ ಗಳಿಸಿಕೊಂಡು, ಕಾಂಚೀರಾಜ ಸ್ಕಂದವರ್ಮನ ಇದಿರಲ್ಲಿ ಪರೀಕ್ಷೆ ನಡೆದು ಪಾಳಯಗಾರರನ್ನೊಂದುಗೂಡಿಸಿ ಹೋರಾಡುವ ಸಮರ ಕೌಶಲವನ್ನೂ ಕೈಚಳಕವನ್ನೂ ಅಭ್ಯಾಸ ಮಾಡಿ ಸಿಂಹವರ್ಮನ ಮಗಳು ಚಿತ್ರಾವತಿಯನ್ನು ಮದುವೆಯಾಗಿ ಬಂದವನು ತನ್ನ ರಾಜ್ಯದಲ್ಲಿ ಸುಭಿಕ್ಷ ನೆಲೆ ನಿಲ್ಲಲು ವೈದಿಕ ವಿದ್ವನ್ಮಣಿಗಳನ್ನು ಕರೆಸಿಕೊಂಡು, ಅವರ ಪೂಜಾ ಕೈಂಕರ್ಯದಿಂದ ದೇಶ ಸಮೃದ್ಧಿಗೊಳ್ಳುವುದೆಂಬ ಆಪ್ತವಾಕ್ಯ ಪ್ರಮಾಣದಲ್ಲಿ ತನ್ನ ಜೀವಿತದೊಂದಿಗೆ ಪ್ರಜಾಸಮೃದ್ಧಿಯನ್ನು ಕಾಪಾಡಿಕೊಂಡನು ಎಂಬುದೀ ವಸ್ತು ವಿಶ್ಲೇಷಣೆಯ ರೂಪವಾಗಿದೆ. ಹವ್ಯಕರು ತಮ್ಮ ಮೂಲ ವಂಶಜರೆಲ್ಲಿಂದ-ಯಾವಾಗ, ಏಕೆ ಬಂದಿದ್ದರೆಂಬ ಇತಿಹಾಸವನ್ನೊಳಗೊಂಡ ಈ ಪ್ರಸಂಗ ಪ್ರತಿಯೊಬ್ಬ ಹವ್ಯಕ ಬಂಧುವಿನ ಕೈಯಲ್ಲಿರಬೇಕಾದುದಾಗಿದೆ. (ನವನಿಕೇತನ ಮಂಗಳೂರು)

ಪತ್ರಿಕಾ ವರದಿಗಳು

ಬೆಂಗಳೂರಲ್ಲಿ ಪ್ರಥಮಬಾರಿಗೆ ಯಕ್ಷಗಾನ ಅಷ್ಟಾವಧಾನ

ಕರ್ನಾಟಕದ ಏಕೈಕ ಯಕ್ಷಗಾನ ಅಷ್ಟಾವಧಾನಿ ಡಾ॥ ಕಬ್ಬಿನಾಲೆ ವಸಂತ ಭಾರದ್ವಾಜರು ತಾ॥ 10.05.1998ರಂದು ಬೆಂಗಳೂರು ನಗರದ ಬನಶಂಕರಿ 2ನೇ ಹಂತದ ದೇವಗಿರಿ ಶ್ರೀವರಪ್ರದ ವೆಂಕಟೇಶ್ವರ ದೇಗುಲದಲ್ಲಿ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸಂಜೆ 6 ಗಂಟೆಯಿಂದ ರಾತ್ರಿ 8-30ರ ವರೆಗೆ. ಓತ ಪ್ರೋತವಾಗಿ ಎಂಟು ಜನ ವಿದ್ವಾಂಸರ ವಿವಿಧ ಪ್ರಶ್ನೆಗಳಿಗೆ ಉತ್ತರಿಸುತ್ತ, ಯಕ್ಷಗಾನಾಸಕ್ತರನ್ನೂ ಸಾಹಿತ್ಯಾಸಕ್ತರನ್ನೂ ಮಂತ್ರ ಮುಗ್ಧರನ್ನಾಗಿಸಿದರು. ಪ್ರಥಮದಲ್ಲಿ 'ಯಕ್ಷಕರ್ದಮ - ಬೆಂಗಳೂರಿನ ಸಂಚಾಲಕರಾದ ಶ್ರೀ ಕೆ.ಪಿ. ರಾಜಗೋಪಾಲ್, ಕನ್ಯಾನ ಇವರು ಅತಿಥಿಗಳನ್ನು ಸಭಿಕರಿಗೆ ಪರಿಚಯಿಸಿ ಸ್ವಾಗತ ಕೋರಿದರು. ಅಂತೆಯೇ ಕಡೆಗೆ ಅವರಿಂದಲೇ ವಂದನಾರ್ಪಣೆಯೂ ನಡೆಯಿತು. ಶ್ರೀ ಬೇಲಿಮಠ ಮಹಾ ಸಂಸ್ಥಾನದ ಶ್ರೀ ಶಿರ ಶಿವರುದ್ರ ಮಹಾಸ್ವಾಮಿಗಳು ಕಾರ್ಯಕ್ರಮದ ಕಡೆಗೆ ಆಶೀರ್ವಚನವನ್ನು ನೀಡುತ್ತಾ "ಇಂದು ಶ್ರೀಯುತ ಕಬ್ಬಿನಾಲೆಯವರು ನಮಗೆಲ್ಲಾ ಕಬ್ಬಿನ ಹಾಲನ್ನೇ ಹರಿಸಿದ್ದಾರೆ. ಈ ಅವಧಾನದಲ್ಲಿ ಬರೀ ಸಾಹಿತ್ಯ ಮಾತ್ರವಲ್ಲದೆ, ಧರ್ಮ, ಶಾಸ್ತ್ರ ಮನರಂಜನೆ ಎಲ್ಲವೂ ಅಡಗಿದೆ. ಯಕ್ಷಗಾನದ ವಿವಿಧ ಮಜಲುಗಳನ್ನು ಪರಿಚಯಿಸುವುದರೊಂದಿಗೆ ಯಕ್ಷಗಾನದ ಹಾಗೂ ಅರ್ಥಗಾರಿಕೆಯ ಸೊಬಗನ್ನೂ ಕೇಳುಗರಿಗೆ ಉಣಬಡಿಸಿದ್ದಾರೆ. ಈ ಕಲೆಯನ್ನು ಪ್ರತಿಯೊಬ್ಬರೂ ಪ್ರೋತ್ಸಾಹಿಸಬೇಕು" ಎಂದು ಮನದುಂಬಿ ನುಡಿದರು.

ಇದೇ ಸಂದರ್ಭದಲ್ಲಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರು ಮಾತನಾಡುತ್ತಾ ಯಕ್ಷಗಾನವು ಖಂಡಿತವಾಗಿಯೂ 'ಜಾನಪದ' ಕಲೆ ಅಲ್ಲ, ಇನ್ನಾದರೂ ಸರಕಾರವು ಯಕ್ಷಗಾನ ಕಲಾವಿದರಿಗೆ 'ಜಾನಪದ ರತ್ನ' ಪ್ರಶಸ್ತಿಯನ್ನು ಕೊಡುವುದನ್ನು ನಿಲ್ಲಿಸಲಿ. ಸಾಧ್ಯವಾದರೆ ಯಕ್ಷಗಾನಕ್ಕೆಂದೇ ಪ್ರತ್ಯೇಕ ಅಕಾಡೆಮಿಯನ್ನು ರಚಿಸಲಿ ಎಂದು ಒತ್ತಾಯಿಸಿದರು. ಪೃಚ್ಛಕರಾಗಿ, ಶ್ರೀ ಲಕ್ಷ್ಮೀನಾರಾಯಣ ಕಲ್ಚಾರು (ಭಾಗವತಿಕೆ ತೆಂಕು) ಶ್ರೀ ಕೆ. ಸದಾಶಿವ ಆಮೀನ್ (ಭಾಗವತಿಕೆ-ಬಡಗು) ಆರ್. ಗಣೇಶ್, ಶತಾವಧಾನಿ

(ಸಮಸ್ಯೆ), ಡಾ. ಎಸ್. ರಂಗನಾಥ್ (ನಿಷೇಧಾಕ್ಷರಿ), ವಿದ್ವಾನ್ ಟಿ. ಕೇಶವ ಭಟ್ (ಯಮಕ), ಶ್ರೀ ಬಿ.ಎಸ್. ಚಂದ್ರಶೇಖರ್ (ಘಂಟಾವಾದನ), ಶ್ರೀ ಕೆ.ಪಿ. ರಾಜಗೋಪಾಲ್ ಕನ್ಯಾನ (ಆಶುಕವಿತೆ) ಹಾಗೂ ಶ್ರೀ ಶ್ರೀಕರ ಭಟ್ ಕೆ. ಪತ್ರಕರ್ತ ಮತ್ತು ಅರ್ಥಧಾರಿ ಇವರುಗಳು ಸಹಕರಿಸಿದ್ದರು. ಮೃದಂಗ ವಾದನದಲ್ಲಿ ಶ್ರೀ ಕೃಷ್ಣಮೂರ್ತಿ ತುಂಗ (ಬಡಗು) ಹಾಗೂ ಶ್ರೀ ಗಿರೀಶ್ ಪರಂಗೋಡು (ತೆಂಕು) ಇವರುಗಳು ಸಹಕರಿಸಿದರಲ್ಲದೆ, ಶ್ರುತಿಯಲ್ಲಿ ಶರವೂರು ಶ್ರೀನಿವಾಸರಾವ್ ಅವರಿದ್ದರು. ದೇವಗಿರಿ ಶ್ರೀ ವರಪ್ರದ ವೆಂಕಟೇಶ್ವರ ದೇವಾಲಯದ ಸಾಂಸ್ಕೃತಿಕ ವೇದಿಕೆಯ ಕಾರ್ಯದರ್ಶಿ ಶ್ರೀ ಕೃಷ್ಣಮೂರ್ತಿಯವರು ಬೇಲಿಮಠ ಸ್ವಾಮಿಗಳಿಗೆ ತುಳಸೀ ಹಾರ ಹಾಕಿ ಫಲಗಳನ್ನು ಕಾಣಿಕೆ ನೀಡುವುದರೊಂದಿಗೆ, ಭಾಗವಹಿಸಿದ ಎಲ್ಲಾ ವಿದ್ವಾಂಸರುಗಳಿಗೆ ಕಾಣಿಕೆಯನ್ನಿತ್ತರು. ಶ್ರೀಶಾರದಾ ಸೇವಿಕಾ ಸಂಘದ ಅಧ್ಯಕ್ಷೆಯಾದ ಶ್ರೀಮತಿ ಜಯಾಸೀತಾರಾಂ ಅವರು ಭಾಗವಹಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು. ಈ ಕಾರ್ಯಕ್ರಮವನ್ನು ಯಕ್ಷಕರ್ದಮ, ಶ್ರೀ ಶಾರದಾ ಸೇವಿಕಾ ಸಂಘ ಹಾಗೂ ಶ್ರೀ ವರಪ್ರದ ವೆಂಕಟೇಶ್ವರ ಸಾಂಸ್ಕೃತಿಕ ವೇದಿಕೆ ಜಂಟಿಯಾಗಿ ಸಂಘಟಿಸಿದ್ದವು.

ಪ್ರಥಮದಲ್ಲಿ ತೆಂಕು ಹಾಗೂ ಬಡಗು ಎರಡೂ ಶೈಲಿಯಲ್ಲಿ ಡಾ. ವಸಂತ ಭಾರದ್ವಾಜರಿಂದ ಗಣೇಶ ಸ್ತುತಿ, ಅನಂತರ ನಾಲ್ಕು ಸುತ್ತುಗಳಲ್ಲಿ ಶ್ರೀ ಲಕ್ಷ್ಮಿ ನಾರಾಯಣ ಕಲ್ಲಾಚ್ಚರರು ಹಾಡಿದ ನಾಲ್ಕೂ ಹಾಡುಗಳ ಕವಿ, ಕಾಲ, ಕೃತಿ ಹಾಗೂ ಸನ್ನಿವೇಶಗಳನ್ನು ಸಲೀಸಾಗಿ ಹೇಳಿದರು ವಸಂತ ಭಾರದ್ವಾಜರು. ಶ್ರೀ ಕೆ. ಸದಾಶಿವ ಅಮೀನರ ಬಡಗು ಶೈಲಿಯ ಭಾಗವತಿಕೆಯ ನಾಲ್ಕು ವಿವಿಧ ಪದಗಳಿಗೆ ಶ್ರುತಿಬದ್ಧವಾಗಿ, ತೂಕವಾದ ಅರ್ಥಗಳನ್ನು ಹೇಳಿ, ಇಂದಿನ ನವ ಅರ್ಥಧಾರಿಗಳಿಗೆ ಒಂದು ಮಾರ್ಗ ಸೂಚಿಯಾದರು. "ಶ್ರೀ ಹರಿ ಹಲಧರನಾದ!?" ಎಂಬ ಶತಾವಧಾನಿ ಡಾ. ಆರ್. ಗಣೇಶರ ಚಮತ್ಕಾರಿಕ ಸಮಸ್ಯೆಗೆ ಅಷ್ಟೇ ಸೊಗಸಾದ ಉತ್ತರ ಡಾ. ಭಾರಧ್ವಾಜರಿಂದ ಹೀಗಿತ್ತು "ಶ್ರೀ ಕೃಷ್ಣನು 'ಶ್ರೀ ಹರಿ' ಎಂಬರ್ಥದಲ್ಲಿ ಕೃಷ್ಣ ಹಾಗೂ ಬಲರಾಮರು ಒಟ್ಟಿಗೆ ಆಡುತ್ತಿದ್ದವರಲ್ಲವೆ? ಒಮ್ಮೆ ಬಲರಾಮ ತನ್ನ ಹಲಾಯುಧವನ್ನು ಕೃಷ್ಣನ ಪಕ್ಕ ಇಟ್ಟು ಎಲ್ಲೋ ಹೊರ ಹೋಗಿದ್ದ. ಆಗ ಕೃಷ್ಣನ ಹದಿನಾರು ಸಾವಿರ ಹೆಂಗಳೆಯರು ಬಂದು ಸ್ತ್ರೀ ಸಹಜವಾದ ರೀತಿಯಲ್ಲಿ ಕೊಂಕು ಮಾತನ್ನಾಡಿದಾಗ, ಶ್ರೀ ಕೃಷ್ಣನಿಗೆ ಕೋಪ ಬಂದು, ಪಕ್ಕದಲ್ಲಿದ್ದ ಹಲಾಯುಧವನ್ನೆತ್ತಿದ ಅವರಿಗೆ ಹೊಡೆಯಲು. ಆದ್ದರಿಂದ ಶ್ರೀಕೃಷ್ಣ ಹಲಧರನಾದ."

ಡಾ. ಎಸ್. ರಂಗನಾಥರು ನಿಷೇಧಿಸಿದ ಅಕ್ಷರಗಳನ್ನು ಹಾದು ಹಾದು ಸೊಗಸಾದ ಪದವೊಂದನ್ನು ಯಕ್ಷನಾಟ್ಯದ ಕುರಿತಾಗಿ ಕಟ್ಟಿದರು. ಶ್ರೀ ಬಿ.ಯಸ್. ಚಂದ್ರಶೇಖರರು ಪ್ರಾರಂಭದಿಂದ ಕೊನೆಯತನಕ ಬಾರಿಸಿದ ಘಂಟಾವಾದನ ಹದಿನೇಳು ಸಲ ಎಂದು ಕರಾರುವಾಕ್ಕಾಗಿ ಹೇಳಿದರು. ಕೆ.ಪಿ. ರಾಜಗೋಪಾಲ್ ಕನ್ಯಾನದವರು ಕೇಳಿದ ಸ್ತ್ರೀ ವರ್ಣನೆ, ವೆಂಕಟೇಶ್ವರ ಸ್ತುತಿ, ಯುದ್ಧ ಹಾಗೂ ಪ್ರಕೃತಿ ವರ್ಣನೆಗಳನ್ನು ಯಕ್ಷಗಾನದ ವಿವಿಧ ತಾಳ-ಛಂದಸ್ಸುಗಳಲ್ಲಿ ಸೊಗಸಾಗಿ ಪದ ಕಟ್ಟಿ ಹಾಡಿದರು. ಸಭಿಕರಿಂದ ದೀರ್ಘ ಕರತಾಡನ. ಸಂಯುಕ್ತ ಕರ್ನಾಟಕ ಪತ್ರಿಕಾ ಬಳಗದ ಪತ್ರಕರ್ತ ಹಾಗೂ ವಿಖ್ಯಾತ ಅರ್ಥಧಾರಿ ಶ್ರೀ ಶ್ರೀಕರ ಭಟ್ಟರು ಸಮರ್ಥವಾಗಿ 'ಅಪ್ರಸ್ತುತ ಪ್ರಸಂಗ'ವನ್ನು ಪ್ರಸ್ತುತಪಡಿಸಿದರು. ಆಗಾಗ ಡಾ. ಕಬ್ಬಿನಾಲೆಯವರ ಯೋಚನೆಯ ದಿಕ್ಕನ್ನು ಬದಲಿಸುತ್ತಾ ಪ್ರಸ್ತುತ ರಾಜಕೀಯ ಹಾಗೂ ಯಕ್ಷಗಾನದ ಸನ್ನಿವೇಶಗಳಿಗೆ ಹೋಲಿಕೆಗಳನ್ನು ಕೊಡುತ್ತಾ, ತುಸು ವ್ಯಂಗ್ಯವಾಗಿ ಸುರಿದ. ಪ್ರಶ್ನೆಯ ಸುರಿಮಳೆಗೆ, ಅಷ್ಟೇ ಚಿಕ್ಕದಾದ, ಚೊಕ್ಕದಾದ ಚಾಟಿಯೇಟಿನಂತಹ ಉತ್ತರ ಡಾ. ವಸಂತ ಭಾರದ್ವಾಜರಿಂದ. ಉದಾಹರಣೆಗೆ, ಹೆಚ್ಚಿನ ಯಕ್ಷಗಾನ ಪ್ರಸಂಗಗಳು ಯುದ್ಧ ಹಾಗೂ ಕಲ್ಯಾಣಗಳಲ್ಲೇ ಕೊನೊಗೊಳ್ಳುತ್ತವಲ್ಲಾ? ಎಂಬ ಪ್ರಶ್ನೆಗೆ ಶ್ರೀ ಕಬ್ಬಿನಾಲೆಯವರ ಉತ್ತರ ಹೀಗಿತ್ತು- "ಯಕ್ಷಗಾನದಲ್ಲಿ ಮೊದಲು ಯುದ್ಧ ನಂತರ ಕಲ್ಯಾಣವಾದರೆ, ನಿಜಜೀವನದಲ್ಲಿ ಮೊದಲು ಕಲ್ಯಾಣ, ನಂತರ ಯುದ್ಧ ಪ್ರಾರಂಭವಾಗುವುದು."

ಅಂತೂ ಸುಮಾರು ಎರಡೂವರೆ ಘಂಟೆಗಳ ಕಾಲ ಬೆಂಗಳೂರು ನಗರದ ಬನಶಂಕರಿ 3ನೇ ಹಂತದ ದೇವಗಿರಿ ಶ್ರೀ ವರಪ್ರದ ವೆಂಕಟೇಶ್ವರ ದೇವಳದ ನೂತನ ಧ್ಯಾನ ಮಂದಿರದಲ್ಲಿ ನಡೆದ ಈ ಯಕ್ಷಗಾನ ಅಷ್ಟಾವಧಾನವು ಸಾಹಿತ್ಯಾಸಕ್ತರಿಗೂ, ಯಕ್ಷಗಾನ ಪ್ರಿಯರಿಗೂ, ಒಂದು ರಸದೌತಣವನ್ನೇ ನೀಡಿತ್ತು. ಅಂತೆಯೇ ಬೆಂಗಳೂರು ನಗರದಲ್ಲಿ ಪ್ರಪಥಮ ಬಾರಿಗೆ ಈ ಕಾರ್ಯಕ್ರಮವನ್ನು ಈ ಶತಮಾನದ ಉತ್ತರಾರ್ಧದಲ್ಲೇ ಏರ್ಪಡಿಸಿ, ನಗರದ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಬರೆದ "ಯಕ್ಷ ಕರ್ದಮ (ರಿ) ಬೆಂಗಳೂರು" ತನ್ನ ಮುಡಿಗೆ, ಹೆಮ್ಮೆಯ ಗರಿಯೊಂದನ್ನು ಏರಿಸಿಕೊಂಡಿತು. ಶ್ರೀ ಶಾರದಾ ಸೇವಿಕಾ ಸಂಘ ಹಾಗೂ ಶ್ರೀ ದೇವಗಿರಿ ವರಪ್ರದ ವೆಂಕಟೇಶ್ವರ ದೇವಾಲಯದ ಸಾಂಸ್ಕೃತಿಕ ವೇದಿಕೆಗಳು ತಮ್ಮ ಪ್ರಾಯೋಜಕತ್ವವನ್ನು ನೀಡಿದ್ದವು.

ಯಕ್ಷಗಾನ ಕಲೆ ಮತ್ತು ಡಾ. ಶಿವರಾಮ ಕಾರಂತರು

ಡಾ. ಶಿವರಾಮ ಕಾರಂತರು ಯಕ್ಷಗಾನ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಯ ಬಗ್ಗೆ ಒಡಕು ಮಾತುಗಳಿವೆ. ಆದರೂ ದ.ಕ. ಜಿಲ್ಲೆಯಾದ್ಯಂತ ಯಕ್ಷಗಾನದ ಪ್ರದರ್ಶನ, ಪ್ರಚಾರ ಮಾಡಿದುದಲ್ಲದೆ, ವಿಶ್ವದಾದ್ಯಂತ ಅದನ್ನು ಜನಪ್ರಿಯಗೊಳಿಸಿದವರು ಡಾ. ಕಾರಂತರು. ಅವರ ಹೊಸ ಆವಿಷ್ಕಾರ ಸಂಭಾಷಣಾ ರಹಿತವಾದ 'ಯಕ್ಷಗಾನ ಬ್ಯಾಲೆ'ಯೂ ಒಂದಾಗಿದೆ. ವೇಷಧಾರಿ ತನ್ನ ಪಾದಕ್ಕೂ ಮುಖದ ಬಣ್ಣವನ್ನೇ ಹಾಕಬೇಕೆಂದು ತಿಳಿಸಿ, ಬೋಳುಕಾಲು ಕಾಣುವುದನ್ನು ತಡೆದವರು. ಅಂತೂ ಇಡೀ ಕನ್ನಡಿಗರನ್ನು ಯಕ್ಷಗಾನ ರಂಗದತ್ತ ತಿರುಗುವಂತೆ ಮಾಡಿದವರು ಡಾ. ಶಿವರಾಮ ಕಾರಂತರು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ ಎಂಬುದಾಗಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರು 'ಕಾರಂತ ಕಿರಣ-5' ಮಾಸಿಕ ಉಪನ್ಯಾಸ ಮಾಲೆಯಲ್ಲಿ ಉಪನ್ಯಾಸ ಕೊಡುತ್ತಾ ಅಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಸಿ. ಆನಂದರಾಮ ಉಪಾಧ್ಯ ಅವರು, ಹಿಂದಿನ ಕನ್ನಡ ಸಾಹಿತ್ಯ ಚರಿತ್ರಕಾರರಾದ ಶ್ರೀ ರಂ. ಶ್ರೀ. ಮುಗಳಿ, ಡಿ. ಎಲ್.ಎನ್. ಮುಂತಾದವರು ಯಕ್ಷಗಾನ ಸಾಹಿತ್ಯದ ಬಗ್ಗೆ ಕ್ವಚಿತ್ತಾಗಿ ಅರ್ಧ ಪುಟದಷ್ಟೋ, ಒಂದು ಪುಟದಷ್ಟೋ ಮಾತ್ರ ಹೇಳಿದ್ದಾರೆ. ಆದರೆ ಡಾ. ಕಾರಂತರು ಸುಮಾರು 60-70 ಪುಟಗಳಷ್ಟು ಸವಿಸ್ತಾರವಾಗಿ ಯಕ್ಷಗಾನ ಕವಿ ಕೃತಿ ಕಾಲಗಳ ಕುರಿತು ತಿಳಿಯಪಡಿಸಿದವರು. ಇದು ಕನ್ನಡ ಸಾಹಿತ್ಯಕ್ಕೆ ಅವರ ವಿಶೇಷ ಕೊಡುಗೆ ಎಂದರೆ ತಪ್ಪಾಗಲಾರದು. ಆದರೆ ಬಡಗು-ತೆಂಕು ವಿಚಾರಗಳು ಮಾತ್ರ ಶಿವರಾಮ ಕಾರಂತರ ಕುರಿತು ಮಾತನಾಡುವಾಗ ಸ್ವಲ್ಪ ತೊಡಕಾಗುತ್ತದೆ ಎಂದರು. ಬಿ.ಎಂ.ಶ್ರೀ ಪ್ರತಿಷ್ಠಾನದ ಶ್ರೀ ನಾ. ಗೀತಾಚಾರ್ಯರು ಮೊದಲಲ್ಲಿ ಸ್ವಾಗತಿಸಿದರು. ಶ್ರೀ ಶ್ರೀ ಶಿವರುದ್ರ ಮಹಾಸ್ವಾಮಿಗಳು, ಬೇಲಿಮಠ ಮಹಾಸಂಸ್ಥಾನದವರು ಉಪಸ್ಥಿತರಿದ್ದರು. ಈ

ಕಾರ್ಯಕ್ರಮವು ಬೆಂಗಳೂರು ನಗರದ ಬನಶಂಕರಿ 3ನೇ ಹಂತದ ದೇವಗಿರಿ ಶ್ರೀ ವರಪ್ರದ ವೆಂಕಟೇಶ್ವರ ದೇವಾಲಯದ ನೂತನ ಧ್ಯಾನ ಮಂದಿರದಲ್ಲಿ, 1998ನೇ ಮೇ 10ರ ಸಂಜೆ ನಡೆಯಿತು. ಇದನ್ನು ಬಿ.ಎಂ.ಶ್ರೀ ಪ್ರತಿಷ್ಠಾನ, ಶಂ.ಭಾ. ವಿಚಾರ ವೇದಿಕೆ, ಕ್ರೈಸ್ಟ್‌ಕಾಲೇಜು ಕನ್ನಡ ಸಂಘ ಹಾಗೂ ಯಕ್ಷ ಕರ್ದಮ (ರಿ) ಬೆಂಗಳೂರು ಸಂಘಟಿಸಿದ್ದವು.

ಅವಧಾನ ಕಲೆ'ಯ ಬಗ್ಗೆ ಪತ್ರಿಕಾಗೋಷ್ಠಿ

'ಅವಧಾನ ಕಲೆ ಕನ್ನಡ ಕಲೆ. ಅವಧಾನ ಎಂದರೆ ಜ್ಞಾಪಕದಲ್ಲಿಟ್ಟುಕೊಳ್ಳುವುದು. ಇಂದು ನಿಮಗೆ ಮಕ್ಕಳೆಷ್ಟು? ಎಂದು ಕೇಳಿದರೆ ಕ್ಯಾಲ್ಕುಲೇಟರನ್ನು ಒತ್ತಿ ಹೇಳುವ ಕಾಲ ಬಂದಿದೆ. ಅಷ್ಟಾವಧಾನದ ಮೂಲಕ ಹಳ್ಳಿ ಹಳ್ಳಿಗೂ ಇದನ್ನು ಪ್ರಚಾರ ಪಡಿಸಬೇಕಾಗಿದೆ. ಇದಕ್ಕೆ ಸಾರ್ವಜನಿಕರ ಪ್ರೋತ್ಸಾಹವೂ ಅಗತ್ಯ ಎಂಬುದಾಗಿ ಡಾ. ಕಬ್ಬಿನಾಲೆ ವಸಂತ ಭಾರಧ್ವಾಜ, ಸೋಮವಾರ ಪೇಟೆಯುವರೆಂದರು. ಅವರು ಪ್ರೆಸ್ ಕ್ಲಬ್‌ನಲ್ಲಿ ಬೆಳಿಗ್ಗೆ 11 ಗಂಟೆಗೆ 'ಅವಧಾನ ಕಲೆ'ಯ ಕುರಿತು ಏರ್ಪಡಿಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ಈ ಗೋಷ್ಠಿಯನ್ನು ಏರ್ಪಡಿಸಿದ 'ಯಕ್ಷ ಕರ್ದಮ ಬೆಂಗಳೂರು' ಇದರ ಸಂಚಾಲಕರಾದ ಕೆ.ಪಿ. ರಾಜ ಗೋಪಾಲ ಕನ್ಯಾನರು ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬೆಂಗಳೂರಲ್ಲಿ ಯಕ್ಷಗಾನಕ್ಕೆ ಆಗಬೇಕಾಗಿರುವ ಕಾಯಕಲ್ಪ

ಯಕ್ಷಗಾನ ಕಲೆಯು ಕರ್ನಾಟಕದಲ್ಲೆಲ್ಲಾ ಮನೆಮಾತಾದರೂ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಮಾತ್ರ ಅದು ಸುದೃಢವಾಗಿ ನೆಲೆಯೂರುವಲ್ಲಿ ವಿಫಲವಾಗುತ್ತಿದೆ ಎಂದು ಹೇಳದೆ ವಿಧಿ ಇಲ್ಲವಾಗಿದೆ. ನಗರದಲ್ಲಿ ಕೆಲವಾರು ಯಕ್ಷಗಾನಾಸಕ್ತ ಸಂಘಟನೆಗಳಿದ್ದರೂ, ಅವು ಬರೀ ತಮ್ಮ ಸಂಘಟನೆಗಳ ಸೀಮಿತ ಹಿತಾಸಕ್ತಿಯಲ್ಲಷ್ಟೇ ಉತ್ಸುಕವಾಗಿವೆ. ಹೊರತು, ಯಕ್ಷಗಾನದ ಸಮಷ್ಟಿ ಹಿತದೃಷ್ಟಿಯಿಂದ ದೂರಗಾಮಿಯಾದ ಯಾವುದೇ ಯೋಜನೆಗಳಾಗಲೀ, ಯೋಚನೆಯಾಗಲೀ ಯಾರಿಗೂ ಇದ್ದಂತೆ ಕಾಣುವುದಿಲ್ಲ. ಬಡಗುತಿಟ್ಟಿನ ಪ್ರಿಯರು ತೆಂಕುತಿಟ್ಟನ್ನು ದೂರುವುದೂ, ತೆಂಕಿನವರು ಬಡಗು ತಿಟ್ಟನ್ನು ದೂರುವುದೂ ಸರ್ವೇಸಾಮಾನ್ಯ. ಇದರಿಂದ ಯಕ್ಷಗಾನ ಕಲೆಗಾಗುವ ನಷ್ಟವನ್ನು ಅವರಾರೂ ಯೋಚಿಸಿದಂತಿಲ್ಲ. ಮಹಾಭಾರತದಲ್ಲಿ ಧರ್ಮರಾಯನೆಂದಂತೆ, ''ನಮ್ಮಲ್ಲಿ ದಾಯಾದಿ ಕಲಹವಿದ್ದರೂ, ಹೊಗರಿನವರು ಬಂದಾಗ ನಾವು ಐವರಲ್ಲ ನೂರೈದು ಮಂದಿ'' ಎಂದಂತೆ ಸಮಷ್ಟಿಯಲ್ಲಿ ಯಕ್ಷಗಾನ ಕಲೆಯ ಆರೋಗ್ಯಪೂರ್ಣ ಬೆಳವಣಿಗೆಗಾಗಿ ದುಡಿಯುವವರನ್ನು ನಾನು ಕಾಣೆ. ಕಳೆದ ಹತ್ತಾರು ವರುಷಗಳಲ್ಲಿ ಬೆಂಗಳೂರಿನ ಯಕ್ಷಗಾನ ಕ್ಷೇತ್ರವನ್ನು ಹತ್ತಿರದಿಂದ ನೋಡಿದ ನಾನು, ನನ್ನ ಪ್ರಾಮಾಣಿಕವಾದ ಅನಿಸಿಕೆಗಳನ್ನು ತಮ್ಮ ಮುಂದಿಡುತ್ತಿದ್ದೇನೆ.

ಕಾರ್ಯಾಲಯ.. - ಯಕ್ಷಗಾನಾಸಕ್ತ ಜನರು ಒಂದು ಕಡೆ ಸೇರುವಂತಹ ಯಾವುದೇ ಸಭಾಭವನ, ಕಾರ್ಯಾಲಯ ಅಥವಾ ಸ್ಥಳ ಬೆಂಗಳೂರಲ್ಲಿ ಇಲ್ಲ. ಯಕ್ಷಗಾನಾಸಕ್ತ ಕಾರ್ಯಕರ್ತರು, ಕಲಾವಿದರು ಬರಬಹುದು; ಹೋಗಬಹುದು.

ಅವರು ಹೋದಲ್ಲಿಗೆ ಆ ಕಾರ್ಯ ಚಟುವಟಿಕೆ ಅಲ್ಲಿಗೇ ಕೊನೆಗಾಣುವ ಸಾಧ್ಯತೆ ಇದೆ. ಹಾಗಾಗದಂತೆ ತಡೆಯಲು ಅದು ನಿರಂತರವಾಗಿ ಹರಿದುಕೊಂಡು ಹೋಗಲು ಒಂದು ನಿಶ್ಚಿತ ಸ್ಥಳದ ಅಗತ್ಯ ಬಹಳ. ಆದ್ದರಿಂದ ಸರಕಾರ ಮನ ಮಾಡಿದರೂ ಆಗಬಹುದು ಅಥವಾ ಖಾಸಗೀ ಸಂಘ ಸಂಸ್ಥೆಗಳೂ ಆಗಬಹುದು. ಆದಷ್ಟು ನಗರದ ಹೃದಯ ಭಾಗದಲ್ಲಿ ಯಕ್ಷಗಾನ ಕಲೆಗೇ ಈ ಮೀಸಲಾದ ಒಂದು ಸಭಾಭವನ, ಲೈಬ್ರರಿ, ತರಬೇತಿ ಕ್ಲಾಸು, ಅತಿಥಿ ಭವನ, ಕಾರ್ಯ್ಯಾಲಯವೇ ಮೊದಲಾದವುಗಳನ್ನೊಳಗೊಂಡ ಒಂದು 'ಯಕ್ಷ ಭವನ'ದ ಅಗತ್ಯತೆ ತೀರಾ ಇದೆ. ಆ ಕುರಿತು ಆಢ್ಯ ವ್ಯಕ್ತಿಗಳು, ಸಂಸ್ಥೆಗಳು ಮನ ಮಾಡಬೇಕು. ಅಲ್ಲಿಗೆ, ನಗರದಲ್ಲಿ ಒಂದು ಭದ್ರವಾದ ಅಸ್ತಿಭಾರವನ್ನು ಹಾಕಿದಂತೆ. ಅನಂತರ ವರ್ಷವಿಡೀ ಯಕ್ಷಗಾನ ಕುರಿತಾದ ಪ್ರದರ್ಶನ, ಉಪನ್ಯಾಸ, ಗೋಷ್ಠಿ ಸಮ್ಮೇಳನ ಕಮ್ಮಟಗಳನ್ನು ಸಾಂಗವಾಗಿ ಯಾವ ಅಡೆತಡೆಯಿಲ್ಲದೆ ನಡೆಸಿಕೊಂಡು ಬರಬಹುದು.

ದತ್ತಿನಿಧಿ :

ನಗರದಲ್ಲಿ ವಿವಿಧ ಕಲೆಗಳಿಗೆ ಬೆಳವಣಿಗೆಗೆ ಪ್ರದರ್ಶನಗಳಿಗೆ ಪ್ರೋತ್ಸಾಹ ಕೊಡುವ ನೂರಾರು ದತ್ತಿನಿಧಿಗಳು ಹಲವು ಖಾಸಗೀ ಸ್ವಯಂಸೇವಾ ಸಂಸ್ಥೆಗಳಲ್ಲಿವೆ. ಆದರೆ, ಯಕ್ಷಗಾನ ಕಲೆಯ ಕುರಿತಾದ ಪ್ರದರ್ಶನ, ಉಪನ್ಯಾಸಗಳಿಗೆ ಒಂದೇ ಒಂದು ದತ್ತಿನಿಧಿ ಯನ್ನು ನಾನು ಕಾಣೆ. ಇಡೀ ನಗರದಲ್ಲಿ ಯಕ್ಷಗಾನ ಹಬ್ಬಲು ಮೂಲೆ ಮೂಲೆಗಳಲ್ಲಿ ಆಗಾಗ ಇದರ ಕುರಿತಾದ ಪ್ರದರ್ಶನ, ಗೋಷ್ಠಿ ಉಪನ್ಯಾಸಗಳು ನಡೆಯುತ್ತಿರಬೇಕು. ವೃತ್ತ ಪತ್ರಿಕೆ, ಆಕಾಶವಾಣಿ, ಟಿ.ವಿ.ಗಳಲ್ಲಿ ಅದರ ವಾರ್ತೆಗಳು ಬರುತ್ತಿರಬೇಕು. ಹಾಗಾದಾಗ ಮಾತ್ರ ಯಕ್ಷಗಾನವು ಸಹಾ ಜೀವಂತವಾಗಿದೆ ಎಂದು ಜನರು, ಸರಕಾರ ತಿಳಿದುಕೊಳ್ಳುತ್ತಾರೆ. ಹೇಗಿದ್ದರೂ ಇದು ಪ್ರಚಾರ ಯುಗವಲ್ಲವೇ? ಈ ಕುರಿತು ಯಕ್ಷಗಾನಪ್ರಿಯ ಆಢ್ಯ ವ್ಯಕ್ತಿಗಳು, ಖಾಸಗೀ ಕಂಪೆನಿಗಳ ಮಾಲೀಕರು, ಭಾರತೀಯ ವಿದ್ಯಾಭವನ, ಬಿ.ಎಂ. ಶ್ರೀ ಪ್ರತಿಷ್ಠಾನ, ದ.ಕ. ಸಂಘ, ಬಂಟರ ಸಂಘ, ಹವ್ಯಕ ಸಭಾ, ಆನಂದ ಬಳಗ ಮೊದಲಾದೆಡೆಗಳಲ್ಲಿ ಯಕ್ಷಗಾನಕ್ಕಾಗಿಯೇ ಇರುವ ವಿವಿಧ ದತ್ತಿನಿಧಿಗಳನ್ನು ಸ್ಥಾಪಿಸಬೇಕು. ಅದು ಅತೀ ಶೀಘ್ರವಾಗಿ ಆಗಬೇಕಾದ ಕಾರ್ಯ. ಸಂಬಂಧಪಟ್ಟವರು ಗಮನಿಸಲಿ.

ಯಕ್ಷಗಾನ ಸಾಹಿತ್ಯಕ್ಕೆ ಪ್ರಶಸ್ತಿ ಪ್ರಾರಂಭಿಸಿ

ಈಗೀಗ ಯಕ್ಷಗಾನ ಕಲೆಯು ಅವಸಾನದತ್ತ ಸಾಗುತ್ತಿದೆ ಎಂಬ ಕೂಗು ಬರುತ್ತಿರುವಂತೆ ಇನ್ನೊಂದು ಬದಿಯಲ್ಲಿ ಯಕ್ಷಗಾನದತ್ತ ಇಡೀ ಕರ್ನಾಟಕದ ಜನತೆ ಒಲವು ತೋರುತ್ತಿದ್ದಾರೆ. ಯಕ್ಷಗಾನದ ಕಲಾವಿದರಿಗೆ ಕುಬೆವೂರು ಪ್ರಶಸ್ತಿ ಪೊಳಲಿ ಶಾಸ್ತ್ರಿ ಪ್ರಶಸ್ತಿ ಮುಂತಾದ ಹತ್ತು ಹಲವು ಪ್ರಶಸ್ತಿಗಳಿವೆ. ಆದರೆ ಈ ತನಕ ಯಕ್ಷಗಾನ ಪ್ರಸಂಗಗಳಿಗೆ ಅಥವಾ ಯಕ್ಷಗಾನ ಕುರಿತಾದ ಪ್ರಬಂಧ, ವಿಮರ್ಶಾ ಕೃತಿಗಳಿಗೆ ಕೊಡುವ ಪ್ರಶಸ್ತಿ ಪೀಠಗಳ ಬಗ್ಗೆ ಯಾವ ಸಂಸ್ಥೆಗಳೂ ಅಥವಾ ವ್ಯಕ್ತಿಗಳೂ ಮನ ಮಾಡಿಲ್ಲ. ಯಾಕೆದರೆ ಪ್ರಸಂಗ ಸಾಹಿತ್ಯವೂ ಸಹ ಇಂದು ಸಾಹಿತ್ಯ ಕ್ಷೇತ್ರದ ಒಂದು ಪ್ರಮುಖ ಅಂಗವಾಗಿದೆ. ಯಕ್ಷ ಕಲೆಯ ಕುರಿತು ಹತ್ತಾರು ವಿವಿಧ ಕೃತಿಗಳು ಹೊರ ಬರುತ್ತಿವೆ. ಇವೆಲ್ಲರನ್ನೂ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಯಕ್ಷಗಾನದ ಉತ್ತಮ ಪ್ರಸಂಗ ಕೃತಿಗಳಿಗೊಂದು ಹಾಗೂ ಪ್ರಸಂಗೇತರ ಕೃತಿಗಳಿಗೊಂದು ಎಂಬ ಪ್ರತಿಷ್ಠಿತ ಪ್ರಶಸ್ತಿಗಳನ್ನು ಕೊಡುವ ಬಗ್ಗೆ ಸಂಬಂಧಿಸಿದ ಯಕ್ಷಗಾನಪ್ರಿಯ ಸಂಘ ಸಂಸ್ಥೆಗಳು, ವ್ಯಕ್ತಿಗಳು ಗಂಭೀರವಾಗಿ ಯೋಚಿಸಿ, ಅನುಷ್ಠಾನಿಸುವಲ್ಲಿ ಕ್ರೀಯಾಶೀಲರಾಗಬೇಕೆಂದು ಈ ಮೂಲಕ ವಿನಮ್ರ ಪ್ರಾರ್ಥನೆ.

ದಿ. ಕುರಿಯ ವಿಠಲ ಶಾಸ್ತ್ರಿಗಳ ಸಂಸ್ಮರಣ ಗ್ರಂಥ ಹೊರ ಬರಲಿ

ಕಳೆದೆರಡು ಯಕ್ಷಪ್ರಭಾ ಸಂಚಿಕೆಗಳಲ್ಲಿ ದಿ. ಕುರಿಯ ಶಾಸ್ತ್ರಿಗಳ ಬಗ್ಗೆ ಕಾರ್ಯಕ್ರಮ ನಡೆದುದನ್ನು ಓದಿದೆ. ದಿ. ಶಾಸ್ತ್ರಿಗಳ ಒಡನಾಡಿಯಾಗಿರುವ ದಿ. ತಾಳ್ತಜೆ ಕೃಷ್ಣಭಟ್ಟರು ಹತ್ತಾರು ವರುಷಗಳ ಮೊದಲೇ ಶಾಸ್ತ್ರಿಗಳ ಕುರಿತಾದ ಹತ್ತಾರು ವಿಷಯಗಳನ್ನು ಕ್ರೋಢೀಕರಿಸಿ, ಅಲಭ್ಯವಾದ ಭಾವಚಿತ್ರಗಳನ್ನು ಸಂಗ್ರಹಿಸಿ, ಶಾಸ್ತ್ರಿಗಳ ಒಡನಾಡಿಗಳ ಕುರಿತೂ ಅಮೂಲ್ಯವಾದ ಲೇಖನಗಳನ್ನು ಸಂಗ್ರಹಿಸಿ, ಸಿದ್ದಪಡಿಸಿ ಇಟ್ಟಿದ್ದಾರೆ. ಆದರೆ ಪ್ರಕಟಿಸುವವರು ಮುಂದೆ ಬಾರದೆ, ಅದು ಹಸ್ತಪ್ರತಿರೂಪದಲ್ಲೇ ಉಳಿದು, ಈಗ ಜೀರ್ಣವಾಗುವ ಸ್ಥಿತಿಗೆ ತಲುಪಿದೆ. ಅದು ಪೂರ್ಣನಾಶವಾಗುವ ಮೊದಲೇ ಪ್ರಕಟಿಸಿ ಯಕ್ಷಗಾನ ಪ್ರಪಂಚಕ್ಕೆ ಒಳ್ಳೆಯ ಕಾಣಿಕೆಯೊಂದನ್ನು ಕೊಡಿಸುವಲ್ಲಿ ಸಂಬಂಧ ಪಟ್ಟ ಸಂಘ ಸಂಸ್ಥೆಗಳು, ವಿ.ವಿ.ಗಳು ಮನ ಮಾಡಬೇಕಾಗಿ ಪ್ರಾರ್ಥನೆ.

"ಪಾರ್ತಿ ಸುಬ್ಬ" ಕಾದಂಬರಿ ಪ್ರಕಾಶಗೊಳ್ಳಲಿ!

ವಿದ್ವಾನ್ ತಾಳ್ತಜೆ ಕೃಷ್ಣಭಟ್ಟರು ಹಲವು ದಶಕಗಳ ಮೊದಲೇ 'ಕಡುಗಲಿ ಪಾತಿಸುಬ್ಬ ಕವಿ' ಎಂಬ ಕಾದಂಬರಿಯನ್ನು ರಚಿಸಿದ್ದು, ಈಗಲೂ ಹಸ್ತ ಪ್ರತಿರೂಪದಲ್ಲೇ ಉಳಿದಿದೆ. ಇದನ್ನು ಕಾದಂಬರಿ ಎನ್ನುವುದಕ್ಕಿಂತ ರೋಚಕ ಕಾದಂಬರಿ ಶೈಲಿಯಲ್ಲಿ ಬರೆದ ಪಾರ್ತಿ ಸುಬ್ಬನ ಚರಿತ್ರೆ, ಓದಿಸಿಕೊಂಡು ಹೋಗುವ ಈ ಕೃತಿಯನ್ನು ಶೇಣಿ ಅಕಾಡೆಮಿ, ಕರಾವಳಿ ಪ್ರತಿಷ್ಠಾನ ಮಂಗಳೂರು. ವಿ.ವಿ.ದಂಥವರು ಮುಂದೆ ಬಂದು ಪ್ರಕಟಿಸುವ ಮನ ಮಾಡಬೇಕು ಅಥವಾ 'ಯಕ್ಷ ಪ್ರಭಾ' ಧಾರವಾಹಿಯಾಗಿ ಪ್ರಕಟಿಸಿದರೆ ಓದುಗರಿಗೆ ಒಂದು ಒಳ್ಳೆಯ ರಸದೂಟವಾದೀತು. ಪ್ರಕಟಿಸುವಿರಾ?

ಯಕ್ಷಗಾನ ಪ್ರಸಂಗ

ಸೂರ್ಯೋದಯ

(ಎಡತೊರೆ ಶ್ರೀಅರ್ಕ ಪುಷ್ಕರಣೀ ಮಹಾತ್ಮೆ)

ಕವಿ:

ಜಲಜಸಖ ಬೆಳ್ಳಾರೆ

ಕಥಾಸಂಯೋಜನೆ:

ಕೆ.ಪಿ. ರಾಜಗೋಪಾಲ್ ಕನ್ಯಾನ

ರಚನೆ:

28–07–1998, ನಾಗರಪಂಚಮಿ

ಕವಿಪರಿಚಯ

33 ವರ್ಷಗಳಿಂದ ನಿರಂತರವಾಗಿ ಯಕ್ಷಗಾನ ಕಲಾವಿದರಾಗಿ ಕಲಾಸೇವೆಯನ್ನು ಮಾಡುತ್ತಿರುವ ಬೆಳ್ಳಾರೆಯ ಶ್ರೀ ಕೆ. ಸೂರ್ಯನಾರಾಯಣ ಭಟ್ಟರು ಸರಳ ನಿರಾಡಂಬರ ವ್ಯಕ್ತಿ. ಬೆಂಬಿಡದ ಆರ್ಥಿಕ ಸಂಕಷ್ಟದ ಅಭದ್ರತೆಯ ಮತ್ತು ಒತ್ತಡದ ನಡುವೆಯೂ ಉತ್ತಮ ಕಲಾವಿದರಾಗಿ, ಪೋಷಕರಾಗಿ ಎಲೆಯ ಮರೆಯ ಹಣ್ಣಿನಂತೆ ಬೆಳೆದಿದ್ದಾರೆ.

ದ.ಕ. ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆಗೆ ಸಮೀಪಗ ಕಲ್ಮಡ್ಕದ ಕುಂಞಹಿತ್ಲು ಇವರ ಮೂಲ. ಬೆಳ್ಳಾರೆಯ ವಾಸ್ಯವ್ಯ 40 ವರ್ಷಗಳಿಗಿಂತ ಹಿಂದಿನದು. ಕೆ. ಗೋವಿಂದ ಭಟ್ಟ ಮತ್ತು ಸರಸ್ವತಿಯವರ ಮಕ್ಕಳಲ್ಲಿ ಹಿರಿಯವನಾಗಿ ಜನನ. ತಂದೆ ಗೋವಿಂದ ಭಟ್ಟರು ಸಂಸ್ಕೃತ ಜ್ಞಾನವುಳ್ಳವರೂ, ಯಕ್ಷಗಾನ ಕಲಾವಿದರೂ ಮತ್ತು ಆಶುಕವಿತೆ ರಚಿಸಬಲ್ಲವರೂ ಆಗಿದ್ದರು. ೬ನೇ ತರಗತಿಯವರೆಗೆ ವಿದ್ಯಾಭ್ಯಾಸ. ಇದೀಗ ೬೧ರ ಹರೆಯ. ಬಡತನ ಇವರ ಯೋಜನೆಗಳಿಗೆ ತೊಡಕಾದರೂ ಕಲಾ ವೃತ್ತಿಗೆ ತೊಡಕಾಗಲಿಲ್ಲ. ಬೆಳೆಯುತ್ತಿರುವ ಬೆಳ್ಳಾರೆಯ ಕಾಂಕ್ರೀಟು ಕಟ್ಟಡದ ಬದಿಯಲ್ಲೊಂದು ಸಾಮಾನ್ಯ ಗುಡಿಸಲಿನಲ್ಲಿ ಸಣ್ಣ ವ್ಯಾಪಾರ ಮತ್ತು ಫೋಟೋಗಳಿಗೆ ಫ್ರೇಮು ಹಾಕುವ ಉದ್ಯೋಗ ಮಾಡುತ್ತಾ ವ್ಯಾಪಾರೀಕರಣ, ಆಧುನಿಕತೆಯ ಮಾಲಿನ್ಯಕ್ಕೊಳಗಾಗದೆ ಜೀವನ ಸಾಗಿಸುತ್ತಿದ್ದರು. ಶ್ರೀ ಭಟ್ಟರು ಬೆಳ್ಳಾರೆಯ ಮಣ್ಣನ್ನು ಯಕ್ಷಗಾನದ ಮೂಲಕ ಜೀವಂತವಾಗಿಟ್ಟವರು.

೧೯೭೬ ರ ಅಕ್ಟೋಬರ್ ೨ರಂದು ಸ್ವತಃ ಭಟ್ಟರೇ ಹುಟ್ಟು ಹಾಕಿದ "ಶ್ರೀ ವಾಣೀ ಗಣೇಶ ಪ್ರಸಾದಿತ ಕಲಾವೃಂದವನ್ನು" ಸೀಮಿತ ಸದಸ್ಯರುಗಳ, ಪೋಷಕರ ಸಹಕಾರದಿಂದ ಎಂದೂ ನಿಷ್ಕ್ರಿಯವಾಗದೆ ಮುನ್ನಡೆಸುತ್ತಾ

ಪಾತ್ರ ಪರಿಚಯ

1. ಸೂರ್ಯ
2. ಸಂಜ್ಞಾದೇವಿ
3. ಯಮುನೆ
4. ನಾರದ
5. ಶಿವ
6. ಪಾರ್ವತಿ
7. ವಿಷ್ಣು
8. ಲಕ್ಷ್ಮೀ
9. ಅರುಣ
10. ವಿಶ್ವಕರ್ಮ
11. ದೇವೇಂದ್ರ
12. ಅಗ್ನಿ
13. ವರುಣ
14. ಪ್ರಭಂಜನ
15. ಮಹಾಶೇಷ
16. ಪೇಶಲೆ
17. ಕುಶಕರ
18. ಪ್ರಸಂಜ್ಞೆ
19. ಅಗಸ್ತ್ಯ
20. ವಿಶೋಕ
21. ಸುಮತಿ
22. ಭುವನೇಶ
23. ಗಜಾಸ್ಯ ಮಾಂತ್ರಿಕ
24. ಸುಬಲರಾಜ
25. ಮೀನಾಕ್ಷಿ
26. ಅರುಣೆ
27. ಧರ್ಮಮಿತ್ರ
28. ಧನಮಿತ್ರ
29. ಗುಣಮಿತ್ರ
30. ಕಲಿಮಿತ್ರ
31. ಶ್ರುತಧೀ
32. ವಸುರಾಯ
33. ನಂದಿವರ್ಮ
34. ಶೂರವರ್ಮ
35. ವೀರವರ್ಮ
36. ಚಂದ್ರವರ್ಮ
37. ಮದನವರ್ಮ
38. ಸುದರ್ಶನ
39. ಕರ್ಕಟಾಸುರ
40. ಮತ್ಸ್ಯಮುಖೀ

* ಋಷಿಗಳು
* ಹಲ್ಲೆ
* ನವಕನ್ಯೆಯರು
* ಪಿಶಾಚಿಗಳು
* ಜೋಯಿಸರು
* ವಿಪ್ರರು
* ರಾಜಪುರೋಹಿತರು
* ದುಷ್ಟಕೂಟದವರು
* ನೃತ್ಯಗಾತಿಯರು
* ದೂತರು
* ಬೇಡರು
* ಮತ್ಸ್ಯಗಳು ಇತ್ಯಾದಿ

ಸೂರ್ಯೋದಯ (ಯಕ್ಷಗಾನ)

ಕಥಾ ಸಾರಾಂಶ

1. ಎಡತೊರೆ ಕ್ಷೇತ್ರ ನಿರ್ಮಾಣ

ಈ ಪ್ರಸಂಗವು ನಮ್ಮ ಕರ್ನಾಟಕದ ಪುರಾತನ ಸೂರ್ಯ ದೇವಾಲಯವಿರುವ ಮೈಸೂರಿನ ಕೃಷ್ಣರಾಜನಗರದ ಎಡತೊರೆ ಅರ್ಕ ಪುಷ್ಕರಿಣೀ ಕ್ಷೇತ್ರದ ಸ್ಥಳ ಪುರಾಣದ ಆಧಾರದಿಂದ ರಚಿತವಾದುದಾಗಿದೆ. ಇದರ ಮೂಲ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಾಶಿಸಿದ "ಎಡತೊರೆ ಅರ್ಕ ಪುಷ್ಕರಿಣೀ ಮಹಾತ್ಮ್ಯೆ" ಎಂಬ ಗದ್ಯ ಗ್ರಂಥವಾಗಿದೆ. ನೈಮಿಷಾರಣ್ಯದಲ್ಲಿ ಸೂತಮುನಿ ತನ್ನ ಶಿಷ್ಯರಿಗೆ ಹಿಂದೆ ಭಾರ್ಗವನು ತನ್ನೊಂದಿಗಿದ್ದ ಬ್ರಾಹ್ಮಣರಿಗೆ ಹೇಳಿದ ಪುಷ್ಕರಿಣಿ ಕತೆಯನ್ನು ಹೇಳುವಲ್ಲಿಂದ ಕತೆ ಪ್ರಾರಂಭವಾಗುತ್ತದೆ. ದೇವೇಂದ್ರನ ಒಡ್ಡೋಲಗ. ಸೂರ್ಯ ಲೋಕಕ್ಕೆ ಪಯಣ. ಸೂರ್ಯನ ಪ್ರವೇಶ - ಪತ್ನಿ ಸಂಜ್ಞಾದೇವಿ, ಮಗ ವೈವಸ್ವತಮನು ಯಮ ಹಾಗೂ ಮಗಳು. ಯಮುನೆಯರೊಡನೆ. ಜವ್ವನೆ ಮಗಳು ಯಮುನೆಯನ್ನು ನೋಡಿ ಸೂರ್ಯದೇವ ಕಾಮವಿಕಾರಕ್ಕೆ ಒಳಗಾಗುತ್ತಾನೆ.

ರಾತ್ರಿ ಯಮುನೆಯ ಮೇಲೆ ಕೈಮಾಡುತ್ತಾನೆ. ಸಂಜ್ಞೆ ವಿರೋಧಿಸುತ್ತಾಳೆ. ದೇವೇಂದ್ರಾದಿಗಳು ಇದನ್ನು ಕಂಡು ಸೂರ್ಯನನ್ನು ಅಪಹಾಸ್ಯಮಾಡುತ್ತಾರೆ. ಅವಮಾನಿತನಾದ ರವಿಯು ಧರೆಗಿಳಿದು ಎಡತೊರೆಗೆ ಬರುತ್ತಾನೆ. ಅಲ್ಲಿ ತನ್ನ ಪಾಪ ಪರಿಹಾರಕ್ಕಾಗಿ ಶಿವಲಿಂಗವನ್ನು ಸ್ಥಾಪಿಸಿ, ಅಶ್ವಮೇಧಯಾಗವನ್ನು ಮಾಡುತ್ತಾನೆ. ರವಿ ಇಲ್ಲದೆ ಸತಿ ಸಂಜ್ಞಾದೇವಿಯು ಕಳವಳಿಸಿ, ನಾರದನಲ್ಲಿ ದೂರಿಡುತ್ತಾಳೆ. ಅವರೆಲ್ಲರೂ

ಎಡತೊರೆಗೆ ಬರುತ್ತಾರೆ. ಪ್ರತ್ಯಕ್ಷರಾದ ಹರಿ-ಹರರು ರವಿಯ ಪಾಪವನ್ನು ಪರಿಹರಿಸುವರು. ಶಿವನು ವಿಶ್ವಕರ್ಮನನ್ನು ಕರೆಯಿಸಿ, ಅಲ್ಲಿ ದಿವ್ಯ ಜಗವೊಂದನ್ನೇ ಸೃಷ್ಟಿಮಾಡಲು ತಿಳಿಸಿ, ಹಲವು ಪುಷ್ಕರಣಿಗಳನ್ನೂ ನಿರ್ಮಿಸುವನು. 'ಅದರಲ್ಲಿ ಮಿಂದವರಿಗೆ ಸರ್ವಪಾಪ ಪರಿಹಾರ'ವೆಂದು ಅಭಯವೀಯುವರು.

2. ಕೀರ್ತಿಮುಖ ವಿಜಯ

ಸಾಗರ ಮಧ್ಯದಲ್ಲಿ ರಾಕ್ಷಸ ಜಲಂಧರನ ಓಲಗ, ಅಲ್ಲಿಗೆ ನಾರದರ ಪ್ರವೇಶ. ಅವರ ಸಲಹೆಯಂತೆ ಶಿವನ ರಾಣಿ ಶಿವೆಯ ಮದುವೆಯಾಗಲು ಜಲಂಧರ ಮನಮಾಡುತ್ತಾನೆ. ತನ್ನ ಮಿತ್ರ ರಾಹುವನ್ನು ಕರೆದು, ಶಿವನಲ್ಲಿ ಪಾರ್ವತಿಯನ್ನು ತನಗಾಗಿ ಕಳಿಸಿಕೊಡಬೇಕೆಂದು ಕೇಳಲು ಕೈಲಾಸಕ್ಕೆ ಕಳಿಸುತ್ತಾನೆ. ಶಿವನು ನಿರಾಕರಿಸಿ ತನ್ನ ಗಣಗಳಾದ ಭೃಂಗಿ - ನಂದಿಯರ ಮೂಲಕ ರಾಹುವನ್ನು ಬಡಿದೋಡಿಸುತ್ತಾರೆ. ಇದನ್ನು ತಿಳಿದ ಜಲಂಧರ ಸಿಟ್ಟುಗೊಂಡು, ತಾನೇ ಸ್ವತಃ ಶಿವನಲ್ಲಿಗೆ ಬರುತ್ತಾನೆ. ಶಿವನು ಒಪ್ಪದೆ, ತಾನು ಕಳಿಸಿದ ಗಣಗಳನ್ನೆಲ್ಲಾ ಜಲಂಧರನು ಸೋಲಿಸುತ್ತಾನೆ. ಕಡೆಗೆ ಶಿವನು ತನ್ನ ಶೂಲದಿಂದ ಕೀರ್ತಿಮುಖನೆಂಬ ಒಬ್ಬ ಘೋರ ರೂಪಿಯನ್ನು ಸೃಷ್ಟಿಸಿ, ಯುದ್ಧಕ್ಕೆ ಕಳಿಸುತ್ತಾನೆ. ಅವನೊಡನೆ ಜಲಂಧರನು ಸೋತು, ಓಡಿ ಹೋಗುವನು. ಹಸಿವಿಂದ ಬಳಲುವ ಕೀರ್ತಿಮುಖನಿಗೆ, ತನ್ನ ಸ್ವಂತ ದೇಹವನ್ನೇ ತಿನ್ನಲು ಶಿವನು ತಿಳಿಸುವನು. ಅಂತೆಯೇ ತನ್ನ ದೇಹವನ್ನೇ ತಿಂದ ಕೀರ್ತಿ ಮುಖನ ಮೇಲೆ ಸಂತುಷ್ಟನಾದ ಶಿವನು ಎಡತೊರೆಯಲ್ಲಿ ನೆಲೆಸಲು ತಿಳಿಸುತ್ತಾನೆ. ಆ ಸ್ಥಳವೇ ಮುಂದೆ 'ನಂದೀ ಭೃಂಗೀ ಪಳಸ್ಥಳ'ಎಂದು ಪ್ರಸಿದ್ಧವಾಗುವುದು.

3. ಸತ್ವಪರೀಕ್ಷೆ

ಗಂಧವತೀ ಪಟ್ಟಣದಲ್ಲಿ ಪ್ರಭಂಜನನು (ವಾಯುದೇವ) ಸಂಚರಿಸುತ್ತಿರುವಾಗ ಆದಿಶೇಷನು ಎದುರಾಗುತ್ತಾನೆ. ತಾವೀರ್ವರಲ್ಲಿ ಯಾರು ಬಲಶಾಲಿಗಳೆಂದು ಸ್ಪರ್ಧೆ ಏರ್ಪಡುತ್ತದೆ. ಮೇರುಪರ್ವತದತ್ತ ನಡೆದ ಅವರೀರ್ವರಲ್ಲಿ ಆದಿಶೇಷನು, ಆ ಪರ್ವತವನ್ನೇ ಕಾಣದಂತೆ ಸುತ್ತು ಹಾಕುವನು. ಸಿಟ್ಟುಗೊಂಡ ಪ್ರಭಂಜನನು ಜೋರಾಗಿ

ಗಾಳಿ ಬೀಸುತ್ತಾ, ಆ ಪರ್ವತವನ್ನು ಮುರಿಯಲು ಯತ್ನಿಸುವನು. ಆಗ ಮೈನಾಕ ಪರ್ವತದ ಶಿಲೆಯೊಂದು ಸಿಡಿದು ಸಮುದ್ರ ತೀರದಲ್ಲಿ ಮುನಿಯೋರ್ವನ ಮಗಳು ಪೇಶಲೆಯೆಂಬ ಋಷೀ ಕನ್ಯೆಯು ಸಾಕುತ್ತಿದ್ದ ಹುಲ್ಲೆ ಮರಿಯಮೇಲೆ ಬಿದ್ದು, ಅದು ಅಸು ನೀಗುವುದು. ಪೇಶಲೆ ದುಃಖದಿಂದ ತನ್ನ ತಂದೆ ಋಷಿಗೆ ಒರೆಯಲು ಅವನು ಕೋಪದಿಂದ, ಇದಕ್ಕೆ ಕಾರಣನಾದವನು ಜಿಂಕೆಯೇ ಆಗಲಿ ಎಂದು ಶಾಪ ಕೊಡುವನು. ಪ್ರಭಂಜನನು ಋಷಿ ಪಾದಕ್ಕೆರಗಲು, ಅವನು ಎಡೆತೊರೆಗೆ ಬಂದು ಪುಷ್ಕರಣೀ ಸ್ನಾನದಿಂದ ಶಾಪವಿಮೋಚನೆ ಹೊಂದುವನು. ಅವನ ಸ್ನಾನ ಮಾಡಿದ ತೀರ್ಥವೇ ಮುಂದೆ ವಾಯುತೀರ್ಥವೆಂದು ಪ್ರಸಿದ್ಧವಾಯಿತು.

4. ಮತ್ಸ್ಯ ಮಾಧವ

ವೈಕುಂಠದಲ್ಲಿ ಹರಿ – ಸಿರಿಯರು ಇರುತ್ತಿರಲೊಂದು ದಿನ, ನಾರದರು ಬರುತ್ತಾರೆ. ಅವರು ಎಡತೊರೆಯ ಮಹಿಮೆಯನ್ನು ಅಲ್ಲಿ ಬಣ್ಣಿಸುತ್ತಾರೆ. ಲಕ್ಷ್ಮಿಯ ಇಚ್ಛೆಯಂತೆ, ಹರಿಯು ಸುದರ್ಶನನೊಡನೆ ಅತ್ತ ನಡೆಯುತ್ತಾನೆ. ಇತ್ತ ಮಹಿಷಪುರದಲ್ಲಿ ಮಹಿಷಾಸುರನ ಸಂಬಂಧಿ ಕರ್ಕಟಾಸುರ ಎನ್ನುವ ದಾನವನೊಬ್ಬನು ತನ್ನ ತಂಗಿ ಮತ್ಸ್ಯಮುಖಿಯೊಂದಿಗೆ ಇರುತ್ತಾನೆ. ಬೇಡರ ದೂರಿನಂತೆ, ಬೇಟೆಯಾಡಲು ಕಾಡಿಗೆ ತೆರಳುತ್ತಾನೆ – ತಂಗಿಯೊಂದಿಗೆ. ಅತ್ತ ಲಕ್ಷ್ಮೀನಾರಾಯಣರು ಎಡತೊರೆಗೆ ಬಂದು, ಲಕ್ಷ್ಮಿಗೆ ಅಲ್ಲಿಯ ವಿವಿಧ ಪುಷ್ಕರಿಣೀ, ತೀರ್ಥಗಳನ್ನು ಹರಿಯು ಪರಿಚಯಿಸುತ್ತಾನೆ. ಕಡೆಗೆ ಸುದರ್ಶನನನ್ನು ಕಾವೇರಿ ದಡದಲ್ಲಿ ಕಾವಲಿಗಿಟ್ಟು , ಹರಿ-ಸಿರಿಯರು ಮತ್ಸ್ಯರೂಪದಲ್ಲಿ ನದಿಯಲ್ಲಿ ವಿಹರಿಸುತ್ತಿರುತ್ತಾರೆ. ವನಸಂಚಾರ ಮಾಡುತ್ತಾ ಆ ನದಿ ದಡಕ್ಕೆ ಮತ್ಸ್ಯಮುಖಿಯು ಬಂದು, ಸುದರ್ಶನನನ್ನು ಕಾಣುತ್ತಾಳೆ. ಅವನಿಗೆ ಮನಸೋತು ತನ್ನನ್ನು ಮದುವೆಯಾಗೆನುತ್ತಾಳೆ. ಒಪ್ಪದ ಸುದರ್ಶನ ಅವಳ ಕರಗಳೆರಡನ್ನೂ ತುಂಡರಿಸುತ್ತಾನೆ. ಬೊಬ್ಬಿಡುತ್ತಾ ಬಂದು ಅವಳು ಅಣ್ಣ ಕರ್ಕಟನಲ್ಲಿ ದೂರಿಡುತ್ತಾಳೆ. ಕ್ರೋಧಗೊಂಡ ಕರ್ಕಟನು ಕಾವೇರಿ ತೀರಕ್ಕೆ ಬಂದು, ಸುದರ್ಶನನನ್ನು ಸೋಲಿಸುತ್ತಾನೆ. ನದಿಯಲ್ಲಿರುವ ಮತ್ಸ್ಯರೂಪೀ ಹರಿ-ಸಿರಿಯರನ್ನು ಹಿಡಿಯಲು ಮುನ್ನುಗ್ಗುವನು. ಧುರದಲ್ಲಿ ಹರಿಯ ಕೈಯಲ್ಲಿ ಸೋತ, ಕರ್ಕಟಾಸುರನು ಶರಣು ಬಂದು ತಾನು ನದೀ ಮಧ್ಯದಲ್ಲಿ ಶಿಲೆಯಾಗಿ ಇರುವೆನೆಂದು ಕೇಳಿಕೊಳ್ಳುವನು.

ಮುಂದೆ ಆ ಸ್ಥಳವು ಲಕ್ಷ್ಮೀ. ತೀರ್ಥ ಮತ್ಸ್ಯತೀರ್ಥವಾಗುವದು. ಹರಿಯು ಕಲಿಮಾಧವ, ಮತ್ಸ್ಯಮಾಧವನೆಂಬ ಅಭಿದಾನವನ್ನು ಹೊಂದುವನು.

5. ಶಾಪ / ಪುನರ್ಜನ್ಮ

ವಸುಂಧರ ಎನ್ನುವ ಬ್ರಾಹ್ಮಣನೊಬ್ಬನು ಕ್ರೋಷ್ಟುವೆನ್ನುವ ಸತಿಯೊಡನೆ ಇರುತ್ತಾನೆ. ಅವರಿಗೆ ಮಕ್ಕಳಿಲ್ಲದಿರಲು ಕ್ರೋಷ್ಟುವು ತನ್ನ ಮೈದುನನ ಮೊದಲನೆ ಮಗಳನ್ನು ದತ್ತು ತೆಗೆದುಕೊಂಡು ಸಾಕುತ್ತಿರುತ್ತಾರೆ. ಹೆತ್ತ ತಾಯಿಯು ಬಂದು, ಪುನಃ ತನ್ನ ಮಗಳನ್ನು ಕೇಳಲು, ಕ್ರೋಷ್ಟುವು ಕೊಡಲೊಪ್ಪುವುದಿಲ್ಲ. ಕೋಪಗೊಂಡ ತಾಯಿಯು (ಮೈದುನನ ಹೆಂಡತಿ) "ನಿನಗೆ ಮುಂದಿನ ಜನ್ಮದಲ್ಲೂ ಮಕ್ಕಳಾಗದಿರಲಿ" ಎಂದು ಶಪಿಸಿ ತನ್ನ ಮಗಳನ್ನು ತನ್ನೊಂದಿಗೆ ಕರೆದೊಯ್ಯುತ್ತಾಳೆ. ಮಕ್ಕಳಿಲ್ಲದ ಕೊರಗಿನಿಂದ ಕ್ರೋಷ್ಟು ಸಾಯುತ್ತಾಳೆ. ವಸುಂಧರನು ಅವಳಿಗೆ ಉತ್ತರ ಕ್ರಿಯಾದಿಗಳನ್ನು ಮಾಡುತ್ತಾನೆ.

ಮುಂದೆ ಕೀರ್ತಿಪಥವೆಂಬ ಗ್ರಾಮದಲ್ಲಿ ವಸುಂಧರನು ಕುಶಕರನೆಂಬ ಸ್ಮಾರ್ತ ಬ್ರಾಹ್ಮಣನಾಗಿಯೂ, ಕ್ರೋಷ್ಟುವು ಪ್ರಸಂಜ್ಞೆಯೆಂಬ ಅವನ ಪತ್ನಿಯಾಗಿಯೂ ಜನಿಸಿರುತ್ತಾರೆ. ತಮಗೆ ಮಕ್ಕಳಿಲ್ಲದಿರಲು, ಒಂದು ದಿನ ಅಲ್ಲಿಗೆ ಅಗಸ್ತ್ಯರು ಬಿಜಯ ಮಾಡುತ್ತಾರೆ. ಅವರಲ್ಲಿ ಬ್ರಾಹ್ಮಣ ದಂಪತಿಗಳು ಪ್ರಾರ್ಥಿಸಲಾಗಿ ಅಗಸ್ತ್ಯರು ಅವರ ಹಿಂದಿನ ಜನ್ಮವೃತ್ತಾಂತವನ್ನು ಅರುಹಿ, ಎಡತೊರೆಗೆ ಹೋಗಿ ಅರ್ಕೇಶ್ವರನನ್ನು ಅರ್ಚಿಸಲು ಬೋಧಿಸುತ್ತಾರೆ. ಅಂತೆಯೇ ಕುಶಕರ ಪ್ರಸಂಜ್ಞೆಯರು ಎಡತೊರೆಗೆ ಬಂದು, ದಿನಕರ ವ್ರತವನ್ನಾಚರಿಸಿ, ಮಕ್ಕಳನ್ನು ಪಡೆದು ಸದ್ಗತಿ ಹೊಂದುತ್ತಾರೆ.

6. ಪ್ರಾಯಶ್ಚಿತ್ತ

ಮಲಯದೇಶದಲ್ಲಿ ಮಲಯನೆಂಬ ಹೀನ ಬ್ರಾಹ್ಮಣನೋರ್ವನು ದುಷ್ಟನಾಗಿ, ಮದುವೆಯಾದ ತನ್ನ ಪತ್ನಿಯನ್ನೇ ಮನೆಯಿಂದೋಡಿಸುತ್ತಾನೆ. ಇನ್ನೊಬ್ಬನ ಹೆಂಡತಿಯನ್ನು ತನ್ನವಳನ್ನಾಗಿಸಿಕೊಂಡಾಗ, ಊರವರ ನಿಂದೆಗೆ ಒಳಗಾಗುತ್ತಾನೆ. ಅದಕ್ಕಾಗಿ ಊರು ಬಿಟ್ಟ ಮಲಯನು ಆ ಸತಿಯೊಂದಿಗೆ ರಾತ್ರಿ ಕಾಡಲ್ಲಿ ಬರುತ್ತಾನೆ. ಎದುರಾದ ಚೋರರು ಮಲಯನನ್ನು ಬಂಧಿಸಿ, ಆ ಸ್ತ್ರೀಯನ್ನು ತಮ್ಮೊಡನೆ ಒಯ್ಯುವರು. ಬಂಧಿತನಾದ ಮಲಯನನ್ನು ಮರದಲ್ಲಿದ್ದ ಪಿಶಾಚಿಗಳು ಸುತ್ತುವರಿದು ಅವನ ಬಟ್ಟೆಯನ್ನೆಲ್ಲಾ ಹರಿದು, ದಿಗಂಬರನನ್ನಾಗಿ ಮಾಡುವರು. ಹುಚ್ಚುಹಿಡಿದಂತಾದ

ಮಲಯನ್ನು ಅಂಡಲೆಯುತ್ತಾ ಪುಷ್ಕರಿಣೀ ಕ್ಷೇತ್ರಕ್ಕೆ ಬರುವನು. ಅಲ್ಲಿದ್ದ ಪೈಲ ಮುನಿಗೆರಗುವನು. ಅವನ ಉಪದೇಶದಂತೆ ಅಲ್ಲಿ ನೆಲೆನಿಂತು ಸೂರ್ಯೋಪಾಸನೆಯನ್ನು ಮಾಡಲಾಗಿ, ತನ್ನ ಪಾಪವನ್ನೆಲ್ಲ ಕಳೆದುಕೊಂಡು ಸಕಲ ಭಾಗ್ಯಗಳನ್ನು ಮರಳಿ ಪಡೆಯುತ್ತಾನೆ.

7. ಮೋಕ್ಷ ಪ್ರಾಪ್ತಿ

ಹಿಂದೆ ವಂಗ ದೇಶದಲ್ಲಿ ವಿಶೋಕನೆಂಬ ಗೃಹಸ್ಥನೋರ್ವನಿದ್ದನು. ಅವನ ಸತಿ ಸುಮತಿ. ಅವರಿಗೆ ಒಬ್ಬ ಮಗನೂ, ಒಂಭತ್ತು ಮಂದಿ ಪುತ್ರಿಯರೂ ಜನಿಸಿದರು. ಇವರ ಜೀವನ ಕಷ್ಟದಲ್ಲಿ ಸಾಗುತ್ತಿರಲು ಪ್ರಾಯಕ್ಕೆ ಬಂದ ಮಗಳಂದಿರ ಮದುವೆ ಮಾಡಿಸಲೂ ಅವರಿಂದಾಗಲಿಲ್ಲ. ಆ ಸಮಯಕ್ಕೆ ಸರಿಯಾಗಿ ಭುವನೇಶನೆಂಬ ಲಂಪಟನೋರ್ವ್ವನು ಬಂದು ವಿಭವನ ಮಿತ್ರನಾಗುತ್ತಾನೆ. ಅವನ ದುರ್ಬೋಧನೆಯಿಂದಾಗಿ ಹಣದ ಆಮಿಷಕ್ಕೊಳಪಟ್ಟು ತನ್ನ ಮಗಳಂದಿರನ್ನು ಮಾರುತ್ತಾನೆ. ಮಗಳಂದಿರನ್ನು ಮಾರಿ, ಕೈತುಂಬಾ ಹಣತಂದ ಗಂಡನನ್ನು ನೋಡಿ, ಸುಮತಿಯು ಜಗಳವಾಡಿ, ನಿನ್ನನ್ನು ತೊರೆದು ಹೋಗುವೆನೆನ್ನುತ್ತಾಳೆ. ಅಂತೆಯೇ ಮನೆ ಬಿಟ್ಟು ಬಂದ ಅವಳನ್ನು ವಿಶೋಕನು ಬೆನ್ನಟ್ಟಿ ಗೃಹಬಂಧನದಲ್ಲಿಡುತ್ತಾನೆ. ವರದಕ್ಷಿಣೆಗೆ ಬಲಿಬಿದ್ದು ಮಗನಿಗೆ ಕುರೂಪಿ ಹುಡುಗಿಯೊಬ್ಬಳನ್ನು ಮದುವೆ ಮಾಡಿಸುತ್ತಾನೆ.ಅನಂತರ ತನ್ನ ಹೆಂಡತಿಗೆ ಹಿಂಸೆಕೊಟ್ಟು ಕೊಲ್ಲಿಸಿ ವೇಶ್ಯಾಸಂಗದಲ್ಲಿರುತ್ತಾನೆ.

ವಿಶೋಕನ ದುರ್ವರ್ತನೆಗಳನ್ನು ಸಹಿಸದ ಅವನ ಗತಿಸಿದ ಹಿರಿಯಚೇತನಗಳು ಕೊಲೆ ರೂಪದಲ್ಲಿ ಅವನ ಮನೆಗೆ ಬಂದು ಪೀಡೆಕೊಡುತ್ತಾರೆ. ಭುವನೇಶನ ಸಲಹೆಯಂತೆ ಕ್ರೂರಿಯಾದ ಗಜಾಸ್ಯನೆಂಬ ಮಂತ್ರವಾದಿಯ ಮರೆಹೊಗುತ್ತಾನೆ. ಆದರೂ ಅವನ ಮಂತ್ರವಾದಕ್ಕೆ ಮಣಿಯದ ಭೂತಗಳು, ವಿಶೋಕನನ್ನು ಮತ್ತೂ ಪೀಡಿಸುತ್ತವೆ. ಪಿತೃಗಳ ಕಾಟವನ್ನು ತಾಳಲಾರದೆ ತನ್ನ ಮನೆ ಬಿಟ್ಟು ಬೇರೆ ಹೋದರೂ, ಅವನಿಗೆ ಶಾಂತಿ ದೊರಕುವುದಿಲ್ಲ. ಕಡೆಗೆ ಬ್ರಾಹ್ಮಣರ ಸಲಹೆ ಕೇಳಲಾಗಿ, ತನ್ನ ಧನ-ಕನಕಗಳನ್ನೆಲ್ಲಾ ದಾನಮಾಡುತ್ತಾನೆ. ಹಾಗೂ ಅರ್ಕ ಪುಷ್ಕರಕ್ಷೇತ್ರದಲ್ಲಿ ನೆಲಸಿ, ಶಿವಾರಾಧನೆ ಮಾಡುತ್ತಾ ಸದ್ಗತಿ ಪಡೆಯುತ್ತಾನೆ.

8. ಮಾಯಕದ ನಾಗಸ್ವರ

ನಂದಿವರ್ಮನಿಗೆ 4 ಜನ ಮಕ್ಕಳು. ಶೂರವರ್ಮ, ವೀರವರ್ಮ, ಚಂದ್ರವರ್ಮ ಹಾಗೂ ಮದನವರ್ಮರೆಂಬ ಅಭಿದಾನದಲ್ಲಿ ಮೆರೆಯುತ್ತಿದ್ದರು. ಅದರಲ್ಲಿ ಕಡೆಯವನು ಸಾಧುವಿದ್ದು ಹೆಡ್ಡನೆನಿಸಿದ್ದನು. ನಂದಿವರ್ಮನು ಗತಿಸಲಾಗಿ, ತಮ್ಮ ಮದನನನ್ನು ಮನೆಯಿಂದ ಹೊರಗಟ್ಟುವರು. ಅವನು ದುಃಖದಿಂದ ಕಾಡಿನತ್ತ ನಡೆಯುವನು. ಆಯಾಸದಿಂದ ಮರದಡಿಯಲ್ಲಿ ನಿದ್ರಿಸಲು, ಮರದ ಮೇಲಿದ್ದ ಪಿಶಾಚಿಯೊಂದು, ತನ್ನ ಸಂಗ್ರಹದಲ್ಲಿದ್ದ ನಾಗಸ್ವರವನ್ನು ಮದನನ ಮೇಲೆಸೆಯಿತು. ಆಗವನು ಅದನ್ನು ನುಡಿಸಲು ಪಿಶಾಚಿಗಳು ಹೆದರಿ, ಅದನ್ನು ನುಡಿಸಬೇಡವೆಂದು ಅವನಲ್ಲಿ ಮೊರೆಯಿಡುತ್ತಾರೆ. ನಿನಗೆ ಬೇಕಾದ ಸಂಪತ್ತನ್ನು ತಂದುಕೊಡುವೆವೆಂದು ಭಾಷೆಯಿಡುತ್ತಾರೆ. ಪಿಶಾಚಿಯ ವೃತ್ತಾಂತವನ್ನು ಕೇಳಲು, ತಾನು ಹಿಂದೆ ದೇವಾಲಯ ಒಂದರಲ್ಲಿ ನಾಗಸ್ವರ ನುಡಿಸುತ್ತಿದ್ದು ಒಂದು ದಿನ ಸೇವೆ ಮಾಡದೆ ಮರುದಿನ ಹೋಗಲಾಗಿ, ಅಲ್ಲಿ ಕರ್ಕಶವಾಗಿ ಊದುತ್ತಿದ್ದ ನಾಗಸ್ವರವನ್ನು ಕೇಳಿ ಸತ್ತು, ಈ ತರಹದ ಪಿಶಾಚಿಯಾದೆ ಎಂದು ಹೇಳಿತು. ತಾವು ಮರೆಯಾಗಿರಿಸಿದ್ದ ಭವ್ಯವಾದ ಮನೆಯೊಂದನ್ನು ಮದನವರ್ಮನಿಗೆ ತೋರಿಸಿ, ಅವನನ್ನು ಅಲ್ಲಿ ಇರಗೊಳಿಸಿ, ಅವನಿಗೆ ಬೇಕುಬೇಕಾದ ಸೌಲಭ್ಯಗಳನ್ನು ಪಿಶಾಚಿಗಳು ಒದಗಿಸಿ ಕೊಡುತ್ತವೆ.

ಮದನನ ಸೋದರರಿಗೆ ಬುದ್ಧಿ ಕಲಿಸಲು ಪಿಶಾಚಿಗಳೆಲ್ಲಾ ಸೇರಿ ಉಪಾಯವೊಂದನ್ನು ಮಾಡುತ್ತಾರೆ. ಅದರಂತೆ, ಸೋದರರ ಮನೆಗೆ ಬಂದು ಎಲ್ಲಾ ವಿಧದ ಚೇಷ್ಟೆಗಳನ್ನು ಮಾಡಿ, ಅವರವರೊಳಗೆ ಭೇದ ಏರ್ಪಡಿಸುತ್ತಾರೆ. ಯಾವ ರೀತಿಯ ತಂತ್ರ-ಮಂತ್ರಗಳನ್ನು ಮಾಡಿದರೂ ಭೂತದಕಾಟ ನಿಲ್ಲುವುದಿಲ್ಲ. ಕಡಗೆ ಮನೆಗೆ ಬಂದ ಯತಿಯೊಬ್ಬನ ಮಾತಿನಂತೆ, ಅನ್ನ-ದಾನಾದಿಗಳನ್ನು ಏರ್ಪಡಿಸುತ್ತಾರೆ. ಹತ್ತಿರದಲ್ಲಿ ಷಣ್ಮುಖನ ಗುಡಿಯನ್ನು ನಿರ್ಮಿಸುತ್ತಾರೆ. ಅಲ್ಲಿಗೆ ಪಿಶಾಚಿ ಬಾಧೆಯು ನಿವೃತ್ತಿಯಾಗುತ್ತದೆ. ಸ್ವಪ್ನದಲ್ಲಿ ಕಂಡಂತೆ ತನ್ನ ಸಖರನ್ನು ಎಲ್ಲಾ ಕರೆದುಕೊಂಡು ಎಡತೊರೆಗೆ ಬರಲು ಯೋಚಿಸುತ್ತಾನೆ. ಅದಕ್ಕೆ ಮೊದಲು ಅಣ್ಣಂದಿರಿಗೆ ಬುದ್ಧಿ ಕಲಿಸಲೊಸುಗ ಒಂದು ಪತ್ರವನ್ನು ಬರೆದು ಕಳಿಸುತ್ತಾನೆ. ಕಡೆಗೆ ತಮ್ಮನ ಅಪೇಕ್ಷೆಯಂತೆ ಚಂದ್ರವರ್ಮನು ಹೆಂಡತಿ ಮಕ್ಕಳೊಡಗೂಡಿ, ಮದನನ ಮನೆಗೇ ಬಂದು ನೆಲಸುತ್ತಾನೆ. ಎಡತೊರೆಗೆ ಹೋಗಿ, ಅರ್ಕೇಶ್ವರನನ್ನು ಅರ್ಚಿಸಿದಾಗ, ಪಿಶಾಚಿಗಳಿಗೆಲ್ಲಾ ಮೋಕ್ಷ ದೊರಕುತ್ತದೆ.

9. ದುಷ್ಟರಾಜ

ಪಾಂಡ್ಯದರಾಜ ಸುಬಲ ಮಹಾರಾಜ ರಾಣಿ ಮೀನಾಕ್ಷಿ. ಹಲವು ವರ್ಷಗಳು ಕಳೆದರೂ, ಮಕ್ಕಳಾಗುವುದಿಲ್ಲ. ಕುಲಪುರೋಹಿತರ ಸಲಹೆಯಂತೆ ರಾಮೇಶ್ವರ ಕ್ಷೇತ್ರಕ್ಕೆ ಹೋಗಿ, ಚಕ್ರತೀರ್ಥದಲ್ಲಿ ಹರಿಯುಪಾಸನೆಯನ್ನು ಮಾಡುತ್ತಾನೆ. ಸ್ವಪ್ನದಂತೆ ಹರಿ-ಹರರ ಅನುಗ್ರಹದಿಂದ ಸುಬಲರಾಜನಿಗೆ ಹಿರಿಯ ಪತ್ನಿ ಮೀನಾಕ್ಷಿಗೆ ಧರ್ಮಮಿತ್ರ-ಧನಮಿತ್ರ ಹಾಗೂ ಗುಣಮಿತ್ರರೆಂದು ಮೂವರು ಪುತ್ರರುದಿಸುತ್ತಾರೆ. ಎರಡನೆಯ ಪತ್ನಿ ಅರುಣೆಗೆ ಕಲಿಮಿತ್ರನೆಂಬ ಒಬ್ಬ ಮಗ ಜನಿಸುತ್ತಾನೆ. ಅವರಿಗೆ ಸಕಲ ಶಾಸ್ತ್ರ-ಶಸ್ತ್ರಾದಿ ವಿದ್ಯೆಗಳನ್ನು ಕಲಿಸಿ ತನಗೆ ವೃದ್ಧಾಪ್ಯ ಬರಲು ವಾನಪ್ರಸ್ಥಕ್ಕೆ ತೆರಳಲು ನಿಶ್ಚಯಿಸುತ್ತಾನೆ. ಮಂತ್ರಿಯನ್ನು ಕರೆದು ಹಿರಿಪುತ್ರ ಧರ್ಮಮಿತ್ರನಿಗೆ ಪಟ್ಟ ಕಟ್ಟುತ್ತಾನೆ. ಪುರೋಹಿತರ ದೂರಿನಂತೆ ದುಷ್ಟನಾದ ಕಲಿಮಿತ್ರನಿಗೆ ಬುದ್ಧಿ ಹೇಳಿ ತಾನು ವಾನಪ್ರಸ್ಥಕ್ಕೆ ನಡೆಯುತ್ತಾನೆ.

ಧರ್ಮಿಷ್ಟನಾದ ಅಣ್ಣ ಧರ್ಮಮಿತ್ರನಿಂದ ಅಧಿಕಾರವನ್ನು ಕಸಿಯಲೋಸುಗ ರಾಜ್ಯದಲ್ಲಿ ಅಲ್ಲಲ್ಲಿ ಸುಲಿಗೆಯನ್ನು ಮಾಡಿ, ಸ್ತ್ರೀ ಮಾನಹಾನಿ, ಕಳವು ದುಷ್ಕಾರ್ಯಗಳನ್ನು ಮಾಡಿ ದಂಗೆಯೆಬ್ಬಿಸುತ್ತಾನೆ. ರಾಜನಲ್ಲಿಗೆ ದೂರು ಹೋದ ಕಾರಣ ತಮ್ಮ ಕಲಿಮಿತ್ರನನ್ನು ಕರೆದು ಬುದ್ಧಿ ಹೇಳುತ್ತಾನೆ. ಆದರೆ ಅವನು ಕಿವಿಗೊಡದೆ, ನೀನೇ ಪಟ್ಟಬಿಡು ಎನ್ನುತ್ತಾನೆ. ಮಧನಮಿತ್ರನಿಗೂ ಕಲಿಮಿತ್ರನ ಕಡೆಯವರಿಗೂ ಜಗಳವಾಗುವುದು. ಕಡೆಗೆ ಧರ್ಮಮಿತ್ರನು ಅಧಿಕಾರವನ್ನು ಬಿಟ್ಟುಕೊಟ್ಟು , ತನ್ನ ತಮ್ಮಂದಿರೊಂದಿಗೆ ರಾಜ್ಯಬಿಡುವನು. ತಕ್ಷಣ ಕಲಿಮಿತ್ರನು ರಾಜ್ಯದಧಿಕಾರ ಸ್ಥಾನದಲ್ಲೆಲ್ಲಾ ತನ್ನ ದುರ್ಮಿತ್ರರನ್ನು ನೇಮಿಸಿ, ದುರ್ನೀತಿಯಿಂದ ರಾಜ್ಯವಾಳುತ್ತಾನೆ. ಆಸ್ಥಾನದಲ್ಲಿ ನೃತ್ಯಗಾತಿಯರ ನೃತ್ಯ ಸದಾ ನಡೆಯುತ್ತಿತ್ತು. ಜನರು ಗೋಳಿಡಲು ಪ್ರಾರಂಭಿಸಿದರು. ಕಡೆಗೆ ಕಲಿಮಿತ್ರನಿಗೆ ಮಹೇಶ್ವರಿ ಎಂಬ ಜ್ವರ ಪ್ರಾರಂಭವಾಗುತ್ತದೆ. ಆಗ ತನ್ನ ಕುವರ ವಸುರಾಯನಿಗೆ ಪಟ್ಟ ಕಟ್ಟಿ ತಾನು ಶ್ರುತಧೀಯೆಂಬ ಬ್ರಾಹ್ಮಣನ ಸಲಹೆಯಂತೆ ತೀರ್ಥಾಟನೆಗೆ ಹೊರಡುವನು. ಸ್ವಪ್ನಾದೇಶದಂತೆ, ಕಡೆಗೆ ಎಡತೊರೆಗೆ ಬಂದು ತನ್ನ ಪಾಪದಿಂದ ನಿವೃತ್ತಿ ಹೊಂದಿ, ಸದ್ಗತಿ ಪಡೆಯುವನು.

ಯಕ್ಷಗಾನ

ಸೂರ್ಯೋದಯ

(ಎಡತೊರೆ ಶ್ರೀ ಅರ್ಕ ಪುಷ್ಕರಿಣೀ ಮಹಾತ್ಮೆ)

॥ ಶ್ರೀ ಮಹಾಗಣಪತಯೇ ನಮಃ॥ ॥ ಶ್ರೀ ಸರಸ್ವತಿದೇವ್ಯೈ ನಮಃ॥
॥ ಶ್ರೀ ಲಕ್ಷ್ಮಿದೇವ್ಯೈ ನಮಃ॥ ॥ ಶ್ರೀ ಸವಿತೃ ಸೂರ್ಯನಾರಾಯಣಾಯ ನಮಃ॥

ಕಂದ

ಶ್ರೀ ಗಜಮುಖನಂ ಪ್ರಾರ್ಥಿಸಿ ।
ವಾಗೀಶ್ವರಿ ಯಡಿಯ ಧ್ಯಾನಿಸುತ ಭಕ್ತಿಯೊಳಂ ॥
ಸಾಗರಸುತೆ ಶ್ರೀಪತಿ ಗಂ ।
ಗಾ ಗೌರೀವರಗೆ ನಮಿಸಿ ಕೃತಿಯನ್ನೊರೆವಂ ॥1॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಶ್ರೀ ಗಣಾಧೀಶ್ವರ ಚತುರ್ಭುಜ । ನಾಗವದನ ಶಶಾಂಕ ಮದಹರ । ಭೋಗಿ ಭೂಷಣ ಕುವರ ಜಯ ಜಯ । ಯೋಗಿ ವಿನುತ ॥1॥

ಮಧುಪುರಸ್ಥಿತ ವಿಘ್ನನಾಶಕ। ಪದದ್ವಯಾನತ ಶರಣ ಪೋಷಕ। ವಿದುಧರಪ್ರಿಯ ಕುವರ ಮೂಷಿಕಾ । ರೂಢಪಾಹಿ ॥2॥

ಗೌರಿನಂದನ ಮೋದಕಪ್ರಿಯ । ಶೌರಿವಂದಿತ, ಗುಹ ಸಹೋದರ । ಮಾರಸುಂದರರೂಪ ವಿಘ್ನವಿ । ದೂರ ಜಯತು ॥3॥

ಭಾಮಿನಿ

ತುಂಬುರಾದಿ ಸಮಸ್ತಮೌನಿಕ । ದಂಬಸನ್ನುತೆ ವಾಗಧೀಶ್ವರಿ । ನಂಬಿರುವೆತವ ಪಾದಪದ್ಮಗಳನ್ನು ಅನವರತ ॥ ಬೆಂಬಿಡದೆ ಸಲಹೆಂದು ಪ್ರಾರ್ಥಿಸಿ । ಅಂಬಿಕೆಯಧ್ಯಾನಿಸುತ ಸಾಗರ । ಸಂಭವೆಗೆ ತಲೆವಾಗಿ, ಹರಿಹರ ಗುಹಗೆರಗಿ ನುಡಿವೆ ॥1॥

ರಾಗ ಕಾಂಬೋದಿ ಝಂಪೆತಾಳ

ಭೂರಿ ವೈಭವದಿ ವೃ। ತ್ರಾರಿಯೊಂದಿನ ಅಮರ। ವಾರವನು ಕೂಡಿ ಸಂತಸದಿ॥ ಏರಿವಿಷ್ಟರವ ರಂಭಾದಿನಾರಿಯರ ಶೃಂಗಾರ ನರ್ತನವ ನೀಕ್ಷಿಸುತ ॥1॥

ನೂರು ಯಾಗವ ಗೈದು। ಮೂರು ಮೂರ್ತಿಗಳು ಕೃಪೆ। ದೋರಿ ಕರುಣಿಸಿದ ಈ ಭಾಗ್ಯ ॥ ಸೇರಿರಲು ಕಂಡು ಭೂ। ಭಾರಕರು ದುರುಳತನ। ದೋರಿ ಬಾಧಿ ಸಿದ ರೆಮ್ಮುವನು ॥2॥

ಕರುಣಾಳುಗಳ ದಯದಿ। ಹರಿಸಿ ದುಷ್ಪರಭೀತಿ। ಹರುಷದಿಂದಿರುವೆವ್ಯೆನಾವು॥ ಅರುಹಿರೈನಿಮ್ಮಮನ। ದಿರವೆನಲು ಉಸುರಿದನು। ವರುಣ ನಾಕ್ಷಣದಿ ಸುರವರಗೆ ॥3॥

ರಾಗ ಭೈರವಿ ಅಷ್ಟತಾಳ

ಅನಿಮಿಷರೊಡೆಯಕೇಳು । ಮುಂದಿಲ್ಲಿಗಾ । ದನುಜರ ಪಡೆಬರಲು ॥ ಕ್ಷಣದೊಳಗವರನು । ರಣದೊಳಗಿದಿರಿಸಿ । ಹನನ ಗೈವೆನು ನಿಶ್ಚಯ ॥1॥

ರಾಗ ಮಾರವಿ ಏಕತಾಳ

ತರಣಿಜನೆಂದನು। ಸುರವರಲಾಲಿಸು। ವರಬಲ ಮದದಿಂದ ॥ ದುರುಳರು ನಾಕಕ್ಕೆ । ತರಲು ಆ ಮೂರ್ಖರ । ತರಿದಟ್ಟುವೆನೆಂದ ॥1॥

ರಾಗ ಕಾಂಬೋಧಿ ಝಂಪೆತಾಳ

ವಾಯುವುಸುರಿದ ಧೈರ್ಯ । ಜೀಯನಿನಗೇಕೆ ಭಯ । ಹೇಯಮನದಸುರ ಸಂದೋಹ ॥ ಕಾಯಬಲದಿಂದೆಮ್ಮ। ನೋಯಿಸಲ್ಕೈತರಲು। ಸಾಯ ಬಡಿಯುವೆ ನಿಸ್ಸಂದೇಹ ॥1॥

ರಾಗ ಸವಾಯಿ ಏಕತಾಳ

ಅನಲನುಪೇಳಿದ। ಅನಿಮಿಷಾಧಿಪ ಆ। ದನುಜರು ಬರಲಿಲ್ಲಿ॥ ಕ್ಷಣದೊಳು ಸುಡುವೆನು ಅನುಮಾನವ ಬಿಡು। ಮನಧೈರ್ಯದೊಳಿಹುದು ॥1॥

ಭಾಮಿನಿ

ದೃಢದಿಮೆಚ್ಚಿದೆ ನಿಮ್ಮ ಸಹಸದ। ನುಡಿಗೆ ಸಂತಸವಾಯ್ತು, ನಾವಾ। ಜಡಜಮಿತ್ರನಕಂಡು ಬಹಮನ ವಾಯಿತದರಿಂದ॥ ಒಡನೆ ಪೋಪುದು ತಪನ ಲೋಕಕೆ। ನಡೆವುದೆನುತಲಿ ತನ್ನ ಕೆಲಸಂ। ಗಡಿಗರನ್ನೊಡಗೊಂಡು ಪೊರಟ ಸುರೇಂದ್ರ ನಿನನೆಡೆಗೆ ॥1॥

ರಾಗ ಕಾಂಬೋಧಿ ಝಂಪೆತಾಳ

ನೈಮಿಷಾರಣ್ಯದೊಳು। ಆ ಮುನೀಶ್ವರಸೂತ। ಪ್ರೇಮದಿಂ ತನ್ನ ಶಿಷ್ಯರಿಗೆ॥ ಭೂಮಿಯೊಳು ನಡೆದ ಹಲ। ಕಥೆಗಳನ್ನುಸುರುತಿರೆ। ಕೈಮುಗಿದುಕೇಳ್ದರ್ ಗುರುಗಳಿಗೆ ॥1॥

ಹಿಂದೆ ಭಾಗರ್ವ ತನ್ನ। ಒಂದಿಗಿಹ ವಿಬುಧರಿಗೆ। ಎಂದ ಪುಷ್ಕರಿಣಿ ಚರಿತೆಯನು॥ ಚಂದದಿಂನೀವೆಮಗೆ। ಇಂದು ಪೇಳುವದೆನುತ। ವಂದಿಸಲು ವಿಡಿದೆತ್ತಿ ನುಡಿದ॥2॥

1. ಸೂರ್ಯೋದಯ (ಎಡತೊರೆ ಕ್ಷೇತ್ರ ನಿರ್ಮಾಣ)

ರಾಗ ಸೌರಾಷ್ಟ್ರ ತ್ರಿವುಡೆತಾಳ

ಮುನಿಜನರು ಮನವಿಟ್ಟುಲಾಲಿಸಿ। ವನಜಸಖತಾ ನೊಂದುದಿನ ನಿಜ। ವನಿತೆ ಸಂಜ್ಞಾದೇವಿ ಸಹಿತಲಿ। ಘನಹರುಷದಿ ॥1॥

ಜಡಜಸಖ ಸಂತೋಷದಿಂದಲಿ। ನುಡಿದ, ವೈವಸ್ವತ ಮನುವು, ಯಮ। ನೊಡನೆಯಮುನೆಯ ಸಹಿತ ಮೂವರ। ಪಡೆದೆ ಸುತರ ॥2॥

ಮೂರು ಮೂರ್ತಿಗಳೊಲುಮೆಯಿಂದಲಿ। ಭೂರಿಸಂತಸವಾಯ್ತೆನಲು ಮದ। ವಾರಣದ ನಡೆಯಿಂದ ಬಂದಳು। ಸಾರಸಾಕ್ಷಿ ॥3॥

ರಾಗ ಏಕತಾಳ

ಬಡನಡುವಿನ ಮನ। ಮಿಡುಕುವ ಲಾಸ್ಯದ। ಕಡುಚೆಲುವಿನ ಜವ್ವನೆ ಯಮುನೆ। ಕೊಡಕುಚ ಭಾರದಿ । ನಡೆತಂದಳು ಪಿತ । ನೆಡೆಗೆ ಜಲಜಮುಖಿ, ಸ್ಮಿತವದನೆ ॥1॥

ಚರಣಕೆ ಮಣಿದಳ । ಸರಸಿಜಗಂಧಿಯ । ಕರದಿಂ ಪಿಡಿದೆತ್ತುತಲಂದು ॥ ಸ್ಮರಶರಕಾದಿನ ಕರನಳುಕಿದನಿಜ । ತರಳೆಯ ಸೌಂದರ್ಯವಕಂಡು ॥2॥

ರಾಗ ಶಂಕರಾಭರಣ ತ್ರಿವುಡೆತಾಳ

ಬಾರೆಮಂದಸ್ಮಿತೆ ಮನೋಹಿತೆ । ಚಾರು ಚಂಚಲ ಲೋಚನೆ ॥ ಬಾರೆ ಬಾ ಬಳಿಯಲ್ಲೆ ಕುಳ್ಳಿರು । ಬಾರೆಯೇತಕೆ ಯೋಚನೆ । ಸಾರಸಾಕ್ಷಿ ॥1॥

ನಿನ್ನ ಮೊಗದಾವರೆಯನೋಡಲು । ಎನ್ನ ಮನಕಾತರಿಪುದು ॥ ನಿನ್ನೊಡನೆ ಮಾತಾಡಲೋಸುಗ । ಎನ್ನನಾಲಗೆ ಬಯಸ್ಸುದು । ಚೆನ್ನೆ ಕೇಳು ॥ 2॥

ಎಂದು ಮಗಳನು ಮುದ್ದಿಪುದ ತಾ। ಕಂಡು ಸಂಜ್ಞಾದೇವಿಯು॥ ಮಂದಮತಿಗಳ ತೆರದಿ ವರ್ತಿಪಿ । ರಿಂದಿದೇತಕೆಯೆಂದಳು । ಅಂದು ಪತಿಗೆ ॥3॥

ಮಾತೆಯೆಂದುದ ಕೇಳಿ ಮುಗುದೆಯು । ಆ ತತೂಕ್ಷಣವೆದ್ದಳು ॥ ಯಾತಕೀಪರಿಗೈವನಯ್ಯನು । ತಾ ತಿಳಿಯೆ ನೆಂದೊರೆದಳು । ಆ ತರಳೆಯು ॥4॥

ವಾರ್ಧಕ

ಸುತೆಯಕಾಡುವ ಮನೋವೈಕಲ್ಯ ವರ್ತನೆಯ । ಸತಿ ಕಂಡು ಮುನಿಸಾಂತು ಮಗಳನ್ನು ಬಳಿಕರೆದು । ಜತೆಗೂಡಿ ನಿಳಯಕ್ಕೈದಲು ಕಾಮನುಪಟಳಕ್ಕಂಜಿ ತಪಿಸುತ ತಪನನು ॥ ಮತಿವಿಕಳನಂತೆ ರಾತ್ರಿಯೊಳು ಯಮುನೆಯ ಸಂಗ । ಕತಿ ಚಪಲದಿಂದಾಳಿಸುತ ತೆರಳಲಲ್ಲಿ ಸಂಗತಿಯರಿತು ಸಂಜ್ಞೆಯೈತಂದು ಕಾಂತನಜರೆದು ಭೇಡಿಸುತಲಿಂತೆಂದಳು ॥1॥

ರಾಗ ಏಕತಾಳ

ನಲ್ಲಯಾತ । ಕಿಲ್ಲಿಬಂದು । ದೆಲ್ಲ ಪೇಳಿರಿ ॥
ಕಳ್ಳಕಾರ್ಯ । ವೆಲ್ಲಿ ಕಲಿತಿ । ರೆಲ್ಲ ತಿಳಿಸಿರಿ ॥1॥
ಮಧ್ಯರಾತ್ರಿ । ಯೆದ್ದುಬಂದ । ದೊಡ್ಡ ಕೆಲಸವೇ ॥
ಸದ್ದುಮಾಡ । ದಿದ್ದರರಿತೆ । ವೆಂದು ಕೋಪವೇ ॥2॥

ರಾಗ ಕೇದಾರಗೌಳ ಝಂಪೆತಾಳ

ತರುಣಿ ನೀ ಬಂದುದೇಕೆ । ಎನ್ನನೀ । ಪರಿ ವಿಚಾರಿಸಲೇತಕೆ ॥ ತರಳೆಯ ಮುನೆಯೊಳೊಂದನು । ಅರುಹಲೆಂ । ದಿರುಳಿನಲಿ ನಡೆತಂದೆನು ॥1॥

ಏನಂಥ ಗಹನ ವಿಷಯ । ಪೇಳಿರ್ದೈ । ನಾನೊರೆವೆನದನು ಜೀಯ ॥ ಈ ನಿಶಿಯೊಳಲ್ಲಿಯಾರೂ । ಪೋಗಲ್ಕೆ । ನಾನು ಬಿಡಲಾರೆ ಧಿಟವು ॥2॥

ಸತಿಯೊಳದ ನರುಹಲಾರೆ। ಅದನೆನ್ನ। ಸುತೆಗೊರೆದು ಬರುವೆ ನೀರೇ॥ ಅತಿರೇಕ ನುಡಿಯುಬೇಡ । ನಾನಿನ್ನ । ಪತಿ ದಿವೌಪತಿಯು ನೋಡ ॥3॥

ವಾರ್ಧಕ

ಯಾರಾದರೇನು ಮಗಳಂತಃಪುರಕ್ಕಿರುಳು । ಸಾರುವುದು ಥರವಲ್ಲ ಪಿಂದಕ್ಕೈದುವುದು, ಬಿಡ । ಲಾರೆನೆನ್ನುತ ಲರಸಿ ತಡೆಯಲಾಕೆಯ ಪಿಡಿದುನೂಕಲಾಕ್ಷಣಬಿದ್ದಳು॥ ಸೇರಿದರುಬಂದೆಲ್ಲರಿಂದ್ರಾದಿಗಳು ಸಹಿತ। ಕಾರಣವ ನರಿತೊಡನೆ ಮೂದಲಿಸುತಾಗಲಾ । ಸೂರ್ಯನನ್ನಪಹಾಸ್ಯಗೈದೋರ್ವರೊಂದೊಂದು ವಿಧದಿಂದ ನುಡಿದರಾಗ ॥1॥

ರಾಗ ಏಕತಾಳ

ಎಂಥಹೀನಕಾರ್ಯಕೆಳಸಿ । ದಂಥದಿನಕರ ॥

ಇಂತು ಸುತೆಯ । ಅಂತಃಪುರಕೆ । ಬಂತೆಮನ ಹರ ॥1॥

ಜಗದಚಕ್ಷು। ಸಕಲ ಜನರ। ಬಗೆಯ ತಿದ್ದುವ॥ ಮೃಗಗಳಂತೆ। ಸೊಗವಕಾಣೆ। ಮಗಳ ಬಯಸುವ ॥2॥

ಏನುಕಾರ್ಯ। ವೇನು ಶೌರ್ಯ। ಮಾನವಂತನು॥ ಹೀನಮನದ। ಭಾನುನಿನ್ನ। ನಾನು ನೋಡೆನು ॥3॥

ಕಂದ

ಎಂದುರೆ ಸಕಲರುದಿನಪನ। ನಿಂದಿಸುತಲಿ ನುಡಿಯೆ ನಾಚಿ ಪಿಂದಿರುಗುತ್ತಂ॥ ಮಂದಿರದಲಿ ಚಿಂತಿಸುತಂ । ದಂದುಗಕೊಳಗಾಗಿ ತನ್ನೊಳ್ತಾನೇ ಪೇಳ್ದಂ ॥1॥

ರಾಗ ಸಾಂಗತ್ಯ ರೂಪಕತಾಳ

ಪ್ರೇಮದಾಪುತ್ರಿಯ । ಕಾಮೇಚ್ಛೆಯಿಂಕಂಡು ।
ನಾ ಮರುಳಾದೆನೆ ಆಕಟ ॥ ಈ ಮಹಾಪಾಪಕ್ಕೆ ।
ನಾಮಾಡಲೇನಿನ್ನು । ಕಾಮಹರನೆ ದಾರಿದೋರೋ ॥1॥
ಅನ್ಯರ್ಗೆ ಬೋಧಿಪ । ಎನ್ನಂಥವನೆ ಇಂಥ । ಅನ್ಯಾಯಕಾರ್ಯಕೆ ಬಯಸಿ ॥
ದುರ್ನೀತಿಯುತನೆಂದು। ಎನ್ನುವಸ್ಥಿತಿಯಾಯ್ತು। ಮುನ್ನೇನ ಮಾಳ್ಪುದೈ ಶಿವನೆ॥2॥
ತಪನಲೋಕವ ಬಿಟ್ಟು। ಗುಪಿತದಿಂದಲಿ ಪರಂ। ತಪೆಯ ಸೇರುವೆನೆಂದು ದಿನಪ।
ಕಪಿಲಧ್ವಜನ ಪಾದ । ವಿಪುಲ ಭಕ್ತಿಯೊಳಂದು । ಜಪಿಸುತ್ತ ನಡೆತಂದನಾಗ॥3॥

ವಾರ್ಧಕ

ಪೊಡವಿಗೈತಂದು ಸುಸ್ಥಳವನಾಯ್ದಾಭಾನು । ಎಡತೊರೆಯೊಳ್ ದಿವ್ಯ ಪುಷ್ಕರಿಣಿಯಂ ನಿರ್ಮಿಸುತ । ಮೃಡನಲಿಂಗವ ಪ್ರತಿಷ್ಠಾಪಿಸುತ ಸದ್ಭಕ್ತಿಯಿಂದರ್ಚಿಸುತಲಿರ್ದನು ॥ ಜಡಜಸಖ ತಾಗೈದ ಪಾಪ ಪರಿಹಾರಕ್ಕೆ। ತೊಡಗಿದಂ ಅಶ್ವಮೇಧವ ನಿಂತುಯಾಗಗಳ। ನಡೆಸಿದಂ, ಸಕಲ ಸಂಪದವ ನಿಜ ಲೋಕಮಂ ಮರೆದು ಶಿವಧ್ಯಾನದಿಂದ ॥1॥

ರಾಗ ಕೇದಾರಗೌಳ ಅಷ್ಟತಾಳ

ತಪನಲೋಕದೊಳಿತ್ತ । ತಪನನ ಕಾಣದೆ । ಹಪಹಪಿಸುತಲೆಲ್ಲರು ॥ ಅಪಚಾರವಾಯ್ತೆಂದು ತಪಿಸುತಲಿರಲು, ಮು । ನಿಪನಾರದಾಂಕ ಬಂದ ॥1॥

ಯತಿವರನೊಡನೆ ಸಂಗತಿಯೆಲ್ಲವನು ಪೇಳ್ದು । ಸತಿಸಂಜ್ಞಾದೇವಿಯಂದು ॥ ಗತಿಯದೋರೈಮುನಿ । ಪತಿಯೆಂದುವಂದಿಸೆ । ಹಿತದಿಂದಲಿಂತೆಂದನು ॥2॥

ರಾಗ ಬೇಗಡೆ ಅಷ್ಟತಾಳ

ಕೇಳು ಸಂಜ್ಞಾದೇವಿ ಸಂಗತಿಯ। ನಿನ್ನರಸನ್ಯಾರೊಳು। ಪೇಳದೇ ಪೊರಟೈದಿರುವ ಕಥೆಯ ॥ ಬಾಲೆ ವಿಷಯದಿ। ಭಾಳ ನಾಚುತ। ತಾಳಿದುಗುಡವ। ತಾಳಲಾರದೆ । ಭೂಲಲನೆಯೆಡೆಗೈದಿ ಯೆಡತೊರೆ। ಯಾಲಯವ ತಾ ಗೈದನಲ್ಲಿಯೆ ॥1॥

ಹರನಲಿಂಗವ ಸ್ಥಾಪಿಸಿಹನಲ್ಲಿ। ಸನಿಹದಲಿಮತ್ತಾ। ಸರಸಿಯನು ನಿರ್ಮಿಸಿಹ ಭಕ್ತಿಯಲಿ॥ ವಿರಚಿಸುತಹಲ। ತುರಗಮೇಧವ। ಪುರಹರನ ಪೂಜಿಸುತ ಸಕಲವ। ಮರೆದು ತನಗಡ ಸಿರುವ ಪಾಪವ। ಪರಿಹರಿಸ ಬೇಕೆಂಬ ಮನದಲಿ ॥2॥

ಹಲವು ಮಾತೇಕಿನ್ನು ನಾವೆಲ್ಲ। ಆಕ್ಷೇತ್ರಕೈದುತ। ಜಲಜಮಿತ್ರನು ಇರುವತಾವೆಲ್ಲ॥ ತಿಳಿದು ಮೃತ್ಯುಂಜಯನ ದರುಶನ। ಫಲವ ಪಡೆಯುತ ಶಿವನನುಗ್ರಹ। ದೊಲುಮೆಯಾದೇಶದೊಲು ನಡೆವುದು। ಫಳಿಲನೇ ಮರ್ತ್ಯವನು ಸೇರ್ವುದು ॥3॥

ಭಾಮಿನಿ

ನಾರದನ ನುಡಿಯಂತೆ ಇನಪರಿ। ವಾರಪೊರಟುದು ಭೂತಳಕ್ಕಾ। ನಾರಿ ಸಂಜ್ಞಾದೇವಿ ಸಹಿತಲಿ ಭಾನುದರುಶನಕೆ॥ ಸಾರುತಾಕ್ಷೇತ್ರದೊಳು ಕಂಡರು। ಭೂರಿ ಭಕ್ತಿಯೊಳಂದು ದಿನಪನು। ಮಾರವೈರಿಯ ನರ್ಚಿಸುವ ಸಂಭ್ರಮವ ಕೌತುಕದಿ॥1॥

ರಾಗ ಸುರುಟಿ ಏಕತಾಳ

ಸೂರ್ಯನು ಪೂಜಿಸಿದ। ಲಿಂಗಾ। ಕಾರನಪುಣ್ಯಪದ ॥ಭೂರಿಭಕುತಿಯೊಳು। ಆರತಿ ಬೆಳಗುತ। ಗೌರೀವರನ ಅ। ಪಾರಮಹಿಮನನು ॥1॥

ಶಂಕರ ಫಣಿಹಾರ। ಶರಣರಾ। ತಂಕದುರಿತದೂರ ॥ ಸಂಕಟ ಹರ ಹರ। ಪಂಕಜಭವನುತ ಸಂಕರುಷಣಹಿತ। ಕಿಂಕರೋದ್ಧಾರಕ ॥2॥

ಮೂರು ಮೂರ್ತಿಗಳಲ್ಲಿ। ಒಬ್ಬನೀ। ತೋರು ದರ್ಶನವಿಲ್ಲಿ॥ ಘೋರ ದುರಿತಪರಿ। ಹಾರ ಗೈಯುತಲು। ದ್ವಾರ ವೆಸಗು ಗಣ। ವಾರ ಸನ್ನುತ ಹರ ॥3॥

ಕಂದ

ಮಾಡಿದ ಪಾಪವನೆಲ್ಲ ಹೋ। ಗಾಡಿಸುತತಿ ಕರುಣೆಯಿಂದ ಪಾಲಿಪುದೆನುತಂ॥ ಜೋಡಿಸಿಕರಗಳನುರೆ ಕೊಂ। ಡಾಡಿದ ನತಿಭಕ್ತಿಯಿಂದ ದಿನಪಂ ಶಿವನಂ ॥1॥

ವಾರ್ಧಕ

ಜಯತು ಪನ್ನಗಭೂಷ, ಜಯಪಾಪ ಭಯ ನಾಶ। ಜಯ ಜಯ ಪಿನಾಕಿ ಪೀತದುಕೂಲಧರಮಿತ್ರ। ಜಯತು ಪುರಮಥನ ಜಯ ಪೂಗೋಲದಹನ ಜಯ

ಪೃಥ್ವಿಸುರವಂದ್ಯಚರಣ ॥ ಜಯತು ವಿಷಪೇಯ ಜಯ ಪೈಶಾಚಗಣಲೋಲ । ಜಯತಪೋಧನವಿನುತ ಪೌಲಸ್ತ್ಯಸುತ ನಮಿತ। ಜಯತು ಪಂಪಾಪತಿಯೆ ಪರಮೇಶ ಮೈದೋರು ಜಯವೆಂದು ಪ್ರಾರ್ಥಿಸಲ್ಕೆ ॥1॥

ರಾಗ ಸಾಂಗತ್ಯ ರೂಪಕತಾಳ

ಪರಮಭಕ್ತಿಯೊಳಿಂತು। ತರಣಿಪ್ರಾರ್ಥನೆಗೈದು। ಕರಜೋಡಿಸುತಲಿನಿಂದಿರಲು। ಪರಮೇಶ್ವರನು ಸಿರಿ । ಯರಸನ ಜತೆಗೂಡಿ । ಕರುಣದಿಮೈದೋರಲಾಗ ॥1॥

ಇನನೆ ಮೆಚ್ಚಿದೆ ನಿನ್ನ। ಘನತರಭಕ್ತಿಗೆ। ಮನದಚಿಂತೆಯ ಮರೆಯುವುದು॥ ಮನದುಂಬಿವರಗಳ । ನಿನಗೀವೆ ಕೇಳೆನೆ । ತನುಬಾಗಿ ನಾಚುತ್ತ ನುಡಿದ ॥2॥

ಸರುವೇಶ್ವರನೆ ನಾನು । ಪರಮಪಾತಕಿಯಾದೆ। ತರಳೆಯ ಮೇಲ್ಮನಮಾಡಿ॥ ದುರಿತದೂರನೆ ಪಾಪ । ಪರಿಹಾರವಪ್ಪುದೆ। ಹರನೆ ನೀನೇತೋರುದಾರಿ ॥3॥

ಚಿಂತೆ ಬೇಡಯ್ಯ ಶ್ರೈ। ತಾಂತನಜನಕನೆ। ಸಂತು ನೀ ಗೈದೆಲ್ಲಾ ಪಾಪ॥ ಪಿಂತಿರುಗುತ ಮುನ್ನಿ। ನಂತಿಹುದೆನ್ನುತ । ಲಂತಕಾಂತಕನು ಮನ್ನಿಸಲು ॥4॥

ವಾರ್ಧಕ

ನಿನಗಿಲ್ಲವಿನ್ನು ಪಾಪದ ಲೇಪವೆನ್ನುತಲಿ ಯನುಗ್ರಹಿಸಿ ಮುಂದೆ ಸಿದ್ಧಿಸಲಿಶಕ್ತಿ ಗಳ ಕ। ವೆನುತುಸುರೆ ಮುದಗೊಳುತ ವಿಶ್ವಕರ್ಮನೊಳೆಂದ ಸಕಲ ವೈಭವಗಳಿಂದ ॥ ಅನುಪಮದ ಮೋಕ್ಷಸಾಧನಕೊಂದು ದಿವ್ಯಜಗ । ವನೆ ಸಿದ್ಧಗೊಳಿಸೆನಲು ಪುರುಹೂತನಂಜಿ ಸಿರಿ । ವನಿತೆಯರಸನೊಳು ಮೊರೆಯಿಡಲರಿತು ಪಾಲನಾಕರ್ತೃ ವಿಂತೆಂದ ನಿನಗೆ ॥1॥

ರಾಗ ಅಷ್ಟತಾಳ

ಸರಿಯಲ್ಲ। ಯೋಚನೆ। ಸರಿಯಲ್ಲ॥ ಸರಿಯಲ್ಲ ವೈದಿನ। ಕರ ನಿನ್ನಯೋಚನೆ ಭರಿತಪಾಪಿಗಳೆಲ್ಲರಿಲ್ಲಿ। ಗೈ। ತರುತ ಮುಕುತಿಯ ಪಡೆದರಾದರೆ। ಸರುವ ಮಂಗಳೆ। ಜಗದ ಜನನಿಯ । ಪರಮನಿಯಮಕೆ । ಕೊರತೆಯಪ್ಪುದು ॥1॥

ಆದರಿಂದ ಬೇಡವಿಂಥ । ವಿಶ್ವದಕ್ರಮ । ಹದಗೆಡಿಪಂತ ಪಂಥ ॥ ಸದಯ ಸನ್ಮಂಗಲ । ಮೊದಗಿತು ಸಕಲರ್ಗೆ । ಮೊದಲಿನಂದದಿ ನಿನ್ನಕಾರ್ಯವ ।

ಮುದದಿನಡೆಸುತ ಲಿರುವುದೈನಡೆ ದುದನು ಸ್ವಪ್ನದತೆರದಿಗ್ರಹಿಸುತ । ಲೆದೆಗೆಡದೆ ನಿಶ್ಚಿಂತೆಯಿಂದಿರು ॥2॥

ದ್ವಿಪದಿ

ಬಳಿಕ ಸರ್ವರಮನ್ನಿಸಲು ದಿನಪಸೂತ ।
ನಲವಿನಿಂ ಬಿನ್ನೈಸಿದನು ಒಂದು ಮಾತ ॥1॥
ಹರಿಹರರು ಕೃಪೆಯಿಂದ ಲೆನ್ನಭೀಷ್ಟವನು ।
ಕರುಣಿಪುದು ಪುಷ್ಕರಿಣಿಯಲಿ ಮಜ್ಜನವನು ॥2॥
ಸರಿಯೆಂದನುಗ್ರಹಿಸೆ ರಥದಿಂದ ನೆಗೆದು ।
ವರಸರಸಿಯೊಳು ಸ್ನಾನವಿರಚಿಸಿದನಂದು ॥3॥
ಇಂತೆಲ್ಲವರ ಮನದ ಸಂಪ್ರೀತಿಗಾಗಿ ।
ಕಂತುಹರ ನೊಲಿದು ಕೊಳಗಳ ರಚಿಸಲಾಗಿ ॥4॥
ಹಲವು ಪುಷ್ಕರಿಣಿಗಳ ನಿರ್ಮಾಣವಾಗಿ ।
ಕೆಲರ ಹೆಸರಲಿ ರಂಜಿಸಿತು ತೀರ್ಥವಾಗಿ ॥5॥

ರಾಗ ಕೇದಾರಗೌಳ ಅಷ್ಟತಾಳ

ಪರಿ ಪರಿಯಿಂದಲಿ । ಸರುವರಮನ್ನಿಸಿ । ಮುರಹರ ಶಂಕರರು ॥ ಒರೆದು ನೀತಿಯ ದಿನ । ಕರಗೆ ಸಹಿತ ನಿಜ । ಪುರಕೆತಾವ್ ಕಳುಹಿದರು ॥1॥

ಪಾತ್ರವರ್ಗ

1. ಸೂರ್ಯ, 2. ಸಂಜ್ಞಾದೇವಿ, 3. ಯಮುನೆ, 4. ದೇವತೆಗಳು, 5. ನಾರದ, 6. ಶಿವ, 7. ವಿಷ್ಣು 8. ಅರುಣ, 9. ವಿಶ್ವಕರ್ಮ, 10. ದೇವೇಂದ್ರ

2. ಕೀರ್ತಿಮುಖ ವಿಜಯ

ರಾಗ ಸೌರಾಷ್ಟ್ರ - ತ್ರಿವುಡೆ ತಾಳ

ಇತ್ತಸಾಗರ ಮಧ್ಯದಲಿ ಮದ ವೆತ್ತ ದಾನವತಾ ಜಲಂಧರ ಮತ್ತೆ ಪೌರುಷದಿಂದ ಮೆರೆಯುತ್ತಿದ್ದ ವೈಭವದಿ ॥1॥

ಹಿರಿಯರಾವಿರೆ ಸ್ವರ್ಗ ದೊಡಿತನ । ಕಿರಿಯರಿಂಗದು ಸಲುವುದೆಂತೈ । ಸುರಪನನ್ನಿಳಿಸುತ್ತ ನಾಕದ । ಅರಸನಹೆನು ॥2॥

ಪೊರಡಬೇಕದಕೀಗ ಸೈನ್ಯದ । ನೆರಹೆನುತ್ತ ಚಮೂಪತಿಯ ತಾ । ಕರೆಯೆನಲು ಬಂದೋರ್ವದೂತನು । ಒರೆದ ಮಣಿದು ॥3॥

ರಾಗ ಮುಖಾರಿ ಏಕತಾಳ

ಲಾಲಿಸಬೇಕು ಜೀಯ। ರಕ್ಕಸರಾಯ। ಲಾಲಿಸಬೇಕು ಜೀಯ ॥ ಲಾಲಿಸಬೇಕೆ ಮ್ಮಾಳುವ ದೊರೆಯೇ । ಕಾಲಿಗೆರಗಿ ನಾವ್ । ಪೇಳುವ ನುಡಿಯ ॥1॥

ವೀಣೆಯ ನುಡಿಸುತಿಹ । ಬಾಯಲಿ ಗೌರೀ । ಪ್ರಾಣೇಶ ಜಯತೆನ್ನುವ ॥ ಮೌನೀವರನು ತಾನೈತಂದಿಹ । ಏನಪ್ಪಣೆಯೈ । ದಾನವ ಶ್ರೇಷ್ಠ ॥2॥

ರಾಗ ಸುರುಟಿ ಏಕತಾಳ

ಚರನೆಂದುದ ಕೇಳೀ। ದನುಜನು। ಉರೆತೋಷವತಾಳಿ ॥ ತೆರಳುತ ವಹಿಲದಿ। ವರಮುನಿಪನಪದ । ಕೆರಗುತ ವಿನಯದಿ । ಕರೆತಂದರ್ಚಿಸಿ ॥1॥

ಏರಿಸಿಪೀಠವನು। ವದನಕೆ। ಆರತಿಬೆಳಗಿದನು॥ಸಾರಿದಿರೆತ್ತಣಿಂ। ವಾರತೆಯೇನು ಅ । ಪಾರ ಮಹಿಮದಯೆ । ದೋರಿ ಬೆಸಸುವುದು ॥2॥

ರಾಗ ಅಷ್ಟತಾಳ

ಖಳಪತಿ ಕೇಳೆನ್ನಮಾತ । ತೋಷ । ತಳೆದಿಹೆ ನೊರೆವೆ ವೃತ್ತಾಂತ ॥ ಬಲು ಭಟನಾಗಿರ್ದುಗ ಒಲಿಸದೆ ನಾರಿಯ । ಇಳೆಯಪಾಲಿಸುವ ಅ । ಗ್ಗಳಿಕೆಗೇನೆಂಬೆನು॥1॥

ಯಾರಾದರೂ ಒಂಟಿತನದಿ। ಪ್ರಜಾ। ವಾರ ರಕ್ಷಿಪರುಂಟೆ ಜಗದಿ॥ ಸಾರಸಾಕ್ಷಿಯ ಜತೆ । ಯೇರಿ ಸಿಂಹಾಸನ । ಭೂರಿ ಸಂತಸದಿಂದ । ರಾರಾಜಿಸಲು ಬೇಕು ॥2॥

ಅದಕಾಗಿ ಪೇಳ್ವೆನಾನಿನ್ನು। ಗುಟ್ಟು। ಇದೆ ನಿನ್ನ ಆಪ್ತ ನೋರ್ವನನು॥ ಮುದದಿಂದ ಕಳುಹಿಸಿ । ಮದನ ಹರನ ಪ್ರಿಯ । ಸುದತಿಯ ತರಿಸುತ । ಮದುವೆ ಯಪ್ಪುದು ಬೇಗ॥3॥

ಭಾಮಿನಿ

ಶರಣರಿಷ್ಟಾರ್ಥಗಳ ಸಲಿಸುವ। ಕರುಣೆಯಾ ಸಾಗರನು ಪರಶಿವ। ಕರುಣಿಸುವ ನಿನ್ನಯ ಮನೋರಥ ಸಕಲ ಶುಭವೆನುತ ॥ ಸುರ ಮುನಿಪಹರ ಪಾಲಿಸೆನ್ನುತ । ತೆರಳಲಾಗ ಜಲಂಧರನು ತಾ । ಕರೆದುತನ್ನಯ ಆಪ್ತನಹ ರಾಹುವಿನೊಳಿಂತೆಂದ॥1॥

ರಾಗ ಕೇದಾರಗೌಳ ಅಷ್ಟತಾಳ

ಕೇಳಯ್ಯಸಖ ರಾಹು । ಪೇಳುವೆನೊಂದನು । ಆಲಸ್ಯಗೊಳದೆನಗಾಗಿ ॥ ಕೈಲಾಸ ಕೈದುತ್ತ ಭಾಳನೇತ್ರನಸತಿ । ಬಾಲೆಗಿರಿಜೆಯನ್ನು ಕೇಳಿ ॥1॥

ಹರನರಸಿಯಜತೆ । ಕರೆದುತಾ ಹೋಗೆಂದು । ದುರುಳನು ಕಳುಹಿಸಲು ॥ ಸರಿಯೆನುತೊಪ್ಪುತ । ತೆರಳಿದ ಕೈಲಾಸ । ಗಿರಿಗಾಗಲಾ ರಾಹುವು ॥2॥

ಬಂದೊಡೆ ರಾಹುವ । ನಂದು ತಡೆದಭೃಂಗಿ । ನಂದಿಯ ಮನವೊಲಿಸಿ । ಇಂದು ಶೇಖರನೊಡ । ನೊಂದು ವಿಷಯ ಪೇಳಿ । ಬಂದಪೆನುತಗಮಿಸಿ ॥3॥

ರಾಗ ಕಾಂಬೋಧಿ ಝಂಪೆತಾಳ

ಚಂದ್ರಶೇಖರನು ಗಿರಿ । ನಂದನೆಯನೊಡಗೊಂಡು । ಚಂದದಿಂದೊಪ್ಪಿರಲು ಖಳನು॥ ವಂದಿಸುತ ಪರಶಿವಗೆ । ನಿಂದಿರಲು ಕಾಣುತ್ತ । ಲಂದು ಬೆಸಗೊಂಡ ಪುರಹರನು ॥1॥

ಯಾರು ನೀನ್ನೈತಂದ । ಕಾರಣವದೇನುಸುರು । ಈ ರೀತಿಯಲಿ ಬಂದುದೇಕೆ। ಘೋರನರುಹೆನುತ ಸ್ಮರ। ವೈರಿಯುಸುರಲು, ಸುಮನ। ಸಾರಿಯಿಂತೆಂದತಾನದಕೆ ॥2॥

ಕಳುಹಿಸಿದ ನೆನ್ನೊಡೆಯ । ಜಲಂಧರನು ವಿಕ್ರಮಿಯು । ಸಲಿಸಬೇಕವನ ಮನದಿರವ॥ ನಲವಿಂದಗಿರಿಜೆಯ। ನ್ನೊಲಿದೀಯ ಬೇಕೆಂದು। ಸಲೆ ದೈನ್ಯದಿಂದೊರೆವೆ ದೇವ ॥3॥

ಕಂದ

ಎನೆಕೇಳುತ ಮೃತ್ಯುಂಜಯ। ನಿನಗಿಹುದೇ ಪ್ರಜ್ಞೆ ಪೋಗು ನಡೆನಡೆ ಯೆನಲಾ॥ ದನುಜಂ ಶಿವನೊಡನೊರೆದಂ। ಮನವೊಲಿಸುವ ರೀತಿಯಿಂದಲತಿವಿನಯದೊಳ ॥1॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಮುನಿಸದೇತಕೆ ದೇವ ಭಕ್ತರ । ಮನದಭೀಷ್ಟವಸಲಿಪ ನಲ್ಲೈ । ಘನಕೃಪಾನಿಧೆ ಕರುಣಿಸೈತವ ವನಿತೆಯನ್ನು ॥1॥

ಪುರಹರನು ಮಗುಳೆಂದ ನನ್ಯರ । ತರುಣಿಯನು ಬೇಡುವುದೆ ಛೀ ಛೀ । ಮರುಳರಂದದಿ ನುಡಿಯದೀಕ್ಷಣ । ತೆರಳೊಮೂಢ ॥2॥

ಭಕ್ತರಿಷ್ಟಾರ್ಥಗಳ ನೀಡದೆ । ವ್ಯರ್ಥದಣಿಸಿದ ರಪ್ಪುದೇ ಪುರು । ಷಾರ್ಥ ನಾ ಬಿಡದೊಯ್ವೆನೆಂದನು । ಧೂರ್ತನಾಗ ॥3॥

ಭಾಮಿನಿ

ದನುಜನಾಡಿದ ಮಾತಕೇಳುತ। ಮನುಮಥಾರಿಯು ನುಡಿದ ತನ್ನಯ। ಗಣಗಳಿಗೆ ಈ ಪಾಪಿಯನು ಹೊರಗಟ್ಟಿರೆಂದೆನುತ॥ ಕನಲಿಯಾಜ್ಞಾಪಿಸಲು ರಾಹುವ। ತೊನೆದು ಬಡಿದೋಡಿಸಲು ಬಳಲುತ। ಮನಮರುಗಿ ಪಿಂತಿರುಗಲಾಗ ಜಲಂಧರನು ಕಂಡ॥1॥

ರಾಗ ಅಷ್ಟತಾಳ

ಏನಾಯಿತಯ್ಯ ಮಿತ್ರ । ನಿನ್ನಯ ಮೊಗ । ಕಾಣಲಪ್ಪುದು ವಿಚಿತ್ರ । ಮಾನಿನಿಯೆಲ್ಲಿಹಳ್ಆ ಮೀನಕೇತಾರಿಯು । ಏನೆಂದನಿನ್ನನು । ಮಾನಿಸಲಿಲ್ಲವೆ ॥1॥

ಬಳಲಿದಂದದೊಳಿರುವೆ। ಯಾತಕೆ ಅದ। ತಿಳುಹು ನಾನದನರಿವೆ ॥ ಒಲಿದನೆ ಪರಶಿವ। ಲಲನೆಯ ಕೇಳಲು। ಮುಳಿದನೆ ಎನ್ನಮೇಲ್। ತಳೆದನೆ ಕರುಣವ ॥2॥

ರಾಗ ಏಕತಾಳ

ಎನೆಪೇಳ್ದರಾಹುವು। ಮನುಮಥಾರಿಯ ಬಳಿ। ನಿನಗಾಗಿ ಪೋಗಿನಾನು ॥ ವನಿತೆಯ ಕೇಳಲು। ಕಿನಿಸಿಂದ ತನ್ನಯ। ಗಣರಿಂದ ನೂಕಿಸಲು ॥1॥

ಬಂದೆನು ವಿಧವಿಧ। ನಿಂದನೆನುಡಿಕೇಳಿ। ಕಂದಿದೆ ಕುಂದಿದೆನಯ್ಯ ॥ ಎಂದಿಗೀಕಾರ್ಯವೆ ನ್ನಿಂದಲಾಗದು ಎನು। ತಂದು ಪೇಳಲು ರಾಹುವು ॥2॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಕೇಳುತಾನುಡಿಯ ಜಲಂಧರ। ಮಿಗೆ। ತಾಳಿಕ್ರೋಧವ ನಾಗ ಕರ್ಬುರ ॥ ವ್ಯಾಳವೇಣಿಯ ತಾರದಿರೆ ನಾನು। ಶಶಿ। ಮೌಳಿಯ ನಾದರು ಬಿಡೆನಿನ್ನು ॥1॥

ಶರಣರಿಷ್ಟಾರ್ಥವಸಲಿಪುದು। ನಂಬಿ। ದರನು ಉದ್ಧಾರವ ಮಾಳ್ಪುದು ॥ ಕರುಣಾಳು ಶಂಕರನೆಂಬರು। ಇಂತು। ವಿರಚಿಸಲಾರೊಡಂಬಡುವರು ॥2॥

ಇಂತು ದಾನವ ನಾರ್ಭಟಿಸುತಲಿ। ತ್ರಿಪು। ರಾಂತಕನನು ಕಾಂಬೆನೆನುತಲಿ॥ ಅಂತರಂಗದಿ ಛಲವಿಡಿಯುತ। ಗೌರೀ। ಕಾಂತನಬಳಿಗಾಗಿ ಸಾಗುತ ॥3॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇತ್ತ ಕೈಲಾಸದೊಳು ಪರಶಿವ। ಮತ್ತಕಾಶಿನಿಯೊಡನೆ ಪೀಠದಿ। ಅರ್ಥಿಯಿಂಕುಳ್ಳಿರಲು ಬಂದನು। ಧೂರ್ತನಂದು ॥1॥

ತಡೆದಕಾಹಿನಗಣರಲೆಕ್ಕಿಸ। ದೊಡನೆಮುಂದೈ ತರುತ ಕಂಡನು। ಮೃಡನ ಗಿರಿಜಾವರನ ಮೂರ್ತಿಯ। ಸಡಗರದೊಳು ॥2॥

ಚರಣಕೆರಗುತಲೆಂದ ನಾಜಲಂ। ಧರನು ಭಕ್ತಾಭೀಷ್ಟಸಲಿಸುವ। ಕರುಣಿಯಾದರೆ ನೀಡುವುದು ಮನ। ದಿರವನೆನಲು ॥3॥

ರಾಗ ಕೇದಾರಗೌಳ ಅಷ್ಟತಾಳ

ಪಶುಪತಿಧ್ವಜನಾಗ। ಬೆಸಗೊಂಡ ಕರುಣದಿ। ಉಸುರು ವಾಂಛಿತವೇನೆನೆ ॥ ಅಸುರನೊರೆದನೀ ಸ। ಲಿಸುವೆಯ ಕೋರಿಕೆ। ಅಸದಳವೆನಲಾಗದು ॥1॥

ಶರಣರಬೇಡಿಕೆ। ಗೆರಡಿಲ್ಲ ಮಾತಿನ್ನು। ಅರುಹು ನಿನ್ನಿಷ್ಟವೇನು॥ ಕರುಣಿಪೆನೆನ್ನಲು ದುರುಳತೋಷವಗೊಂಡು । ಪುರಹರನೊಡನೆಂದನು ॥2॥

ನುಡಿಯಿದುನಿಜವಾದ। ರೊಡನೆನಿನ್ನಯ ಪ್ರಿಯ। ಮಡದಿಯಾಗಿಹ ಗೌರಿಯ॥ ಕೊಡುಕೊಡೆನ್ನುತಲಂದು । ಧಡಿಗನು ಪೇಳಲು । ಮೃಡನುಸುರಿದ ನೀತಿಯ ॥3॥

ಮೂಢರತೆರದಿಂದ। ಲಾಡದಿರೆನ್ನೊಳು। ಬೇಡುವುದೇ ಸತಿಯ॥ ರೂಢಿಯೊಳಿದು ಪೊಸ । ವಾಡಿಕೆಯಿದರಿಂದ । ಕೇಸು ನಿನಗೆ ನಿಶ್ಚಯ ॥4॥

ಹಾನಿಬರುವುದೆಂದು । ನೀನಂಜಿಸುವುದೇಕೆ । ನಾನೋಡಿಕೊಂಬೆನೆಲ್ಲ ॥ ಏಣಾಂಕಧರನಿನ್ನ । ಮಾನಿನಿಯನು ಕೊಡು । ಆ ನುಡಿಮರೆಯೆಸಲ್ಲ ॥5॥

ರಾಗ ಕೇದಾರಗೌಳ ಝಂಪೆತಾಳ

ಖೂಳಸಾರಿದೆನು ನಿನಗೆ । ಕೆಡದಿರುನಿ । ವಾಳಿ ನಡೆ ನಡೆಯೊಮನೆಗೆ ॥ ವ್ಯಾಳವೇಣಿಯಬಯಕೆಯ । ನಿಲಿಸುವೆನು । ಶೂಲಿನಾನದ ಮರೆತೆಯ ॥1॥

ಶಂಕರನು ನೀನೆಂಬುದ। ಅರಿತು ನಿ। ಶ್ಯಂಕೆಯಿಂಕೇಳ್ದೆ ನುಡಿದ॥ ಪಂಕಜಾಕ್ಷಿಯ ಕರುಣಿಸು । ಮಾತನಾ । ತಂಕವಿಲ್ಲದೆ ಪಾಲಿಸು ॥2॥

ಸಲುಗೆಯೇ ಎನ್ನಕೂಡೇ। ಶರಣನೆಂ। ದೊಲವಿನಿಂಮಾತನಾಡೇ॥ ಲಲನೆಯಂ ಕೇಳ್ದ ನಿನ್ನ। ರಸನೆಯನು । ಘಳಿಲನೇ ಸೀಳ್ವೆಮುನ್ನ ॥3॥

ಕಾಂಬೆ ನಿನ್ನಧಟನೆಂದು। ದಾನವನು। ಮುಂಬರಿಯೆ ಕಾಣುತಂದು ॥ ಶಂಭು ಗಣಗಳನು ಕರೆದ । ಈ ಪಾಪಿ । ಯಂಬಿಡದೆ ಸದೆಯಲೊರೆದ ॥4॥

ರಾಗ ಭೈರವಿ ಏಕಾತಾಳ

ಹರನಾಣತಿಯನುಕೇಳಿ । ಆ । ವರ ಭೃಂಗಿಯು ಖತಿತಾಳಿ ॥ ತ್ವರಿತದಿ ಗಣರೊಡಗೂಡಿ ಜಲಂ । ಧರನನು ಮುತ್ತಿದ ಪ್ರೌಢಿ ॥1॥

ಹೇಳಿದ ಮಾತನಡೆಸದೇ। ಶಶಿ। ಮೌಳಿಯಿಂತೆಸಗಲುಬಹುದೇ॥ ಕಾಳಗಕಿವರನು ಕಳುಹೇ । ನಿ। ನ್ನಾಳುಗಳನು ನಾ ನುಳುಹೇ ॥2॥

ಎನುತಾಖಳ ಜಲಂಧರನು। ಮ। ತ್ತನುವರದೊಳು ಭೃಂಗಿಯನು॥ ಕ್ಷಣದೊಳು ಕಂಗೆಡಿಸಿದನು । ಕಂ। ಡನು ತಾನಂದೀಶ್ವರನು ॥3॥

ಕೊಳುಗುಳದೊಳುಮಾರಾಂತು । ತಾ । ಹಳಚಲುಖಾತಿಯನಾಂತು ॥
ಜಲಂಧರನವಗೆರಗಿದನು । ಹತಿ । ಯೊಳಗವ ನೆಲಕೊರಗಿದನು ॥4॥

ಕಂದ

ಯಾತಕೆ ಪುರಹರ ನೀ ಗಣ। ವ್ರಾತವಬಳಲಿಸುವೆ ನುಡಿದ ತೆರದೊಳ್ ನಿನ್ನಾ॥
ನಾಥೆಯ ಕರುಣಿಸಿ ಕಳುಹೈ । ಮಾತನ್ನುಳಿಸದಿರೆ ತೆರಳೆನಾ ಧಿಟವೆಂದಂ ॥1॥

ಭಾಮಿನಿ

ಕೇಳಿ ಮುಖಹರ ಕನಲುತಾಕ್ಷಣ। ಖೂಳದೈತ್ಯನ ಮದವ ನಡಗಿಸಿ। ಬಾಳತೀರ್ಚುವೆ
ನವನನೆನ್ನುತ ತನ್ನ ಖತಿಯಿಂದ ॥ ಶೂಲಿ ಸೃಜಿಸಲ್ಕೊಬ್ಬವೀರನ । ಲೀಲೆಯಿಂದಲಿ
ಕ್ರೋಧರೂಪವ ತಾಳಿಯಾತನು ಪಾದಕೆರಗುತಲೆಂದನಭವಂಗೆ ॥1॥

ರಾಗ ಭೈರವಿ ಏಕತಾಳ

ಯಾತಕೆ ಸೃಜಿಸಿದಿರೆನ್ನ। ಭವ। ದಾತ ಅಪ್ಪಣೆಕೊಡಿ ಮುನ್ನ॥ ಏತರಕಾರ್ಯವು
ಪೇಳಿ । ನಾ । ನೋತುಗೈದಪೆಮುದ ತಾಳಿ ॥1॥

ಕುಡಿಯಲೆ ಸಾಗರಜಲವ। ಪುಡಿ। ಪುಡಿಗೈಯಲೆ ಹಿಮಾಚಲವ ॥ ಕೊಡಿರೆನ
ಗಾಣತಿ ಬೇಗ । ನಾ । ನಡೆಸಿಕೊಡುವೆ ನದನೀಗ ॥2॥

ಕಂದ

ಮೆಚ್ಚಿದೆ ನಿನ್ನಯ ಮಾತಿಗೆ। ಹುಚ್ಚರಂದದಿ ವರ್ತಿಸುತ್ತಲಿಹ ಈ ಖಳನಂ॥
ಬೆಚ್ಚದೆ ಬಡಿದೋಡಿಪುದೆನೆ ॥ ಅಚ್ಚುತಸಖಗೆರಗಿ ಭವನಸಂಭವ ಪೊರಟಂ ॥1॥

ರಾಗ ಮಾರವಿ ಏಕತಾಳ

ನಿಲು ನಿಲು ಧೂರ್ತನೆ। ಕೊಳುಗುಳದೊಳು ಕೈ । ಚಳಕವ ತೋರುವೆಯ॥
ಕಲಹದಿಗಣರನು । ಗೆಲಿದಿಹ ಗರ್ವವ । ನಿಲಿಸುವೆ ಬಾರಯ್ಯ ॥1॥

ಯಾರೆಲೊ ಮದಹಂ। ಕಾರದೊಳೆನ್ನೊಳು। ಹೋರಲು ಬಂದಿರುವ॥ ಪೋರನೆ
ನಿನ್ನನು । ಗಾರುಗೆಡಿಪೆಧಿಟ । ಸಾರು ನೀ ಬಂದಂತೆ ॥2॥

ಮತಿವಿಕಳನೆ ಪರ । ಸತಿಯನು ಬಯಸುತ । ಲತಿ ಮದದಿಂದುಲಿವ ॥ ಕ್ಷಿತಿ ಭಾರನೆಕೇಳ್ ಹತಿಸುತ ನಿನ್ನನು । ಪಿತಗೀಯುವೆ ಮುದವ ॥3॥

ಕಾಣುವೆ ನಿನ್ನಯ। ತ್ರಾಣವಸಮರದಿ। ಗೋಣಮುರಿವೆನೆನುತ॥ ದಾನವಶಕ್ತಿಯ ತಾನೆಸೆಯಲು ಶಿವ । ಸೂನುವದನು ಮುರಿದ ॥4॥

ಪರಿಪರಿಯುದ್ಧದಿ । ದುರುಳನ ಸೋಲಿಸಿ । ಹರಸುತನೊದೆಯುತಿರೆ ॥ ತರಹರಿಸುತಲವ ನರಿಯದೆ ಮುಂದಿನ । ಧುರದಿರ ನಡುಗುತಿರೆ ॥5॥

ವಾರ್ಧಕ

ಮೆಚ್ಚಿದೆನು ಕಂದ ಕೇಳ್ ನೀ ಕೀರ್ತಿಮುಖ ನೈಸೆ। ಹುಚ್ಚರಂದದಿ ಗಳಹುತಿರುವ ಈ ದಾನವನ। ಚಚ್ಚುತ್ತೊಡಿಸುಯೆನಲ್ ಬೆನ್ನಟ್ಟಿದಂ ವೀರ ಪುರಹರನನುಜ್ಞೆಯಂತೆ॥ ಅಚ್ಚರಿಯೆನಲ್ ಪುಷ್ಕರಿಣಿ ಕ್ಷೇತ್ರ ಕೈತಂದು । ಬೆಚ್ಚು ತಳುತಾಖಳಂ ರಕ್ಷಿಸೆಂದೆನ್ನುತ್ತ। ನಿಚ್ಚಟದ ಬಕುತಿಯಿಂ ದಪ್ಪಿಕೊಂಡಿರೆ ಲಿಂಗವಂ ಶಿವಂ ಮೈದೋರ್ದನು ॥1॥

ರಾಗ ಕೇದಾರಗೌಳ ಅಷ್ಟತಾಳ

ವರಕೀರ್ತಿಮುಖನು ಆ। ದುರುಳನ ನೊದೆವೆನೆಂ।ದರೆ ಮೃತ್ಯುಂಜಯ ಶೋಭಿಸೆ। ಶಿರಬಾಗಿನಿಲಲು ಮ । ತ್ತುರುಭೀತಿಯಿಂ ಖಳ । ಚರಣ ಕಾನತನಾಗುತ ॥1॥

ಕುಮತಿಯಾದೆನ್ನಯ । ಅಮಿತಾಪರಾಧವ । ಕ್ಷಮಿಸೆಂದು ಬಿನ್ನವಿಸೆ ॥ ಉಮೆಯರಸನುಮತ್ತಾ । ಭ್ರಮಿತನ ಕಳುಹಲು । ನಮಿಸುತಾ ನವಜಾತನು ॥2॥

ತಾತನಿಮ್ಮಯಮನ । ಪ್ರೀತಿಯ ನೆಲೆಯೆಂತೋ । ನಾತಿಳಿಯೆನು ಧಿಟವು ॥ ಪಾತಕಿಯನ್ನುಬಿಟ್ಟು । ದೇತಕೆಂದರಿಯೆನು । ಕೌತುಕಲೀಲೆಯಿದು ॥3॥

ದುರುಳನಾದರು ಆತ । ಶರಣೆಂದಮೇಲಿನ್ನು । ಮರೆವುದು ಘಟಿಸಿದುದ ॥ ತರಳನೀ ಬಳಲಿದೆ । ಬರಿದೆ ಚಿಂತಿಸಬೇಡ । ಅರುಹು ನಿನ್ನಿಷ್ಟವೆಂದ ॥4॥

ಭಾಮಿನಿ

ಪರಮಮಹಿಮನೆ ಹಸಿವತಾಳೆನು । ಕರುಣೆಸೆನೆ ಶಿವನೆಂದ ನಿನ್ನಯ । ಮರೆವಕಾಯವ ಭುಜಿಸೆನಲ್ಲದರಂತೆ ಭಕ್ತಿಯೊಳು ॥ ಮುರಿದು ತಿನಲದ ಕಂಡು

ಗೌರೀ । ವರನು ಮುನ್ನಿನ ಪರಿಯ ಪ್ರಾಪ್ತಿಸಿ । ಯೊರೆದ ನೆಲಸೀಕ್ಷೇತ್ರದೊಳು ಶುಭವಹುದು ಮೆಚ್ಚಿದೆನು ॥1॥

ಕಂದ ಕೇಳೀ ಕ್ಷೇತ್ರದಲಿ ತಾವ್। ಬಂದು ಎನ್ನನು ಪೂಜಿಸುವ ಮೊದ। ಲಂದದಿಂದಲಿ ನಿನ್ನನರ್ಚಿಸಿ ಪ್ರಾರ್ಥಿಸಲು ಶುಭವು ॥ ಮುಂದೆ ನಂದೀಭೃಂಗಿ ಪಳಸ್ಥಳ । ವೆಂದು ಕೀರ್ತಿಯಗಳಿಸಿ ಬೆಳಗಲಿ। ಯೆಂದು ರಜತಗಿರೀಶನನುಗ್ರಹಿಸಿದನು ಕರುಣೆಯೊಳು॥2॥

ಪಾತ್ರವರ್ಗ

1. ಜಲಂಧರ, 2. ದೂತ, 3. ನಾರದ, 4. ರಾಹು, 5. ನಂದಿ, 6. ಭೃಂಗಿ, 7. ಪರಮೇಶ್ವರ, 8. ಗಿರಿಜೆ, 9. ಕೀರ್ತಿಮುಖ.

3. ಸತ್ವಪರೀಕ್ಷೆ

ರಾಗ ಸೌರಾಷ್ಟ್ರ ತ್ರಿವುಡೆತಾಳ

ಗಂಧವತಿ ಪಟ್ಟಣನಿವಾಸಿ ತಾ। ನೊಂದು ದಿನ ಸಂಚರಿಸುತಿರಲಾ। ನಂದದಿಂದಲಿ ಆದಿಶೇಷನು । ಕಂಡು ನುಡಿದ ॥1॥

ಗರ್ವವೇತಕೊ ವಾಯು ನಿನಗೇ। ಸರ್ವರೊಳುಬಲವಂತನೆನ್ನುತ। ಉರ್ವಿಯೊಳು ನನಗೆಣೆಪರಾಕ್ರಮ । ವಿರ್ವರಿಲ್ಲ ॥2॥

ಸಾಕೆಲವೊಮದಬೇಡ ಸುಮ್ಮನೆ । ಲೋಕಲೋಕವೆ ಎನ್ನ ಶಕ್ತಿಯ । ತಾಕೊಂಡಾಡುವರಲ್ತೆ ಬರಿದೇ । ಯಾಕೆಮಾತು ॥3॥

ಚಂಡಬಲನೀನಾದರದನಾ । ಕಂಡಪೆನು ಸೋತವನು ಭೃತ್ಯರ । ತಂಡದಲಿ ಸೇರುವುದು ಪಣವೈ । ಖಂಡಿತವಿದು ॥4॥

ಭಾಮಿನಿ

ಭೂರಿವಿಕ್ರಮದಿಂದ ಲೀರ್ವರು । ಪೌರುಷವಮೆರೆಸಲ್ಕೆಮತ್ತಾ । ಮೇರುಪರ್ವತದೆಡೆಗೆ ಬಂದೊಡನುತ್ಸುಕತೆಯಿಂದ॥ ವೀರನಾಗಾಧಿಪನು ನಗವನು। ತೋರದಂದದಿ ಸುತ್ತಿಪಿಡಿಯುತ । ಸಾರಿದನು ವಾಯುವಿಗೆ ನಿನ್ನಯ ಬಲುಹತೋರೆನುತ ॥1॥

ರಾಗ ಭೈರವಿ ಅಷ್ಟತಾಳ

ಉರಗಾಧಿಪತಿಯೆಂದ ಮಾತ । ಕೇಳ್ದು । ಉರಿಮುಸಗುತ್ತಲಿ ವಾತ ॥ ಪರಿಪರಿಯಿಂದಲಿ। ಭರದಿಂದ ಬೀಸುತ್ತ। ಮುರಿಯೆಯತ್ನಿಸಿದನು। ಪರುವತವನು ತಾನು ॥1॥

ಫಲಹೊಂದದಿರೆ ಗೈದಕಾರ್ಯ । ಮತ್ತೆ । ಫಲದಿಂದ ತೋರ್ದನು ಶೌರ್ಯ॥
ಗೆಲುವಾಗುವಂದವ। ತಿಳಿಯದೆ ಚಿತ್ತದಿ। ಕಳವಳ ತಾಳುತ್ತ। ಬಳಲಿಕೆಯನ್ನಾಂತ॥2॥

ಪರಿಯನ್ನು ಈಕ್ಷಿಸುತಾಗ । ಮದ । ವೆರಸಿನುಡಿದ ಶೇಷನಾಗ । ಬರಿದೇಕೆ ಹೋರುವೆ। ಶರಣೆನೆ ಕಾಯುವೆ। ಚರಣಕೆಮಣಿಯೆಂದು। ಗರುವದಿ ನಿಂದಿರೆ ॥3॥

ವಾರ್ಧಕ

ಆದಿಶೇಷನು ಹಂಗಿಸುತನುಡಿಯಲದಕೆ ಪ್ರತಿ । ರೋದಮಂ ಕಾಣಿಸದೆ ಮೌನದಿಂದಲಿ ಸಮಯ । ಸಾಧಿಸುತ ವಾಯುವಿರೆ ಗರ್ವದಿಂ ತಲೆಯೆತ್ತಿ ಒಂದೆಡೆಯಬಿಗಿಯತೊರೆಯೆ॥ ಆ ದಿಸೆಯೊಳೈದಿ ಮೈನಾಕಪರ್ವತ ಕಳಚಿ । ಮೋದದಿಂ ದಕ್ಷಿಣಸಮುದ್ರದೆಡೆ ಕೆಡಹಲ್ಕೆ ಆದುದದ್ಭುತವೊಂದು ಶಿಲೆಕಳಚಿಬೀಳಲ್ಕೆ ಹುಲ್ಲೆಯೊಂದಸುನೀಗಿತು ॥1॥

ರಾಗ ಸಾಂಗತ್ಯ ರೂಪಕತಾಳ

ಲೀಲೆಯಿಂ ಮುನಿಪನ । ಬಾಲೆ ಪೇಶಲೆಯೆಂಬ । ಶೀಲೆ ತಾ ನಾಶ್ರಮದಲ್ಲಿ॥
ಪಾಲಿಸುತಿರೆ ಹರಿಣವ ಚರಿಸುತ್ತಿರೆ । ಮೇಲಿಂದ ಶಿಲೆಬಿದ್ದು ಮಡಿಯೆ ॥1॥

ಪರಿಕಿಸುತದ ಮುನಿ। ವರಗರುಹುತ ದುಃಖ। ಮರೆಯಲಾರದೆ ಮರುಗುತಿರೆ॥
ಭರದಿ ಖತಿಯತಾಳಿ। ಯೊರೆದ ಕಾರಣರಾದ। ವರು ಹರಿಣವೆ ಆಗಲೆನುತ ॥2॥

ವರ ಋಷಿಶಾಪವ। ನರಿತು ಪ್ರಭಂಜನ। ಚರಣದೊಳಳುತ ಪ್ರಾರ್ಥಿಸಲು॥
ಕರಗಲು ಮನ ದಿನ। ಕರನಿರ್ಮಿತಕ್ಷೇತ್ರ । ವರ ಪುಷ್ಕರಿಣಿ ಸ್ನಾನದಿಂದ ॥3॥

ಪರಿಹಾರವೆನ್ನಲು । ಮರಳಿವಂದಿಸುತಲ । ತೆರಳಿ ವಿಮೋಚನೆ ಪಡೆಯೆ ॥
ತರಣಿಯನುಗ್ರಹ। ಕರುಣಿಸೆ ಮುಂದದು। ವರ ವಾಯುತೀರ್ಥವೆಂದಾಯ್ತು॥4॥

ಪಾತ್ರವರ್ಗ

1. ಪ್ರಭಂಜನ, 2. ಮಹಾಶೇಷ, 3. ಪೇಶಲೆ, 4. ಋಷಿ, 5. ಹುಲ್ಲೆ.

4. ಮತ್ಸ್ಯಮಾಧವ ಮಹಿಮೆ
(ಕರ್ಕಟಾಸುರವಧೆ)

ರಾಗ ಸೌರಾಷ್ಟ್ರ ತ್ರಿವುಡೆತಾಳ

ಒಂದುದಿನ ವೈಕುಂಠದಲಿ ಸಾ । ನಂದದಿಂದಲಿ ವನಜನಾಭನು । ಇಂದಿರೆಯ ಸಹಿತೋಲಗದೊಳಿರೆ । ಚಂದದಿಂದ ॥1॥

ಆದಿಮೂರುತಿ ನುಡಿದಮಡದಿಗೆ । ಮೇದಿನಿಯ ವಾರ್ತೆಯನು ತಿಳಿಯದೆ ಆದುದೈಬಲುದಿವಸ ವರಿಯುವ । ಹಾದಿಯೆಂತು ॥2॥

ಪರಮಮಹಿಮನೆ ಯಾತಕೀ ನುಡಿ । ಬರಿದೆಯುಸುರುವೆ ಸರ್ವಶಕ್ತಗೆ । ಕೊರತೆಯೇನಿಹುದೆಲ್ಲ ಸಂಗತಿ । ಯರಿಯದವನೇ ॥3॥

ರಾಗ ಸುರುಟಿ ಏಕತಾಳ

ಎನುತ ಚರ್ಚಿಸುತಿರಲು । ನಾರದ । ಮುನಿಪನಲ್ಲಿಗೆ ಬರಲು ॥ ಘನತೋಷದಿ ವa ದನೆಯನು ಸಲಿಸುತ । ಲನುನಯದಿಂದಾ । ಸನವನ್ನಡರಿಸಿ ॥1॥

ಎತ್ತಣಿಂದಾಗಮನ। ಸುರಮುನಿ। ಪೋತ್ತಮನುಡಿಹದನ। ಮರ್ತ್ಯಲೋಕದನವ ವೃತ್ತಾಂತಗಳಿರೆ । ಬಿತ್ತರಿಸೆನಲಾ । ಕಿತ್ತಡಿಯರುಹಿದ ॥2॥

ಅರಿಯದಂದದೊಳೆನ್ನ। ಕೇಳ್ವೆಯ। ವರಲಕ್ಷ್ಮಿ ರಮಣ ॥ ಅರುಹುವೆ ಕಂಡುದ ಕರುಣಾಕರ ಕೇಳ್ । ಧರೆಯೊಳು ನಡೆಯುತ್ತಿರುವ ಸಂಗತಿಗಳ ॥3॥

ಭಾಮಿನಿ

ಆದಿನಾರಾಯಣನೆ ಲಾಲಿಸು । ಆದಿವಾಕರನೊಂದು ದಿನವು । ನ್ಮಾದಕೊಳಗಾದಂತೆ ವರ್ತಿಸಿ ತನ್ನ ನಂದನೆಯ॥ ಬಾಧಿಸಲ್ಕೆಳಸಲ್ಕೆಯರಿತು, ತಳೋದರಿ ಪ್ರತಿಭಟಿಸಿತನ್ನಯ । ಕಾದಲನ ನಿಂದಿಸಲು ಸುರತತಿ ಸಹಿತ ದೂಷಿಸಲು ॥1॥

ದಿನಕರನು ಮಿಗೆನಾಚಿತನ್ನಯ। ಮನದೊಳಗೆ ತಪ್ಪರಿತು ಯಾರೊಡ। ನೆನದೆ ಭೂತಳಕೈದಿ ಎಡತೊರೆಯೆಂಬ ತಾಣದಲಿ ॥ ಮನುಮಥಾರಿಯ ಲಿಂಗಸ್ಥಾಪಿಸಿ। ಯನುನಯದಿಪೂಜಿಸುತಲಧ್ವರ । ವನುಸಹಿತಲೆಸಗಲ್ಕೆ ಶಿವನೊಲಿದನುಗ್ರಹ ವಮಾಡೇ ॥2॥

ಹರನೊಲುಮೆಯಿಂದಲ್ಲಿ ಕೆಲ। ಪುಷ್ಕರಿಣಿಗಳು ಕಂಗೊಳಿಸಿದವು. ಪರಿ। ಪರಿಯ ಮಹಿಮೆಗಳಿಂದ ದೇವತಿಂಥಿಣಿಯ ಪೆಸರ್ವಡೆದು॥ ವರುಣಸುತ ನೆನ್ನಿಸಿದ ಜಲಂಧರ। ಗಿರಿಜೆಯಂಬಯಸಲ್ಕೆ ಮುಪ್ಪುರ । ಹರನುಕನಲುತ ಕೀರ್ತಿಮುಖನನು ಸೃಜಿಸಿ ದುಷ್ಟನನು ॥3॥

ಅಟ್ಟಲಾಮತಿಹೀನ ಮಿಗೆಕಂ। ಗೆಟ್ಟು ಶಿವಸಲಹೆಂದು ಪಾದವ। ಗಟ್ಟಿಯಾಗಿಯೆ ಪಿಡಿದಳಲುತಿರೆಭವನು ಕೃಪೆದೋರಿ॥ ಕೆಟ್ಟವಗೆ ನೀತಿಯನು ಬೋಧಿಸು। ತಟ್ಟಿಬಳಿಕಾ ಕೀರ್ತಿಮುಖನನು । ಥಟ್ಟನೆಡತೊರೆಯಲ್ಲಿ ಸ್ಥಾಪಿಸಿ ಯನುಗ್ರಹಿಸಲಂದು ॥4॥

ಪರಮಪಾತಕಿಗಳನು ಸಹಲು। ದ್ಧರಿಸಿ ಸಲಹುವ ಪುಣ್ಯತಮ ಪು। ಷ್ಕರಿಣಿಗಳ ನೆಲೆಯಾಗಿ ಕಂಗೊಳಿಸುತ್ತಲಿದೆ ಕ್ಷೇತ್ರ। ಅರಿತುದನು ಬಿನ್ನೈಸಿದೆನು ಶ್ರೀ। ವರ ಕೃಪಾಕರ ಪಾಲಿಸೆನ್ನುತ । ಸುರ ಮುನಿಪನ್ನೈದಲ್ಕೆ, ಲಕ್ಷ್ಮಿದೇವಿಯುಸುರಿದಳು ॥5॥

ರಾಗ ಅಷ್ಟತಾಳ

ಮಾತಲಾಲಿಸು ಪ್ರಾಣ । ನಾಥನೆ ಮುದದಿ ॥ ಪ್ರೀತಿಯಿಂದಲಿ ಎನ್ನ । ಮನ್ನಿಸುದಯದಿ॥ ಖ್ಯಾತ ಮುನಿಪನೆಂದ । ಕ್ಷೇತ್ರವನೋಡಿ । ಭೂತಳಸಂಚಾರ । ವನ್ನು ನಾವ್ಮಾಡಿ ॥1॥

ಬರುವ ಶೀಘ್ರದೊಳೀಗ। ಪೊರಡುವುದೆನುತ। ಚರಣದೊಳೆರಗುತ್ತ। ಲೊರೆಯೆ ಶ್ರೀನಾಥ ॥ ಸರಿಯೆಂದು ಕರೆದನು । ವರಸುದರ್ಶನನ । ಅರುಹಿದ ಪಯಣ। ವರವಭೂರಮಣ ॥2॥

ಎಡತೊರೆ ಅರ್ಕಕ್ಷೇ।ತ್ರದ ಸಂದರ್ಶನಕೆ। ಮಡದಿಸಹಿತಜಗ। ದೊಡೆಯನೈದಲ್ಕೆ॥ ಒಡೆಯನನುಜ್ಞೆಯಿಂ । ದದಿ ಸುದರ್ಶನನು । ಒಡನೆ ಹಿಂಬಾಲಿಸಿ । ನಡೆತಂದನವನು॥3॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇತ್ತ ಮಹಿಷಾಪುರದಿದಾನವ। ಮೊತ್ತದೊಡನಾಮಹಿಷಕರ್ಬುರ। ಪೌತ್ರನೆನಿಸಿದ ಕರ್ಕಟಾಸುರ । ದೈತ್ಯನಂದು ॥1॥

ಭೂರಿವೈಭವದಿಂದ ನಿಜ ಪರಿ । ವಾರದೊಡನಾನಂದದಿಂದಲಿ । ಆರಸೆಯನಾಳುತ್ತಲಿರ್ದನು । ವೀರನೆನಿಸಿ ॥2॥

ಓಲಗದೊಳೊಪ್ಪಿರಲಿಕೊಂದಿನ। ಭಾಳಭೀತಿಯಿಂಬಂದು ಆರಸನ। ಕಾಲಿಗೆರಗುತ ನುಡಿದರಾವನ । ಪಾಲರಂದು ॥3॥

ರಾಗ ಮುಖಾರಿ ಏಕತಾಳ

ಪಾಲಿಸಬೇಕು ನಮ್ಮೊಡೆಯ । ಬಿನ್ನಪವನು । ಲಾಲಿಸಬೇಕು ಓ ಜೀಯ ॥ ತಾಳಲಾರೆವು ಮೃಗ । ಜಾಲದುಪದ್ರವ । ಭಾಳಕಂಗೆಟ್ಟೆವು । ವೇಳೆಗಳೆಯದೇ ॥1॥

ಆನೆಯಹಿಂಡುಬಂದೈತೆ । ಉಪವನದಲ್ಲಿ । ಹಾನಿಯ ತುಂಬಾಮಾಡೈತೆ ॥ ಕೋಣಗಳ್ ಹಂದಿಗಳ್ । ಶಾನೆ ಬಂದುಪಟಳ । ತಾನೆಮಾಡುತ್ತಿವೆ । ದಾನವರೊಡೆಯ॥2॥

ಕರ್ಕಶದನಿಯ ಮಾಡ್ತಾವೆ । ಮತ್ತಲ್ಲಿ ಕೆಲ । ಹಕ್ಕಿಗಳ್‌ದಾಳಿ ಇಡ್ತಾವೆ ॥ ಮರ್ಕಟರುಪಟಳ ಲೆಕ್ಕಿಸಲಸದಳ । ಕರ್ಕಟಾಸುರ ಕೊಂ । ದಿಕ್ಕಿ ರಕ್ಷಿಪುದೈ ॥3॥

ಭಾಮಿನಿ

ಕಡುಬೆದರಿದೂರಿಟ್ಟ ಭೃತ್ಯರ । ಪಡೆಯ ಸಂತೈಸುತ್ತ ಕರ್ಬುರ । ರೊಡೆಯ ಬೇಟೆಗೆ ಸಿದ್ಧಗೊಳಿಸಿರೆನುತ್ತ ಕಳುಹಲ್ಕೆ ॥ ಒಡನೆ ವಿಷಯವನರಿಯುತಗ್ರಜ। ನೆಡೆಗೆ ಬಂದಾಮತ್ಸ್ಯಮುಖಿತಾ । ನಡಿಗೆರಗಿ ಬಿನ್ನೈಸಿದಳು ಕರ್ಕಟಗೆ ಮನದಿರವ ॥1॥

ರಾಗ ಏಕತಾಳ

ಅಡವಿಗಿಂದು। ಪಡೆಯಕೂಡಿ। ನಡೆವೆಬೇಟೆಗೆ॥ ಒಡನೆಯರಿತೆ। ಧೃಡದಿವಾರ್ತೆ। ತಡೆಯದಿಲ್ಲಿಗೆ ॥1॥

ಬಂದೆನೆನ್ನ। ನೊಂದಿಗೊಯ್ಯೊ। ಇಂದು ವಿಪಿನಕೆ॥ ಮಂದಿರದಲಿ ನಿಂದುಮನಕೆ। ಒಂದೆ ಬಳಲಿಕೆ ॥2॥

ಬೇಡತಂಗಿ। ಕಾಡಬೇಟೆ। ಯಾಡುವಾಮನ॥ ಕ್ರೋಢಮುಂ। ತಾದ ಮಿಗಗಳ। ಕೂಡಿರುವವನ ॥3॥

ಪೊಸತುಸುದ್ದಿ। ಯುಸುರಲೇಕೆ। ಪಸಿರುಕಾನನ॥ ಎಸೆವಮೃಗಗ ಳಸುವಕಳಚಿ। ಕಸುವತೋರ್ಪೆನಾ ॥4॥

ಅಂಗನೆಯರ। ಬೇಟೆಯಾಪ್ರ ಸಂಗವಿರಳವು॥ ತಂಗಿನಿನ್ನ। ಇಂಗಿತವನು। ಸಲಿಸೆ ಕಷ್ಟವು ॥5॥

ವಾರ್ಧಿಕ

ವಾದ ಪ್ರತಿವಾದಗಳ ನೆಸಗುತ್ತ ತಮ್ಮೊಳಗೆ । ಸೋದರರರು ಬಳಿಕೋರ್ವರೊಂದೊಂದು ದೆಸೆ ವಿಡಿದು। ಹೋದರಿತ್ತಲು ಬೇಟೆಗೆಂದೆನುತ ಬಳಿಕಿತ್ತ ಮಡದಿಯನ್ನೊಡಗೂಡುತ॥ ಆದಿನಾರಾಯಣಂ ಅರ್ಕಪುಷ್ಕರಿಣಿಯೊಳು। ಸಾದರದಿ ಮಿಂದು ನಾರದಮುನಿಪನರುಹಿದಗ। ಆದಿವ್ಯಕ್ಷೇತ್ರಗಳ ತೀರ್ಥಗಳನೊಂದೊಂದ ತೋರುತ್ತ ಮುಂಬರಿದನು ॥1॥

ರಾಗ ಸುರುಟಿ ಏಕತಾಳ

ಇತ್ತನೋಡೆ ರಮಣಿ। ಶೋಭಿಪ। ತೀರ್ಥವಿದು ದ್ಯುಮಣಿ॥ ಮತ್ತಿದು ವಾಯು ತೀರ್ಥವು ವಿಪ್ಪಲ । ತೀರ್ಥ ಅರುಣ, ನಳ । ತೀರ್ಥಸಪ್ತಾಶ್ವವು ॥1॥

ವಾಲಖಿಲ್ಯತೀರ್ಥ। ನೋಡಿದು। ಮೇಲೆ ಅಪ್ಸರ ತೀರ್ಥ ॥ ಶೀಲೆ, ವಿಭೀಷಣ। ಭಾರ್ಗವತೀರ್ಥವು ಭಾಳಪ್ರಮುಖನವ । ತೀರ್ಥಗಳಿಲ್ಲಿ ॥2॥

ಅಂಗನೆನೋಡಲ್ಲಿ। ಆಚತು। ರ್ಲಿಂಗಕೌತುಕವಿಲ್ಲಿ॥ ಹಿಂಗದೆ ಓಂಕಾ। ರೇಶ್ವರ, ಕೃತ್ತಿವಾ । ಸೇಶ್ವರ, ಮಧ್ಯಮೇಶ್ವರ । ತ್ರಿಕಾಲೀಶ್ವರ ॥3॥

ಭಾಮಿನಿ

ನಾಗವೇಣಿಯೆ ನೋಡು ಅಂಬಿಕೆ। ಯೋಗಿನೀ ಕಾವೇರಿ, ದುರ್ಗೆಯು। ಮೇಗೆ ಅನ್ನಪೂರ್ಣೇಶ್ವರಿಯು ದೇವತೆಗಳೈದಿಂತು ॥ ಆ ಗಣಗಳ್ ಭೈರವ ವಿನಾಯಕ। ನೀ ಗವುನಿಸೌ ದಂಡಪಾಣಿಯು । ಈಗ ನಂದೀಶ್ವರನು ಕೀರ್ತಿ ಮುಖಾಖ್ಯನೆಂಬವರು ॥1॥

ನಂದಿ ಭೃಂಗೀ ಪಳಸ್ಥಳವು ಇದು । ಮುಂದದೋ ಕಾವೇರಿ ತೀರ್ಥವು । ಮಂದಗಾಮಿನಿ ಕೇಳು ಪುಣ್ಯಪ್ರದವು ಈ ಜಲವು॥ ಎಂದೆನಲು ನಾವೀ ನದಿಯೊಳಿಳಿ। ದಂದದಿಂ ಜಲಕೇಳಿಯಾಡುವ। ಚಂದದಿಂದಲಿ ಮತ್ಸ್ಯರೂಪದೊಳೆಂದಳಾದೇವಿ ॥2॥

ಕಂದ

ನುಡಿಗೊಪ್ಪುತ ಶ್ರೀಕಾಂತಂ । ತಡಿಯೊಳು ಕಾವಲಿಗೆ ನಿಲಿಸುತ ಸುದರ್ಶನನಂ। ಮಡದಿಯೊಡನೆ ಜಲಕೇಳಿಗೆ। ತೊಡಗಿದ ಜಗದೊಡೆಯನಧಿಕ ಸಂತಸದಿಂದಂ॥1॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಮುನಿಸತಾಳ್ದಣ್ಣ ನೊಳು ಬಳಿಕಾ । ದನುಜೆ ತಾನೇ ಬೇಟೆಯಾಡುತ । ವನದೊಳಂದಾ ಮತ್ಸ್ಯಮುಖಿತಾ ಘನಹರುಷದಿ ॥1॥

ಸಿಕ್ಕಿದಾವ್ಮೃಗಗಳನು ಬಿಡದತಿ । ಸೊಕ್ಕಿನಿಂ ಕೈಯ್ಯಾಯುಧದಿ ಬಡಿ । ದಿಕ್ಕಿಹುಲ್ಲೆಯಮರಿಗಳನು ತಾ । ಮುಕ್ಕುತಾಗ ॥2॥

ಸುತ್ತಿಕಾಂತಾರವನು ಬಳಿಕ ಮುಂ । ದೊತ್ತಿಬಂದಳು ಅರ್ಕಕ್ಷೇತ್ರಕೆ । ಮತ್ತೆ ಕಾವೇರಿಯೊಳು ಕಂಡಳು । ಮತ್ಸ್ಯಯುಗವ ॥3॥

ರಾಗ ನವರೋಜು ಏಕತಾಳ

ಆಡಿದವೂ ಮೀನುಗಳು। ಜಲ। ಕ್ರೀಡೆಯ ಕಾವೇರಿಯೊಳು॥ ರೂಢಿಯಜನರಂ। ತಾಡುತಲೋಡುತ । ತೀಡುತ ದೇಹವ । ತಾಡನ ಗೈಯುತ ॥1॥

ಬಾಲದಿ ನೀರನು ಚಿಮ್ಮಿ । ಮುಳು । ಗೇಳುತ ಸಂತಸಹೊಮ್ಮಿ ॥ ಶ್ರೀಲಕ್ಷ್ಮಿವರ।ಭೂಲೋಕದ ನರ । ಜಾಲದತೆರಶರ । ಕೇಳಿಯೊಳಂದು ॥2॥

ಭಾಮಿನಿ

ಮತ್ಸ್ಯಯುಗ್ಮದ ನೀರಿನಾಟವ। ಮತ್ಸ್ಯಮುಖಿ ಕಂಡಾಗತನ್ನೊಳು। ಮತ್ಸ್ಯಕೇತನ ಬಾಣಕಳುಕುತ ನೋಡುತತ್ತಿತ್ತ ॥ ಮತ್ತೆ ತೀರದಿ ಕಂಡಳಸುರೆಯುನಿತ್ತು ಕೊಂಡ ಸುದರ್ಶನನ ಬಳಿ । ಕುತ್ಸಹದಿ ಬಳಿಗೈದಿ ಪೇಳಿದಳಂದು ಮನದಿರವ ॥1॥

ರಾಗ ಏಕತಾಳ

ಪರಮಪುರುಷ । ಕರವ ಮುಗಿವೆ । ಹರುಷದಿಂದಲಿ ॥ ಇರಿಸು ಕೃಪೆಯ । ನೆನ್ನಮೇಲೆ ಕರುಣದಿಂದಲಿ ॥1॥

ನೋಡು ಜಲದಿ। ಕ್ರೀಡಿಪಂಥ। ಜೋಡಿ ಮತ್ಸ್ಯದ॥ ಮೋಡಿಯನ್ನು। ಮಾಡಿಮನಕೆ ನೀಡುತಿವೆ ಮುದ ॥2॥

ಮೌನವೇಕೆ। ಮೀನಕೇತ। ಬಾಣವೆಸೆದನು॥ ನೀನು ಮನವ। ತಣಿಸು ಬಾಬಾ। ನಾನು ಸಹಿಸೆನು ॥3॥

ರಾಗ ಭೈರವಿ ಅಷ್ಟತಾಳ

ಮರುಳರಂದದಿ ಸುಮ್ಮನೆ । ಹರಟಲೇಕೆ । ದುರುಳೆ ನೀನಡೆ ಘಮ್ಮನೆ ॥ ಬರಿದಿಲ್ಲಿನಿಂದರೆ । ಪರಿಣಾಮ ಬೇರಪ್ಪು । ದರಿತುಕೊಂಬುದು ಮನದಿ ॥1॥

ಒಲಿದುಬಂದಿಹ ಹೆಣ್ಣನು । ಯಾರಾದರು । ಸಲೆತಿರಸ್ಕರಿಪರೇನು ॥ ನಲವಿಂದಕಾಮನ ಕೊಳುಗುಳ ಗೈದಿಷ್ಟ। ಸಲಿಸುನೀ ಬೇಗೆಂದಳು ॥2॥

ವ್ಯರ್ಥಹಂಬಲಿಸಲೇಕೆ । ನಿನ್ನಯಈಪ್ಸಿ । ತಾರ್ಥ ದೊರಕದು ಜೋಕೆ ॥ ಹೊತ್ತುಕಳೆಯಬೇಡ । ಧೂರ್ತೆ ಪೋಗಿಲ್ಲಿಂದ । ಮತ್ತಿಲ್ಲಿಬಾರದಿರು ॥3॥

ನೀನೊಬ್ಬ ಮಡಿವಂತನೆ। ಅಲ್ಲದಡೆ ಆ। ವಾನರ ಹನುಮಂತನೆ॥ ತಾನೊಲಿದೈತಂದ ಮಾನಿನಿಯನು ಬಿಡ । ಲಾನದ ಸಹಿಸಲುಂಟೆ ॥4॥

ಎಂದಾದುರುಳೆ ಯಾಕ್ಷಣ। ಹತ್ತಿರಕೆ ಐ। ತಂದಾ ಸುದರ್ಶನನ॥ ಚಂದದೊಳಪ್ಪಿ ಆ । ನಂದ ಪಡೆವೆನೆಂದು । ಮುಂದುವರಿಯೆ ಶರಣ ॥5॥

ಭಾಮಿನಿ

ಧೂರ್ತೆ ಮುಟ್ಟದಿರೆಂದು ರೋಷದಿ। ಕತ್ತರಿಸಿದನು ಕರಗಳೆರಡನು। ದೈತ್ಯಕನಲುತ ಲೊದೆಯೆ, ಸಹಿಸದೆಯಾ ಸುದರ್ಶನನು ॥ ದುಷ್ಟೆ ನಿನ್ನ ಮೇಲೇಕೆ ಕರುಣೆಯ। ಧಾತ್ರಿಭಾರಳೆತೊಲಗೆನುತ್ತಲಿ। ಮತ್ತೆ ಕೊರಳನ್ನರಿವೆನೆನೆ ಕೇಳಿತುನಭೋವಚನ ॥1॥

ಕಂದ

ಪುಣ್ಯಕ್ಷೇತ್ರದೊಳೇತಕೆ। ಹೆಣ್ಣಿನಕೊಲೆಗೈವೆ ಸಲ್ಲದೀಕಾರ್ಯಮೆನಲ್ ॥ ಮಿಣ್ಣನೆಪೊರಡೆನಲ್ ರಕ್ಕಸಿ। ಯಣ್ಣನಿಗಿದನೊರೆವೆನೆಂದು ಶೋಕಿಸುತೈದಲ್ ॥1॥

ರಾಗ ಮುಖಾರಿ ಏಕತಾಳ

ಬಂದ ಬೇಟೆಯ ನಾಡುತಾಗ। ರಕ್ಕಸರಾಯ। ಬಂದ ಬೇಟೆಯ ನಾಡುತಾಗ॥ ಅಂದಾ ಶಬರರ। ನೊಂದು ಗೂಡಿಸುತಲಿ। ಹಂದಿಕಾಡ್ಗೋಣಗ। ಳೊಂದನು ಬಿಡದೆ॥1॥

ಇಕ್ಕಿಬಲೆಯ ಸೆರೆವಿಡಿದು। ಪ್ರಾಣಿಗಳನ್ನು। ಪಕ್ಷಿಗಳನು ಸಹ ಬಡಿದು॥ ಮಿಕ್ಕಿದ ತೋಷದಿ। ಘೋಷದಿ ವಿಪಿನದಿ। ಸೊಕ್ಕಿಉಲಿವ ಮೃಗ। ಜಾಲವ ತರಿದು ॥2॥

ಭಾಮಿನಿ

ಇಂತು ಬೇಟೆಯನಾಡಿ ಬಾಧಿಪ। ದಂತಿಗಳ ಸಹ ಕೆಡಹಿ ದಣಿಯುತ। ನಂತರದಿ ನೀರ್ಗುಡಿದು ಹೆಮ್ಮರದಡಿಯ ಸಾರುತ್ತ॥ ಕುಂತಿರಲು ತುಸು ಸಮಯ ತಾ ವಿ। ಶ್ರಾಂತಿಗೆನ್ನುತಲಾಗ ಕೇಳಿತ। ನಂತದೂರದಿ ಬೊಬ್ಬಿಡುವ ಸ್ತ್ರೀರೋದನ ಧ್ವನಿಯು॥1॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಭರದಿಕೇಳುತ್ತ ದಾನವನು। ಸೋ। ದರಿಯ ಕೂಗೆಂಬುದರಿತನು॥ ಚರರನಟ್ಟು ತಲತ್ತ ಬೇಗ। ಕರೆ। ತರಿಸಿದ ಮತ್ಸ್ಯಮುಖಿಯ ಬಳಿಗಾಗ ॥1॥

ತುಂಡಾದ ಕೈಗಳ ನೋಡಿ। ಖಳ। ಕೆಂಡಕಾರಿದನು ರೇಗಾಡಿ॥ ಖಂಡಿಸಿದವನಾರು ಪೇಳು। ರುಂಡ। ಚೆಂಡಾಡುವೆನು ಧೈರ್ಯತಾಳು ॥2॥

ವಾರ್ಧಿಕ

ಬೇಡನೀಬೇಟೆಗೈದುವುದೆನುತಲೆನಗೆನೀ । ನೀಡಿದುಪದೇಶವಮಂ ಮರೆತಹಂಕೃತಿಯಿಂದ। ಕಾಡೊಳೊಬ್ಬಳೆಯಲೆದು ಕೆಲ । ಮೃಗಗಳಂ ಕೊಂದುಸಾಗೆ ಕಾವೇರಿಜಲದಿ ॥ ರೂಢಿಗೇ ಪೊಸತೆಂಬ ಪರಿಯಲ್ಲಿ ಮತ್ಸ್ಯಗಳು । ಕ್ರೀಡಿಸುತ್ತಿಹ ದೃಶ್ಯಮಂ ಪಾರವಶ್ಯದೊಳ್। ನೋಡುತಿರಲಲ್ಲಿ ಗೈತಂದ ಪರಿಚಿತನೋರ್ವ ಕರಗಳಂ ಖಂಡಿಸಿದನು ॥1॥

ಕಂದ

ಸೋದರಿಯೆಂದುದ ಕೇಳ್ದತಿ। ಕ್ರೋಧದಿ ಪಲ್ಗಡಿದು, ಗೈವೆ ಶಾಸ್ತಿಯನೆನುತಂ॥ ಆದನುಜಂಪುರಕೆಲ್ಲರ । ನೈದಿಸಿ ಕಾವೇರಿ ತೀರ್ಥದೆಡೆಗೈತಂದಂ ॥1॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ನೋಡಿದನು ತೀರದೊಳು ನಿಂದಾ । ಕ್ರೀಡಿಸುವ ಮತ್ಸ್ಯಗಳ ಸೊಬಗನು । ಗಾಢಕೌತುಕದಿಂದ ಸಂತಸ । ಗೂಡಿಮನದಿ ॥1॥

ಪೊಡವಿಗಚ್ಚರಿಯೆನಿಪ ಮೀನ್ಗಳ। ಪಿಡಿದು ಕೊಂಡ್ಯೊದಪೆನೆನುತ ಖಳ। ನೊಡನೆ ಜಲಕಿಳಿಯಲು ಸುದರ್ಶನ । ತಡೆದನವನ ॥2॥

ನಿಲ್ಲುನಿಲ್ಲೆಲೊ ನೀರಿಗಿಳಿಯದಿರ್। ಖುಲ್ಲಸಾಹಸಬೇಡಬರಿದೇ। ಇಲ್ಲಿಮತ್ಸ್ಯವ ಪಿಡಿಯಲೆಳಸಲು । ಕೊಲ್ವೆಧಿಟವು ॥3॥

ಎನ್ನತಡೆವವರಾರು ಕಾಣುವೆ। ನಿನ್ನ ಪರಿಚಯವರಿಯೆ ಕೊಟ್ಟರೇ। ಉನ್ನತದ ಈ ಪಾರುಪತ್ಯವ। ನನ್ನಿಯುಸುರು ॥4॥

ದೇವನಾಜ್ಞೆಯೊಳೀತಟದಿನಾ । ಕಾವಲಾಗಿಯೆ ಇರುವೆ ಸತ್ಯವು । ಯಾವ ಕಾರಣಕಾಗಿ ಬಂದೆಯೊ । ಸೋವನರುಹು ॥5॥

ರಾಗ ಮಾರವಿ ಏಕತಾಳ

ಆದರೆಕೇಳ್ಳೈ। ಸೋದರಿಮತ್ತೀ। ಹಾದಿಯೊಳೈ ತಂದು॥ ಮೋದದೊಳಿರೆ ಕರ। ಛೇದಿಸಿದಧಮನ । ಕಾದುರುಳಿಸಬಂದೆ ॥1॥

ಒಳಿತಾಯ್ತಯ್ಯದು। ರುಳೆಯನ್ನೀಪರಿ। ಇಳೆಯೊಳಗಲ್ಲಲ್ಲಿ॥ ಅಲೆಯಲು ಬಿಟ್ಟಿಹ ಖಳ ನಿನಗಿಲ್ಲವೆ । ತಿಳುವಳಿಕೆಯದರುಹು ॥2॥

ನೀರಿನಾಟವಕಾ । ವೇರಿಯೊಳೀಕ್ಷಿಸಿ । ತೀರದಿ ನಿಂದಿರ್ದ ॥ ನಾರಿಯಕೈಗಳ। ನಾರುಖಂಡಿಸಿದರು । ಭೋರನರುಹುಮತ್ತಾ ॥3॥

ಪರಪುರುಷನ ಮೇಲ್ । ಸ್ಮರತಾಪದಿ ಬಂ। ದೆರಗಿದ ಕಾಮಿನಿಯ ॥ ಕರಗಳ ನಾ ತುಂ । ಡರಿಸಿದೆನ್ನೈನಿಜ । ಹರಣವುಳುಹಿದರಿಯ ॥4॥

ರಾಗ ಅಷ್ಟತಾಳ

ಪೋರಸಿಕ್ಕಿದೆಯೆನ್ನ ಕೈಗೆ । ಮತ್ತಿ । ನ್ನಾರು ರಕ್ಷಣೆಯೀವರ್ನಿನಗೆ ॥ ನಾರಿಯ ಕರಗಳ ನಾರಿಲ್ಲವೆಂದು ನಿ । ವಾರಿಸಿಮೆರೆದಿಹ । ಪೌರುಷವಂತನೆ ॥1॥

ಕೊಲುವೆನೀಕ್ಷಣ ನಿನ್ನ ನಾನು । ಕರೆ । ತಲೆಗಾವಭಟರಿರ್ದರಿನ್ನು ॥ ಲಲನೆಯ ಸುಮ್ಮನೆ ಬಳಲಿಸಿದಂತಲ್ಲ। ಕಲಿಗಳೊಡನೆ ಹೋರ್ವ । ಕಲಹದಧಟತೋರೊ ॥2॥

ಬರಿದೆ ಬಾಯಬಧ್ರ ವೇಕೊ । ಭುಜ । ಸಿರಿಯಿರಲದನು ಕಾಣುವೆ ಮಾತು ಸಾಕೊ॥ ಅರಿಯದೆ ನಿಜಸ್ಥಿತಿ । ದುರುಳೆದೂರಿದಳೆಂದು । ಭರದೊಳಿಲ್ಲಿಗೆ ಬಂದು। ಧುರ ಕಿದಿರಾದೆಯ॥3॥

ಕಂದ

ಪರಿಕಿಪೆ ಸಹಸವ ನೆನುತಂ। ಪರಿಪರಿಹೋರಾಟವೆಸಗಿ ಬಳಿಕಾದೈತ್ಯಂ ॥ ಭರದಿಂ ಶಕ್ತಿಯೊಳಿಡಲವ । ತರಹರಿಸುತಲೊರಗೆ ಕರ್ಕಟಾಸುರ ಬಳಿಕಂ ॥1॥

ರಾಗ ಶಂಕರಾಭರಣ ತ್ರಿವುಡೆತಾಳ

ಭಳಿರೆಯೆನ್ನನು ತಡೆವರಾರೀ । ಜಲದೊಳಿಹ ಮತ್ಸ್ಯಂಗಳ ॥ ನಲವಿನಿಂ ಕೊಂಡೊಯ್ವೆ ನೀಕ್ಷಣ । ನಿಳಯಕೆನುತ ॥1॥

ನೀರಿಗಿಳಿಯಲು ಕಂಡು, ಲಕ್ಷ್ಮಿಯು ನೀರಗದನೂ ಸೂಚಿಸೇ ॥ ಮಾರು ವೇಷವ ತೊರೆದು ನಿಜ ಸಾ ಕಾರದಿಂದ ॥2॥

ಒರಗಿದಾ ಸುದರ್ಶನನ ನಿಜ । ಕರದಸ್ಪರ್ಶದೊಳೆಬ್ಬಿಸಿ ॥ ದುರುಳನಿದಿರೊಳು ಬಂದು ನಿಂದ ಶ್ರೀ । ವರನು ನಗುತ ॥3॥

ಯಾರು ನೀನೀ ಜಲದೊಳೀಪರಿ। ಮಾರುವೇಷ ದೊಳಿರುತಿಹ॥ ಕಾರಣವದೇನರು ಹೆನುತ ಖಳ । ನಾರು ಭಟಿಸೆ ॥4॥

ರಾಗ ಕೇದಾರಗೌಳ ಝಂಪೆತಾಳ

ಬರಿದೆ ಬೊಬ್ಬಿಡುವೆಯೇಕೋ । ನಾನು ಶ್ರೀ । ಹರಿಯೆಂಬುದನ್ನರಿತುಕೋ ॥ ವರಕ್ಷೇತ್ರ ಸಂದರ್ಶನ । ಗೈಯ್ಯೆಬಂ । ದಿರುವೆನಿವನೇ ಸುದರ್ಶನ ॥1॥

ಲೇಸು ಲೇಸಯ್ಯಕಾರ್ಯ । ಈತನೆ । ನ್ನಾಸಹೋದರಿಯ ಕೈಯ್ಯ ॥ ಮೋಸದಿಂತರಿದಿರುವನು । ಇವನನಾ । ಘಾಸಿಗೊಳಿಸದೆ ಪೋಗೆನು ॥2॥

ಅರಿತಿರುವೆ ವಿಷಯಂಗಳ। ನಿನ್ನಸೋ। ದರಿಯ ದುಷ್ಕಾರ್ಯಂಗಳ॥ ಸರಿಯಾದ ರಕ್ಷೆಕೊಡದೇ । ಹೆಣ್ಣನೀ । ಪರಿಯಲೆಯ ಲೇಕೆಸಗಿದೆ ॥3॥

ಎನ್ನಕೇಳುವರೆನೀನು । ಅಷ್ಟು ಚೈ । ತನ್ಯಹೊಂದಿರುವೆಯೇನು ॥ ಬಣ್ಣನೆಯ ಮಾತುಬೇಡ ನಾನು ಮು । ಕ್ಕಣ್ಣಪದ ಶರಣನೋಡ ॥4॥

ಮೂರು ಮೂರುತಿಗಳಲ್ಲಿ। ನಾನೊಬ್ಬ। ನಾರಾಯಣನು ನೀ ತಿಳಿ॥ ಪೌರುಷದ ನುಡಿಯು ಬೇಡ । ಕಾಲ್ಗೆರಗಿ । ಸಾರು ನೀನತ್ತಮೂಢ ॥5॥

ವಾರ್ಧಿಕ

ಶರಣೆನ್ನುವುದು ಶೂಲಧರಗೆ ಮೇಣ್ ಚರಣಗಳಿ । ಗೆರಗುವುದು ಗುರುಹಿರಿಯರಿಗೆ ಮಾತ್ರವೆಂಬುದ। ನ್ನರಿತುಕೊಳ್ಳೆಂದೆನುತ ವಿವಿಧಾಯುಧಗಳಿಂದ ಮಾರಾಂತು ಹೋರಾಡಲು। ಹರಿಯುಗ್ರದಿಂ ಮುಷ್ಟಿಯಿಂದಲಾದಾನವ । ಶಿರಕೆಪ್ರಹಾರಮನ್ನೆಸಗೆ ಹಾಯೆಂದೆನುತ । ಧರೆಗೊರಗಿ ಮಗುಳೆದ್ದು ಶ್ರೀಧವನ ಮಂಗಳಾಕಾರಮಂಕಂಡು ಮಣಿದ ॥1॥

ರಾಗ ನೀಲಾಂಬರಿ ರೂಪಕತಾಳ

ಜಯ ಜಯ ಜಯ ನಾರಾಯಣ । ಜಯ ಜಯ ಪತಿತೋದ್ಧಾರಣ । ಜಯ ಜಯ ಜಯ ಜಗತ್ಕಾರಣ । ಜಯ ಜಯ ಶ್ರೀರಮಣ ॥

ಜಯ ಜಯ ವರ ಶುಭದಾಯಕ । ಜಯ ಜಯ ದಿವಿಜ ಸಹಾಯಕ । ಜಯ ಜಯ ಮೋಕ್ಷ ಪ್ರದಾಯಕ । ಜಯ ಮುನಿನುತ ಚರಣ ॥1॥

ಅರಿಯದೆ ನೀನಾರೆಂಬುದ । ಪರಿಪರಿಯಲಿ ಮಾತಾಡಿದೆ । ಕರುಣಾಕರ ನೀ ದಯವ ನ್ನಿರಿಸುತ ಮನ್ನಿಪುದು ॥

ಮೆರೆವೀ ಜಲದೊಳು ಶಿಲೆಯಾ। ಗಿರುವಂದ ದೊಳನು ಗ್ರಹಿಸುತ। ಪರಮಪುರುಷ ಈ ಜನ್ಮವ । ನೆರೆ ಸಾರ್ಥಕಗೊಳಿಸು ॥2॥

ಭಾಮಿನಿ

ಮಾಧವನೆ ಗತಿದೋರೆನುತ ಸಿರಿ । ಪಾದದೊಳು ಕಂಬನಿಯಸುರಿಸುತ । ಲಾದನುಜ ಪೊರಳುತಿರೆ ಸಂತೈಸುತ್ತಲನುಗ್ರಹಿಸಿ॥ ಈ ಧರೆಯೊಳ್ತಾ ಮತ್ಸ್ಯಮಾಧವ। ನಾದೆ ಲಕ್ಷ್ಮಿತ್ರ್ಯ ತೀರ್ಥ-ಮೇಣ್ ಕಲಿ । ಮಾಧವನು ತಾನಾಗಿ ನೆಲಸುವೆ ಭಕ್ತರಿಂಗಾಗಿ ॥1॥

ಕ್ಷಿತಿಯೊಳ್ಮುಂದಿನ್ ಮೂರು ದಿನಗಳು । ಅತಿಶಯದ ಹರಿದಿನಗಳಾಗಲಿ । ಸತತ ಮಾಘದ ಶುದ್ಧ ಅಷ್ಟಮಿಭೀಷ್ಮ ಅಷ್ಟಮಿಯು ॥ ಜತೆ ಜತೆಗೆ ಇಕ್ಕೆಲದಿ ಬಹುದಾ। ರಥಸಪ್ತಮಿಯೂ ಮಧ್ವನವಮಿಯು । ಹಿತದೊಳೀವ್ರತವಾಚರಿಸೆ ಶುಭವಹುದು ಸಕಲರಿಗೆ ॥2॥

ತಲೆಯುವೇಲಿನ್ನೇಳು ಎಕ್ಕೆಯ । ಎಲೆಗಳನ್ನಿರಿಸುತ್ತ ತೀರ್ಥದಿ । ಮುಳುಗಿಸ್ನಾನವನೆಸಗುವುದು ಅರುಣೋದಯದಿ ಬಳಿಕ ॥ ಜಲಜಸಖನಿಂಗರ್ಘ್ಯವೀಯುತ। ಲಲನೆಯರು ಸಹಿತೀವ್ರತಂಗಳ । ನಲವಿನಿಂ ಭಕ್ತಿಯೊಳು ನಡೆಸಲು ಸಕಲ ಶುಭವಹುದು॥3॥

ಪಾತ್ರವರ್ಗ

1. ಲಕ್ಷ್ಮಿ, 2. ನಾರಾಯಣ, 3. ನಾರದ, 4. ಸುದರ್ಶನ, 5. ಕರ್ಕಟಾಸುರ, 6. ವನಪಾಲಕ, 7. ಮತ್ಸ್ಯಮುಖಿ, 8. ಮತ್ಸ್ಯರೂಪಿ ಹರಿ, 9. ಮತ್ಸ್ಯರೂಪಿ ಸಿರಿ.

5. ಶಾಪ / ಪುನರ್ಜನ್ಮ

ರಾಗ ಸಾಂಗತ್ಯ ರೂಪಕತಾಳ

ಶ್ರೇಷ್ಠವಾಗಿರುವ ವಾ। ಸಿಷ್ಠಗೋತ್ರೋದ್ಭವ। ಋತ್ವಿಜ ನಾ ವಸುಂಧರನು ॥
ಕ್ರೋಷ್ಟುವೆನ್ನುವ ವಿಪ್ರ। ಪುತ್ರಿಯ ವರಿಸಿ ಸಂ। ತುಷ್ಟಿಯಿಂ ಬಾಳುತ್ತಲಿರಲು ॥1॥

ಹೆಣ್ಣಿನ ಜೀವನ। ಪೂರ್ಣವಾಗುವುದಂತೆ। ಚಿಣ್ಣರಹಡೆದು ಮುದ್ದಿಸಲು ॥
ಎನ್ನಲೇನ್ ಪಡೆದರು। ಪುಣ್ಯಹೀನರಿ ಗವ। ರನ್ನುಳಿಸುವ ಭಾಗ್ಯವುಂಟೆ ॥2॥

ಉದಿಸಿದ ಮಕ್ಕಳು। ವಿಧಿವಶರಾಗಲು। ಸುದತಿಕ್ರೋಷ್ಟುವುತಾ ಮೈದುನನ।
ಮೊದಲನೆ ಮಗಳನ್ನು। ಮುದದೊಳಾಮಿಷ ತೋರಿ। ಪದುಳದಿಂ ತಂದು ಸಾಕುತಿರೆ ॥3॥

ವಾರ್ಧಕ

ಹೆತ್ತ ತಾಯಿಯು ಬಂದು ಅಕ್ಕನೊಳು ತಾ ತನ್ನ। ಪುತ್ರಿಯನು ನೀಡೆಂದು ಬೇಡಿದರು ಕಾಡಿದರು। ಪುತ್ರರೆನಗಿಲ್ಲನಿನಗನ್ಯರಿಹರಲ್ಲ ತನಗಿವಳ ಕೊಡಬೇಕೆನ್ನಲು ॥
ಹೆತ್ತೊಡಲ ವೇದನೆಯ ನೀನರಿವೆಯೇಂ ಎನ್ನ। ಪುತ್ರಿಯನು ಸರ್ವಥಾ ಕೊಡೆನು ನೀ ಬಹಭವದಿ। ಮತ್ತೆ ಸಂತಾನಹೀನಳೆ ಆಗೆನುತ ಶಪಿಸಿ ನಂದನೆಯ ಕರೆತಂದಳು ॥1॥

ರಾಗ ಸೌರಾಷ್ಟ್ರ ಏಕತಾಳ

ತಂಗಿಯ್ಮೊದಳಕಟ ಸುತೆಯ। ರಾಮ ರಾಮ ॥ ನಾನು ಭಂಗಕೊಳಗಾದೆನಲ್ಲ। ರಾಮ ರಾಮ ॥ ಅಂಗನೆ ತಾ ಶಪಿಸಿದಳೆ। ರಾಮ ರಾಮ ॥ ಬದುಕಿ। ನಿಂಗಿತವು ವ್ಯರ್ಥವಾಯ್ತು ರಾಮ ರಾಮ ॥1॥

ಬರಿಯ ಬಾಳಿಗೇನು ಅರ್ಥ । ರಾಮ ರಾಮ ॥ ಮಕ್ಕ ।ಳಿರದ ಮನೆಗಳೇನು ಸಾರ್ಥ। ರಾಮ ರಾಮ ॥ ತೊರೆವೆನಸುವ ಹರಿಯ ನೆನೆದು । ರಾಮ ರಾಮ ॥ ಮುಂದಿ । ನಿರವ ದೇವನೊಬ್ಬಬಲ್ಲ । ರಾಮ ರಾಮ ॥2॥

ಭಾಮಿನಿ

ತರಳೆಯಿಪರಿಯಿಂದ ತಾ ನಿ । ರ್ಧರಿಸಿ ಅನ್ನಾಹಾರ ಜಲ ಸಹ । ತೊರೆದು ದುಗುಡದೊಳಸುವ ನೀಗಲು ಪತಿ ವಸುಂಧರನು ॥ ಮರುಗುತಲಿ ನಿಜಸತಿಯ ಮರಣೋ। ತ್ತರ ಕ್ರಿಯೆಗಳಂ ಮುಗಿಸಿ ಕೆಲದಿನ । ಸರಿಯೆ ವಿಧಿವಶನಾದ ಕೌತುಕವೇನನುಸಿರುವೆನು॥1॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕೀರ್ತಿಪಥವೆಂದೆಂಬ ಗ್ರಾಮದಿ । ಸ್ಮಾರ್ತಬ್ರಾಹ್ಮಣ ಕುಶಕರಾಖ್ಯದಿ । ಸ್ವಸ್ಥದಿಂದಿರುತಿರ್ದ ವಿಬುಧ ಸತ್ । ವೃತ್ತಿಯಿಂದ ॥1॥

ಮದುವೆಯಾದ ಪ್ರಸಂಜ್ಞೆಯೆನ್ನುವ । ಸುದತಿಯನು ಸತ್ಕುಲ ಪ್ರಸೂತೆಯ । ವಿಧಿವಿಹಿತದಿಂ ಹಿರಿಯರಾಶಿಷ । ಮೊದಗಿ ಬರಲು ॥2॥

ತಕ್ಕಸತಿ ತಾನಿರ್ದರೂ ಸಹ । ಮಕ್ಕಳಾಗದೆ ದಂಪತಿಗಳತಿ । ದುಃಖದಿಂದಿರುತಿರ್ದರ್ ವಿಧಿಯಿಂ । ತಿಕ್ಕೆಯೆನುತ ॥3॥

ರಾಗ ಕೇದಾರಗೌಳ ಅಷ್ಟತಾಳ

ಚರಿಸಿಸದ್ಧರ್ಮದಿ । ಒರೆಯುತ ಸತ್ಯವ । ಹರಿಯ ಸೇವಿಸುತಿರ್ದರು ॥ ದೊರೆಯದಿರಲು ಫಲ। ಅರಿಯದೆ ಮುಂದಣ। ಪರಿಯ ಯೋಚಿಸುತಿರಲು॥1॥

ಪರಮಮಹಿಮ ಋಷಿ। ವರ ಅಗಸ್ತ್ಯರು ಅಲ್ಲಿ। ಬರೆ ತಮ್ಮ ಭಾಗ್ಯವೆಂದು॥ ಕರೆತಂದು ನಿಳಯಕೆ । ವರದರ್ಭಾಸನವಿತ್ತು । ಪರಿಪರಿಯುಪಚರಿಸಿ ॥2॥

ಪಾದಪೂಜೆಯಗೈದು। ಮೋದದಿ ತೀರ್ಥವ। ನಾದಂಪತಿಗಳೀಂಟುತ ॥ ಹೇ ದಯಾನಿಧೆ ಜನ್ಮ ।ವಾದುದುಸಾರ್ಥಕ । ವೈಧನ್ಯರಾವೆನಲು ॥3॥

ಮುನಿವರ ಪೇಳಿದ। ನೆನಿತರ್ಚಿಸಿದರ್ ನಿಮ್ಮ। ಮನದಳಲಧಿಕವಿದೆ॥ ಅನುಮಾನ ಬಿಡಿಮುಂದೆ । ಅನುಭವಿಪಿರಿ ಸುಖ । ವೆನೆ ನುಡಿದಳು ಮುಗುದೆ ॥4॥

ಪರಮಪೂಜ್ಯರೆ ನಮ। ಗಿರುವುದೊಂದೇ ಚಿಂತೆ। ತರಳರು ಇಲ್ಲೆನುತ॥ ಪರಿಹಾರ ವೇನದ । ನರುಹ ಬೇಕೆನ್ನುತ । ಲೆರಗಲು ಮೌನಿನಾಥ ॥5॥

ವಾರ್ಧಕ

ಮನದಳಲು ದೂರವಹುದತಿ ಶೀಘ್ರದಲ್ಲಿ ನಿಮ । ಗನುಮಾನಬೇಡ ಪಿಂದಣ ಜನ್ಮದಲ್ಲೊರ್ವ। ವನಿತೆಶಪಿಸಿದುದರಿಂದಿಂತಾಯ್ತು. ಅರ್ಕ ಪುಷ್ಕರಿಣಿಕ್ಷೇತ್ರಕ್ಕೆ ಪೋಗಿ॥ ದಿನಕರನ ವ್ರತವ ಹನ್ನೆರಡು ಮಂಡಲವೆಸಗಿ। ಘನ ವಿಪ್ರರಿಗೆ। ದಾನ ದಕ್ಷಿಣೆಗಳನ್ನೀಯೆ। ತನಯ ರಹರೆನುತ ವಿಧಿಯನ್ನರುಹಿ ಪರಸುತಲಗಸ್ತ್ಯಮುನಿವರನೈದಲು ॥1॥

ರಾಗ ಕಾಂಬೋಧಿ ಝಂಪೆತಾಳ

ಋಷಿವಾಕ್ಯದಲ್ಲಿ ಭರ । ವಸೆಯಿಟ್ಟುದಂಪತಿಗಳ್ । ಬಿಸಜಬಾಂಧವನು ನಿರ್ಮಿಸಿದ॥ ಅಸಮಪುಷ್ಕರಿಣಿತಾ । ನೆಸೆವ ಕ್ಷೇತ್ರಕೆ ಬಂದು । ವ್ಯಸನದೂರನನು ಪ್ರಾರ್ಥಿಸುತ ॥1॥

ಮುನಿಪನೆಂದಂತೆ ಗೋ। ಮಿನಿಸುರರ ನರ್ಚಿಸುತ। ಮನದಭೀಷ್ಟಗಳ ಸಲ್ಲಿಸುತ॥ ದಿನಕರನ ವ್ರತವನ್ನು। ಅನುನಯದಿ ಪೂರೈಸಿ। ಘನ ತೋಷದಿಂದಲ್ಯೊರುತಿರಲು ॥2॥

ಹರಿಯೊಲುಮೆಯಿಂ ದಿವಾ। ಕರ ನನುಗ್ರಹದಿಂದ। ತರುಣಿ ತಾ ಪುತ್ರವತಿಯಾಗಿ॥ ಹರುಷದಿಂದಿರುತಿರ್ದ। ಪರಿಯಕೇಳುತ್ತ ಋಷಿ। ವರರು ತೋಷದೊಳಿರ್ದರಿತ್ತ ॥3॥

ಪಾತ್ರವರ್ಗ

1. ವಸುಂಧರ, 2. ಕ್ರೋಷ್ಟು 3. ಕುಮಾರಿ, 4. ಸೋದರಿ 5. ಕುಶಕರ, 6. ಪ್ರಸಂಜ್ಞೆ, 7. ಅಗಸ್ತ್ಯಋಷಿ

6. ಪ್ರಾಯಶ್ಚಿತ್ತ

ರಾಗ ಕೇದಾರಗೌಳ ಅಷ್ಟತಾಳ

ಮಲಯದೇಶದೊಳೋರ್ವ । ಮಲಯನೆಂಬವನು ಸ । ತ್ಕುಲದೊಳು ಜನಿಸಿರ್ದನು॥ ಕುಲವಧು ತನ್ನಯ । ನಿಲಯದೊಳಿರ್ದಾರು । ಬಲುನೀಚ ಸಂಸ್ಕಾರದಿ ॥1॥

ಮೂರು 'ಮ' ಕಾರವ। ಸೇರಿಸಿತನ್ನೊಳು। ಊರಿಗೆ ದುಷ್ಟನಾಗಿ॥ ಕಾರಣವಿಲ್ಲದೆ ನೀರೆಯಹೊಡೆದಟ್ಟಿ । ಕ್ರೂರಿ ತಾ ಮೆರೆದಿರಲು ॥2॥

ತನ್ನ ಸತಿಯ ಬಿಟ್ಟು । ಅನ್ಯನೊಬ್ಬನ ಕಾಂತೆ । ಯನ್ನು ತಾನಪಹರಿಸಿ ॥ ಅನ್ಯಾಯಗಾರನೆಂ । ದೆನ್ನಲು ಸಕಲರು । ಇನ್ನಲ್ಲಿ ನೆಲೆಯಿಲ್ಲದೆ ॥3॥

ಪರಸತಿಯನು ಜತೆ। ವೆರಸಿತನ್ನೂರಿಂದ। ಪೊರಟುಮೆಲ್ಲನೆ ಮಲಯ॥ ಇರುಳಲಿ ಕಾಡೊಳು । ತಿರುಗುತ ಲಿರಲಲ್ಲಿ । ಬರುತ ಕಂಡಾ ಚೋರರು ॥4॥

ರಾಗ ಪಂಚಾಗತಿ ಮಟ್ಟೆತಾಳ

ಯಾರೆಲಾ ನಮ್ಮೀ ವನಕ್ಕೆ। ನಾರಿಯನ್ನು ಕೂಡಿಕೊಂಡು। ಕಾರಿರುಳಿನಲ್ಲಿ ಬಂದ। ಕಾರ್ಯವೇನೆಲಾ॥ ಊರದಾವುದುಸುರು ಮತ್ತೀ। ಸಾರ ಸಾಕ್ಷಿಬಂಧುವೇ ನೀ। ಸಾರುಬೇಗ ಇವಳ ಬಿಟ್ಟು । ಪೋರಘಮ್ಮನೆ ॥1॥

ಎನ್ನ ಕೇಳ್ವರಾರು ನೀವು। ಕುನ್ನಿ ಚೋರರಂತೆ ಕಾಂಬು। ದಿನ್ನುಕಾಡ ಪಾರುಪತ್ಯ ಕೊಟ್ಟನಾವನು । ಎನ್ನಸತಿಯುಸಹಿತ ವಿಪಿನ । ವನ್ನು ತೋರಬಂದೆ ನೈಸೆ । ಮುನ್ನದಾರಿಬಿಡದಿರೀಗ । ಮಣ್ಣಗೂಡಿಪೆ ॥2॥

ಪರಿಕಿಸುವೆವು ಸತ್ವನಿನ್ನೊ। ಳಿರಲು ಕಾಂಬೆವೆನುತಲವರು । ಪರಿಪರಿಯೊಳು ಹೋರುತೊಡನೆ। ಕೆಡಹಿಮಲಯನ। ಕರಗಳನ್ನು ಲತೆಗಳಿಂದ। ಭರದಿಬಂಧಿಸುತ್ತ ಲೊದೆದು ಹೊರಳಿಸುತ್ತ, ಲೊಐದರಾಗ । ಸರಸಿಜಾಕ್ಷಿಯ ॥3॥

ರಾಗ ನೀಲಾಂಬರಿ ರೂಪಕತಾಳ

ಅಯ್ಯೊಮಾಡಲೇನು ಸತಿಯ। ಒಯ್ಯುತಿರುವ ಇಂಥಾಸ್ಥಿತಿಯ। ಕಯ್ಯಬಂಧಿ ಸಿರ್ಪಗತಿಯ। ಎನ್ನಲಾರಿಗೆ॥ ಹೊಯ್ಯುತೆನ್ನ ಕೆಡೆದರೆಂದು। ಬಯ್ಯುತವರ ಮಲಯ ನೊಂದು। ಸುಯ್ಯುತಾಗ ಬಳಲಿನೆಲದಿ। ಮೈಯ ಚಾಚಿದ ॥1॥

ವಾರ್ಧಕ

ಅಳುತಲ್ಲಿಕಂಗೆಟ್ಟು ದಾರಿಗಾಣದೆಬಿದ್ದು। ನೆಲದಿಚಿಂತಿಸುತಿರುವ ಮಾನವನ ಕಂಡಲ್ಲಿ ನೆಲಸಿಕೊಂಡಿಹ ಪಿಶಾಚಗಳಲ್ಲಿ ಗೈತಂದು ಯೋಜಿಸುತ ಕಾರ್ಯಂಗಳ॥ ಮಲಯನನೆಲ್ಲಾ ಬಂಧನದ ಹರಿದು ಬಟ್ಟೆಯಂ। ಕಳಚಿವಿಕಟಾಟ್ಟಹಾಸದಿ ಬೆದರಿಸುತ್ತಲ। ಟ್ಟಲು ದಿಗಂಬರನಾಗಿ ಕಂಡೆಡೆಯೊಳೋಡಿದಂ ಮತಿಭ್ರಾಂತನಾಗಿ ಬಳಿಕ ॥1॥

ರಾಗ ಏಕತಾಳ

ಮರುಳುಗಡಣ ಓಡಿಸುತ್ತ। ಲಿರಲು ಮಲಯಕಂಡ ಕಡೆಗೆ। ಮರುಳನಂತೆ ಸಾಗುತಾ ಪು। ಷ್ಕರಿಣಿಕ್ಷೇತ್ರಕೆ॥ ವರಮುನೀಂದ್ರ ಪೈಲ ನಡಿಗೆ। ಎರಗಿರೋದಿಸಲ್ಕೆ, ಕರುಣ। ವಿರಿಸಿಯರಿದು ವಿಷಯಗಳನು। ಮನ್ನಿಸುತ್ತಲಿ ॥1॥

ರಾಗ ಕೇದಾರಗೌಳ ಅಷ್ಟತಾಳ

ಮಲಯನೆಬಾರಿಲ್ಲಿ। ತಿಳಿದಿಹೆವಿಷಯಂ। ಗಳನೆಲ್ಲ ಮರುಗದಿರು ॥ ಜಲಜಸಖಾರ್ಚನೆ ತಳುವದೆಗೈದರೆ। ಕಳೆವವು ದುರಿತಗಳು ॥1॥

ಸೂರ್ಯೋಪಾಸನೆಯಿಂದ। ಘೋರಪಾಪಗಳೆಲ್ಲ। ಜಾರಿ ಸಂಪದವಹುದು ॥ ಭೂರಿ ಭಕ್ತಿಯೊಳ್ ನೆರ। ವೇರಿಸೆಂದೆನೆ ಮನ। ಸಾರೆ ಶ್ರದ್ಧೆಯೊಳಾತನು ॥2॥

ಮುನಿಪನಾದೇಶದಿ। ದಿನಮಣಿಯರ್ಚನೆ। ಯನುದಿನಮಾಡಲಾಗಿ। ಘನಭಾಗ್ಯಪಡೆದವ। ನನುಭವಿಸುತ ಮೋಕ್ಷ। ವನು ಸಾರ್ದನಂತರದಿ ॥3॥

ಪಾತ್ರವರ್ಗ

1. ಮಲಯ, 2. ಪತ್ನಿ, 3. ಅನ್ಯಸತಿ, 4. ಚೋರರು, 5. ಪಿಶಾಚಿಗಳು, 6. ಪೈಲ ಮುನಿ, 7. ವಿಪ್ರರು.

7. ಮೋಕ್ಷಪ್ರಾಪ್ತಿ

ರಾಗ ಕಾಂಬೋಧಿ ಝಂಪೆತಾಳ

ಭೂವಲಯದೊಳಗೆಸೆವ। ಆ ವಂಗದೇಶದೊಳು। ತಾ ವಿಭವದಿಂದಲಿ ವಿಶೋಕ ಭಾವೆಸುಮತಿಯೊಳು ಪಡೆ । ದಿರ್ದನವಸುತೆಯರನು । ಓರ್ವ ನಂದನನನ್ನು ಬಳಿಕ ॥1॥

ಕೆಲಸಮಯ ಸಂತೃಪ್ತಿ। ಯಲಿಕಳೆಯೆ ಮತ್ತೆ ಬಾ। ಳಲು ಕಷ್ಟವಾಯಿತನುದಿನದಿ॥ ಬಲಿತಕುವರಿಯರ ಮುದ । ದಲಿ ಲಗ್ನವೆಸಗುವಡೆ । ಬಲು ತರದ ಅಡಚಣೆಗಳೊಡಗೆ॥2॥

ಕಂದ

ನಂದನೆಯರ ವೈವಾಹವ। ಮುಂದೆಸಗುವ ಬಗೆಯ ಕಾಣೆನೆನುತಿರಲಾಗಂ ॥
ಬಂದನು ಸಖತನ ನಟಿಸುತ । ಲಂದಾ ಭುವನೇಶನೆಂಬ ವಂಚಕನೋರ್ವಂ ॥1॥

ಭಾಮಿನಿ

ಅಪರಿಚಿತನನು ಕಂಡು ವಿನಯದೊ । ಳುಪಚರಿಸೆ ತಾನಧಿಕ ಕಪಟದಿ । ಕುಪಿತನಾಗದ ತೆರದಿ ಮಾತಾಡುತ ವಿಶೋಕನೊಳು ॥ ವಿಪುಲಧನದಾಸೆಯನು ತೋರುತ। ಗುಪಿತದಿಂ ಪುತ್ರಿಯರ ಬೇರೆಡೆ। ಚಪಲದಿಂಸಾಗಿಸುತ ವಿಕ್ರಯಿಸಲ್ಕೆ ನಿರ್ಣಯಿಸಿ ॥1॥

ರಾಗ ಮಧ್ಯಮಾವತಿ ತ್ರಿವುಡೆತಾಳ

ನಡೆಯಲವ ಬಳಿ ಕಾವಿಶೋಕನು । ನುಡಿದ ಪರಿಯಲಿ ಗುಟ್ಟಲಿ ॥ ಹಡೆದ ಪುತ್ರಿಯರನ್ನು ಒೖದಾ । ಧಡಿಗಗಿತ್ತು ॥1॥

ಅಧಿಕ ಧನಸಂಗ್ರಹಿಸುತವ ನಿಜ। ಸದನಕ್ಕೈತಂದಾಗಲು ॥ ಸುದತಿಯನು ಕರೆದೆಲ್ಲ ತೋರಲು । ಮುದವನಾಂತು ॥2॥

ಎಲ್ಲಿದೊರಕಿತು ಇಷ್ಟು ಸಂಪದ। ವೆಲ್ಲ ಕೌತುಕವೆನಿಪುದು॥ ಎಲ್ಲಿಹರು ಸುತೆಯರು ನಾ ಕಾಣೆನು । ನಲ್ಲ ಪೇಳು ॥3॥

ಮಂದಗಾಮಿನಿ ಚಿಂತೆಬೇಡೆಲೆ। ನಂದನೆಯರ ವಿಕ್ರಯಿಸುತ ॥ ತಂದೆ ಧನವನು ಭಾಗ್ಯವೀಪರಿ । ಬಂದುದೆನಲು ॥4॥

ಯಾಕೆ ಬಂತೀ ದುಷ್ಟಬುದ್ಧಿಯು । ಆ ಕುವರಿಯರ ಪಡೆದು ನಾ ॥ ಸಾಕಿದಕೆ ಲೇಸಾಯ್ತು ಧನದತಿ । ರೇಕ ದಾಹ ॥5॥

ಹೀನಕಾರ್ಯವ ಗೈದನಿಮ್ಮೊಡ । ನೇನು ಜೀವನ ನಡೆಸಲಿ ॥ ನಾನುತವರಿಗೆ ಪೋಪೆನೆಂದಳು । ಮಾನವಂತೆ ॥6॥

ವಾರ್ಧಕ

ಎಂದು ಪೊರಟೈದುತಿಹ ರಮಣಿಯಂ ಬೆನ್ನಟ್ಟು। ತಂದೆಳೆದು ತಂದು ಗೃಹ ಬಂಧನದೊಳಿಕ್ಕುತ್ತ । ಮಂದಮತಿ ಭುವನೇಶಸಖ್ಯದೊಳು ಸುತಗೆ ಸಿರಿವಂತರ ಕುರೂಪಿಸುತೆಯ॥ ಅಂದು ಲಗ್ನವನೆಸಗಿ ವಿಪುಲಧನ ಸಂಗ್ರಹಿಸಿ। ದಂದುಗಕ್ಕೊಳಗಾದ ಮಡದಿಯಂ ಹಿಂಸಿಸುತ॥ ಕೊಂದು ಕಳೆಯುತ ಧೂರ್ತ ಸ್ನೇಹದಿಂ ಕೆಲಗಾಲ ಮೆರೆದಿರ್ದನಾ ದುಷ್ಟನು ॥1॥

ರಾಗ ಕೇದಾರಗೌಳ ಅಷ್ಟತಾಳ

ಧರಣಿಮೆಚ್ಚದರೀತಿ । ಪರಿ ಪರಿ ದೌಷ್ಟ್ಯವ । ದುರುಳ ಸಖನ ಕೂಡುತ ॥ ನಿರತ ವಿಶೋಕನು । ವಿರಚಿಸಲ್ ಗತಿಸಿದ । ಹಿರಿಯರ ಚೇತನಗಳ್ ॥1॥

ಅನುದಿನವೈತಂದು । ಮನೆಮಂದಿಯನ್ನೆಲ್ಲ । ಘನತರಬಾಧಿಸಲು ॥ ಅನಿತರೊಳ್ಸಖನ ಸೂ । ಚನೆಯಂತೆ ಮಂತ್ರೋಪಾಸನೆಯನು ನಿರ್ಧರಿಸಿ ॥2॥

ಊರೊಳಗೇ ವಾಮಾ । ಚಾರದಿ ಪಳಗಿದ । ಕ್ರೂರಿಗಜಾಸ್ಯನನ್ನು ॥ ಭೋರನೆ ಕರೆಸುತ। ಪಾರನಿವೃತ್ತಿಯ ಬೇರೆ ಬೇರೆಸಗಿಸಲು ॥3॥

ರಾಗ ಅಷ್ಟತಾಳ

ಬಂದನಾ ಮಂತ್ರವಾದಿ । ಸರ್ವರಕಷ್ಟ । ದಂದುಗದೂರಮಾಡಿ ॥ ಮುಂದೆ ನಿರ್ಭಯವಮಾಳ್ಪೆ ಇಂದು ಶೇಖರನೊಲ್ಮೆ । ಯಿಂದ ಸಾಧಿಪೆಕಾರ್ಯ । ವೆಂದುತಾನುಲಿಯುತ ॥1॥

ಭೂತ ಪ್ರೇತಗಳನೆಲ್ಲ । ಬಂಧಿಸಿ ಯಮ । ಯಾತನೆ ಪಡಿಸಿ ಖುಲ್ಲ ॥ ಜಾತಿ ಪಿಶಾಚಿಯ ನಾತೀರ್ಚುತಲಿ ನಿಮ। ಗಾತು ಕೊಂಡಿಹ ಬಾಧೆ। ಯಾ ತೀರ ದಮನಿಪೆ ॥2॥

ಶಂಭೋಶಂಕರಯೆನ್ನುತ। ತನ್ನೊಳುತಾನೇ। ಜಂಭದ ನುಡಿಯಾಡುತ ॥ ಸ್ತಂಭನ ಗೈವೆ ನೆಂ । ದೆಂಬಾಗ ಪ್ರೇತಗಳ್ । ಬೆಂಬಿಡದಟ್ಟೆ ಭ । ಯಂಬಡುತೋಡಿದ ॥3॥

ರಾಗ ಸಾಂಗತ್ಯ ರೂಪಕತಾಳ

ಎಷ್ಟು ರೀತಿಯೊಳು ನಿ । ವೃತ್ತಿಯ ಗೈದರು । ಮತ್ತೆ ಪಿತೃಗಳು ಆಗಮಿಸಿ ॥ ನಿತ್ಯಪೀಡಿಸೆ ಭಯ । ವೆತ್ತು ಆ ಮನೆಯನೆ । ಬಿಟ್ಟು ಪೋದರು ಬಲುದೂರ ॥1॥

ಎತ್ತಲೈದಿದರು ಆ । ದುಷ್ಟರು ಗೈದಿರ್ದ । ಕೆಟ್ಟ ಕಾರ್ಯದ ಫಲವೆಲ್ಲ ॥ ಮತ್ತೆ ಬಾಧಿಸಲು ಕಂ । ಗೆಟ್ಟು ವಿಬುಧರೊಳ್ ನಿ । ವೃತ್ತಿಯ ಕೇಳಿದ ಖುಲ್ಲ ॥2॥

ವಾರ್ಧಕ

ಒರೆದರಾ ಜೋತಿಷ್ಕರಪರಿಮಿತ ಪಾಪಗಳ । ಹೊರೆಯಿಹುದು ನೀನಾರ್ಜಿಸಿದ ಸಕಲ ದ್ರವ್ಯಗಳ । ಮರುಗದೇ ದೀನರ್ಗೆ, ವಿಪ್ರರ್ಗೆ, ದಾನಗಳನಿತ್ತು ಅರ್ಕಕ್ಷೇತ್ರದಿ ॥ ಸರಸಿಜಾಪ್ತನ ಸೇವೆಯನವರತವೆಸಗುತ್ತ । ಲಿರಲು ನಿನ್ನಘದೂರವಪ್ಪುದೆನಲದರಂತೆ। ತೆರಳಿಯಾಅರ್ಕಪುಷ್ಕರಿಣಿ ಕ್ಷೇತ್ರದಿನೆಲಸೆ ಕೊನೆಗೆ ಮುಕುತಿಯನು ಪಡೆದ ॥1॥

ಪಾತ್ರವರ್ಗ

1. ವಿಶೋಕ, 2. ಸುಮತಿ, 3. ನವಕನ್ಯೆಯರು, 4. ಭುವನೇಶ, 5. ಮಗ, 6. ಸೊಸೆ, 7. ಮಂತ್ರವಾದಿ ಗಜಾಸ್ಯ, 8. ಪಿಶಾಚಿಗಳು, 9. ಜೋತಿಷರು, 10. ವಿಪ್ರರು.

8. ಮಾಯಕದ ನಾಗಸ್ವರ

ರಾಗ ಕೇದಾರಗೌಳ ಅಷ್ಟತಾಳ

ನಂದಿವರ್ಮಗೆ ನಾಲ್ಕು। ಮಂದಿ ಮಕ್ಕಳು ಮೂವ। ರೊಂದಾಗಿ ಇರುತಿರ್ದರು॥ ಒಂದೊಂದು ವ್ಯವಹಾರ । ದಿಂದ ರಂಜಿಸೆ ಕಿರು । ಕಂದನು ಸಾಧುವಾಗಿ ॥1॥

ಮೊದಲಿನವನು ಶೂರ । ತದನಂತರದಿ ವೀರ । ವಿದುವರ್ಮನವತೃತೀಯ ॥ ಮದನ ವರ್ಮನು ಕೊನೆ। ಗುದಿಸಲು ನಾಲ್ವರೀ । ವಿಧದಿ ನಂದನರೆಸೆಯೆ ॥2॥

ಸದ್ಧರ್ಮಯುತನಾಗಿ। ಇದ್ದರೆ ಕಿರಿಯನು। ಹೆಡ್ಡನೆನುತ ಹಳಿದು॥ ಮೊದ್ದುವೆನುತ ಮೂಲೆ । ಗೊದ್ದುನಡೆಯುತ ತಾ । ವಿದ್ದರಾತನನುಳಿದು ॥3॥

ತಂದೆ ಕೇಳಿದನೇಕೆ । ನಿಂದಿಸುವಿರಿ ನಿ । ಮ್ಮಂದವಲ್ಲವೆಯೆನಗೆ ॥ ಮುಂದೆ ನೀವೆಲ್ಲರು ಒಂದೇ ಬುದ್ಧಿಯೊಳಿಹು । ದೆಂದು ನೀತಿಯ ಪೇಳ್ದನು ॥4॥

ಗತಿಸಲು ಕೆಲಕಾಲ। ಪಿತನಂದಿವರ್ಮನು। ಸ್ಥಿತಿಯಂತರಕೆ ಸಾಗಲು॥ ಮತಿಯುತ ಸೋದರರ್ । ಜತೆಯಾಗಿ ಮೂವರು । ಅತಿಕಿರಿಯನನಾಗಲು ॥5॥

ಜನಕನಗಳಿಕೆಯಿಂ । ದಿನಿತನು ನೀಡದೆ । ಮನೆಯಿಂದ ಹೊರಗಟ್ಟಲು ॥ ಚಿನುಮಯ ನಂಘ್ರಿಯ । ನೆನೆಯುತ ಮದನನು । ಜನಪದದೆಡೆ ಸಾರಲು ॥6॥

ಎಲ್ಲಿ ನೋಡಿದರೆ ಆ । ಶ್ರಯವಿಲ್ಲ, ನುಡಿಸುವ । ರಿಲ್ಲ ದಾಯಿತೆಯೆನ್ನನು॥ ಖುಲ್ಲಮಾನವರಿಂದ । ಹುಲ್ಲೆ ಪಕ್ಷಿಗಳಿರು । ವಲ್ಲೆ ಪೋಗುವೆನೆಂದನು ॥7॥

ರಾಗ ಸಾಂಗತ್ಯ ರೂಪಕತಾಳ

ನಾಡಿನೊಳಾರು ಮಾ । ತಾಡಿಸರೆನ್ನನು । ಕಾಡಿನ ವಾಸವೆ ಲೇಸು ॥ ಕೇಡ ಬಗೆವ ನಮ್ಮ। ರೂಢಿಯ ಒಡನಾಟ । ಬೇಡವೆನ್ನುತಲಾಗ ಮದನ ॥1॥

ಅಡವಿ ಪಣ್ಗಳ ಮೆದ್ದು। ನಡೆದು ಬೊಗಸೆ ನೀರ। ಕುಡಿದು ವಿಶ್ರಾಂತಿಗೆ ಮರದ। ಅಡಿಯೊಳು ಕುಳಿತಿರೆ। ಒಡನೆ ನಿದ್ರೆಯು ಬಂದು। ಅಡಸಲು ಮಲಗಿದನಲ್ಲೇ ॥2॥

ಭಾಮಿನಿ

ಗೊರಕೆ ಹೊಡೆಯುತ ಮದನನಿದ್ರಿಸು। ತಿರಲಿಕಾ ಹೆಮ್ಮರದಿ ವಾಸಿಸು। ತಿರುವ ಕಿರುಪೈಶಾಚವೊಂದತಿ ಕೀಟಲೆಯನೆಸಗೆ॥ ಹಿರಿಯಸಂಗ್ರಹಿಸಿಟ್ಟನಾಗ। ಸ್ವರವನಾತನ ಮೇಲೆ ಕೆಡಹಲು। ಭರದೊಳೆಚ್ಚರಗೊಂಡು ಕರದೊಳು ಪಿಡಿದು ನೋಡಿದನು ॥1॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಮೇಲೆ ನೋಡೆ ಪಿಶಾಚಿಗಳು ತಾವ್ । ಲೀಲೆಯಿಂಕೈತಟ್ಟಿ ನಗುತಿರೆ । ತಾಳಿದರುಭಯ ತೋರಗೊಡದೆ ನಿ । ರಾಳವಾಗಿ ॥1॥

ಪಿಡಿಯುತಲಿ ಕೈಯ್ಯಲ್ಲಿ ವಾದ್ಯವ । ನೊಡನೆ ಶಬ್ದಿಸಲಾ ಪಿಶಾಚರು । ನುಡಿಯುತಲಿತಮ್ಮಲ್ಲೆ ಭೀತಿಯಿಂ । ನಡುಗುತಿರಲು ॥2॥

ಮರಳಿಯದನೂದಲ್ಕೆ ಮರದ । ಲ್ಲಿರುವ ಹಿರಿಯ ಪಿಶಾಚಿ ಕಿರಿಯನ । ಭರದಿಗದರಿಸುತಿಳಿದುಬಂದುದು । ತ್ವರಿತದಿಂದ ॥3॥

ಬೇಡ ನೀ ನೂದದಿರುವಾದ್ಯವ। ಕೇಡ ಬಯಸುವುದಿಲ್ಲ ವೆನಗದ। ನೀಡು ನೀಡೆಂದೆನುತ ವಿನಯದಿ । ಮಾಡಲರಿಕೆ ॥4॥

ರಾಗ ಅಠಾಣ ಏಕತಾಳ

ಊದಿದನು ಮದನ। ನಾಗಸ್ವರ। ಊದಿದನು ಮದನ॥ ಊದಿದ ವಿಧವಿಧ ನಾದವಹೊಮ್ಮಿಸಿ । ಕಾಡಪಿಶಾಚಿಗ । ಳೋಡುತ ಅಳುತಿರೆ ॥1॥

ಕೈಯ್ಯ ಬೆರಳನಿಟ್ಟು। ರಂಧ್ರದಿ। ರೊಯ್ಯನೆ ಬಾಯಿಟ್ಟು॥ ಥೈಯ್ಯನೆ ಕುಣಿಯುತ ಸುಯ್ಯೆಂದೂದುತ । ಒಯ್ಯನೆ ಶಬ್ದಿಸೆ । ಸುಯ್ಯುತ ಬಂದವು ॥2॥

ವಾರ್ಧಕ

ತರಹರಿಸಿ ನಡುಗುತ್ತ ಬಂದಾ ಪಿಶಾಚಿಗಳು। ಕರಮುಗಿದು ಕಾಲ್ಗೆರಗಿ ಬೇಡಿದವು ವಾದ್ಯಮಂ । ನಿರತಶಬ್ದಿಸಬೇಡ ನೀನೆಂದನುಜ್ಞೆಯಂದದಿ ನಡೆವೆವಿನ್ನು ಮುಂದೆ ॥

ಹರುಷದಿಂ ಸ್ವೀಕರಿಸು ಬಹಳ ಸಂಪತ್ತುಗಳ। ಭರದಿಂದ ತಂದು ಕೊಡುವೆವು ನಿನ್ನ ಕಷ್ಟಗಳ । ಹರಿಸುವೆವು ಧಿಟವೆಂದು ಹೊನ್ನ ರಾಶಿಯ ತಂದು ಪಾದಮೂಲದೊಳಿಕ್ಕಲು ॥1॥

ಕಂದ

ಸರಿಯೆನ್ನುತಲಾವಾದ್ಯವ । ಮರೆಮಾಡುತ ತನ್ನ ಚೀಲದೊಳಗಿಕ್ಕುತ್ತಂ ॥
ತರಹರಿಸುವುದೇತಕೆ ಈ । ಪರಿ ನಾದವ ಕೇಳೆ ಎಂದಡರುಹಿದ ಹಿರಿಯಂ ॥1॥

ರಾಗ ಕೇದಾರಗೌಳ ಅಷ್ಟತಾಳ

ಹಿಂದಿನಜನ್ಮದಿ । ಹೊಂದಿರ್ದೆಕೀರ್ತಿಯ । ನಂದು ನಾಗಸ್ವರದಿ ॥ ಒಂದು ದೇವಾಲಯ ದಿಂದ ಸೇವೆಯಬಿಟ್ಟು। ಅಂದೈದ ಬೇಕಾಯಿತು ॥1॥

ಮತ್ತೊಂದು ದಿನವಲ್ಲಿ। ಉತ್ಸವನಡೆಯಲು। ಉತ್ಸಾಹದಿಂದ ಪೋದೆ॥ ಮತ್ತಲ್ಲಿ ಕರ್ಕಶ । ವಾದ್ಯವ ಕೇಳಿದು । ಸತ್ತು ಪಿಶಾಚಿಯಾದೆ ॥2॥

ಅವನ ಕರ್ಣಕಠೋರ । ರವ ಸಹಿಸಲಾರದೆ । ಅವನಿರಿಸಿದ ವಾದ್ಯವ ॥ ತವೆಯತ್ನದಿಂದಲಿ ಇವರ ಮೂಲಕ ತಂದೆ । ವಿವರಿಸಲೇನದನು ॥3॥

ಭಾಮಿನಿ

ನಟ್ಟಿರುಳಿನಲಿ ನೀನಿದೇಕಿ। ದಟ್ಟಡವಿಗೈತಂದೆ ಪೇಳೆನೆ। ಕೆಟ್ಟ ಬುದ್ಧಿಯ ಸೋದರರು ಅನ್ಯಾಯವೆಸಗಿದುದ ॥ ಸ್ಪಷ್ಟವಾಗಿಯೆ ತಿಳುಹೆ ಮದನನು । ಸಿಟ್ಟುಗೊಳ್ಳಲಿಕಾ ಪಿಶಾಚನು ಕಷ್ಟ ಕಳೆದಾಬಳಿಕ ಕಾಣುವುದೆಂದು ನಿರ್ಧರಿಸಿ ॥1॥

ಕಂದ

ಮನೆಯಿಲ್ಲದ ಎನಗೇಕೀ । ಧನಕನಕಗಳೆಂದು ಮದನನೊರೆಯಲ್ಕಾಗಂ ॥
ಅನಿತರೊಳ್ ಬಚ್ಚಿಡುತದನುಂ । ನಿನಗಿತ್ತಪೆ ಗೃಹವನೆನುತ ಜತೆಗೂಡುತ್ತಂ ॥1॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕಾಡಿನೊಳು ತುಸುದೂರಸಾಗಲು । ರೂಢಿಗಚ್ಚರಿಯೆನುವ ಪರಿಯೊಳು । ಗೂಢವಾಗಿಹ ಸದನ ಚೆಲುವಿನ । ಗೂಡೆನಿಸಿತು ॥1॥

ಮನೆಯನ್ನಿತ್ತಾಮದನಗೆಲ್ಲವ । ನನುನಯ ದೊಳೊದಗಿಸುತ, ಪೂರ್ವದಿ । ದಿನಪನುದಯಿಪ ಸಮಯವಾಗಲು । ವಿನಯದಿಂದ ॥2॥

ಮತ್ತೆ ಬರುವೆವು ನಿನ್ನ ಕಾಣಲು। ರಾತ್ರಿಕಾಲದೊಳೆನುತ ವಂದಿಸಿ। ಅತ್ತತೆರಳೆಪಿಶಾಚ ರಚ್ಚರಿ । ವೆತ್ತು ಮದನ ॥3॥

ಮನೆಯು ಸೌಲಭ್ಯಗಳ ಪರಿಕಿಸಿ । ತನಗೆ ಬೇಕಾಗಿರ್ಪುದನುತಾ । ನನುಗೊಳಿಸಿಯುಣ್ಣುತಲಿ ಕಳೆದನು । ದಿನವಮುದದಿ ॥4॥

ಇರುಳಿನಲಿ ಬಂದಾ ಪಿಶಾಚರು । ಪರಿಪರಿಯ ವಸ್ತುಗಳ ಪಣ್ಗಳ । ನಿರದೆ ಮದನಂಗಿತ್ತು ಮುಂದೇ । ನರುಹುಕಾರ್ಯ ॥5॥

ಭಾಮಿನಿ

ಎಂದೆನುತ ಬೆಸಗೊಳಲು ಗೌಪ್ಯದೊ । ಳೆಂದ ಮುಂದಿನಕಾರ್ಯ ತಂತ್ರವ। ನೊಂದುಳಿಯ ದಂದದಲಿ ತನ್ನಯ ಸೋದರರ ಬಗೆಯ ॥ ಅಂದು ಸರಿಯೆಂದೆನುತಲಾಕ್ಷಣ ಲಂದದಿಂ ಪೊರವಂಟು ನಡೆದುದು । ನಂದಿವರ್ಮನ ಹಿರಿಸುತರ ಕಾಣಲು ಪಿಶಾಚಗಣ॥1॥

ರಾಗ ಕಾಂಬೋಧಿ ಝಂಪೆತಾಳ

ಭೂರಿ ವೈಭವದಿಂದ। ಶೂರವರ್ಮನು ತಮ್ಮ। ವೀರವರ್ಮನು, ಚಂದ್ರವರ್ಮ॥ ಈರೀತಿಯಿಂದ ಸಂ । ಸಾರ ಸಾಗಿಸುತಿರಲು । ಆರಾತ್ರಿ ನಿದ್ರಿಸುತ್ತಿರಲು ॥1॥

ಹಿರಿಯಮಗನನು ತಂದೆ। ಕರೆದಂತೆ ಕೇಳಿಸಲು। ತ್ವರಿತದಿಂದೆದ್ದು ನಡೆತರಲು॥ ಭರದಿಂದ ಮುಗ್ಗುರಿಸೆ। ಇರುಳು ಕಾಣಿಸದೆ ತ। ತ್ತರಿಸಿದನು ನೋವಿನಿಂದಂದು ॥2॥

ಕಪ್ಪುಬೆಕ್ಕೊಂದು ಮಲ। ಗಿಪ್ಪಹಾಸಿಗೆಯಲ್ಲೆ। ತೆಪ್ಪಗೇ ಮುದುಡಿಕೊಂಡಿರಲು॥ ಟಪ್ಪೆಂದು ಓಡಿಸಲು । ಗಪ್ಪನೇ ಮುಖಪರಚೆ । ಧೊಪ್ಪೆಂದು ಬಿದ್ದನಾವೀರ ॥3॥

ಚಂದ್ರವರ್ಮನಮೇಲೆ । ಅಂದೊಂದು ಕರಿಹಾವು । ಬಂದು ಬೀಳಲು ಭೀತಿಯಿಂದ। ಮುಂದುಗಾಣದೆ ಕಿರುಚು। ತಂದೋಡಿ ಅಣ್ಣನೊಳು। ಬಂದಕಷ್ಟವ ಪೇಳಿ ಅಳಲು ॥4॥

ಸೋದರರರ ನಡುವೆ ಮತ। ಭೇದಗಳ ತಂದಿಕ್ಕಿ। ಸೋದರಿಯರೂ ಹಳಚುವಂತೆ। ಬಾದಿಸೆ ಪಿಶಾಚಗಳು । ಮೋದದಿಂದಿದ್ದ ಮನೆ । ಯಾದುದ್ಯೆ ರಣರಂಗದಂತೆ ॥5॥

ಕಂದ

ಮಕ್ಕಳು ಬೆದರಲು ಭೀಕರ । ರಕ್ಕಸರೂಪಗಳ ಕಂಡು ನಟ್ಟಿರುಳಿನೊಳಂ । ಅಕ್ಕತಂಗಿಯರಿದ ಕಾಣುತ । ಬೆಕ್ಕಸಬೆರಗಾಗಿ ಚಿಂತಿಸುತ್ತಿರಲಾಗಂ ॥1॥

ವಾರ್ಧಕ

ಪರಿಪರಿಯ ಜೋತಿಷ್ಕರೆಂದುದಂ ಚಂದದಿಂ। ಉರುಮಂತ್ರವಾದಿಗಳ ತಂತ್ರದಿಂ ಯಂತ್ರದಿಂ। ಸರುವಬಾಧೆಯ ಕಳೆವ ಹೂಟದಿಂ ಕೂಟದಿಂ ತುಂಬಿತಾ ಭವನವೆಲ್ಲ॥ ಬರಿದೆ ಹಣ ಸಮಯಗಳು ವ್ಯರ್ಥವಾದವೆ ಹೊರತು ಪರಿಹಾರ ವಾಗದಾಯಿತು ಪಿಶಾಚಗಳ ಕಿರಿ । ಕಿರಿ ಭೀತಿಯಿಂ ಚಿಂತೆಯಂತಾಳ್ದಿರಲ್ಕಲ್ಲಿ ಗೈತಂದ ಯತಿಯೋರ್ವನು ॥1॥

ಕಂದ

ಕರೆತಂದಾಯತಿವರನಂ। ಎರಗುತಲುಪಚರಿಸಿ ತಮ್ಮ ಕಷ್ಟವನೆಲ್ಲಂ ॥ ಅರುಹಲು ಕೇಳುತಲಾಬುಧ । ವರಪೇಳಿದನಿಂತು ಸಂತವಿಡುತನಿಬರನು ॥1॥

ರಾಗ ಮಧ್ಯಮಾವತಿ ತ್ರಿವುಡೆತಾಳ

ಎಷ್ಟು ನೀವು ನಿವೃತ್ತಿಗೈದರು। ಅಷ್ಟು ಪಾಪಗಳೆಲ್ಲವು। ಥಟ್ಟನೇಪರಿಹಾರವಪ್ಪುದು। ಕಷ್ಟಸಾಧ್ಯ ॥1॥

ಜನಕ ಪೇಳಿದರಾತನಾನುಡಿ । ಗಣಿಸದೇನೀವ್ ನಿಮ್ಮಯ ॥ ಅನುಜನಂ ಮನೆಯಿಂದಲಟ್ಟಿದು । ದನುಚಿತವದು ॥2॥

ಇನ್ನು ನಿಮಗಡಸಿರ್ಪಕಷ್ಟಗ। ಳನ್ನು ದೂರೀಕರಿಸಲು॥ ಅನ್ನದಾನಾದಿಗಳ ನೆಸಗಲು ಪುಣ್ಯಪ್ರದವು ॥3॥

ದ್ವಿಪದಿ

ಜನಕನಾಪೆಸರಲ್ಲಿ ಅನ್ನಛತ್ರವನು । ಘನಬೇಗ ಕಟ್ಟಿಸುತ ಪರ್‍ತಿದಿವಸವಿನ್ನು ॥1॥

ದಾನ ಧರ್ಮಾದಿಗಳನೆಸಗೆ ಶಾಶ್ವತದಿ। ಈ ನಿಮ್ಮ ಕಷ್ಟದೂರಾಗುವುದು ನಿಜದಿ॥2॥

ಹತ್ತಿರದಿ ಷಣ್ಮುಖನ ಗುಡಿಯ ನಿರ್ಮಿಸುತ । ಋತ್ವಿಜರ ನೇಮಿಸುತ ಪೂಜೆ ಸಲಿಸುತ್ತ ॥3॥

ಹೊನ್ನಿನಾ ಸುಬ್ರಹ್ಮಣ್ಯನ ಮೂರ್ತಿ ಮಾಡಿ। ಚಿನ್ನದಾ ನಾಗಸ್ವರವ ಭಕ್ತಿಗೂಡಿ ॥4॥

ಅರ್ಪಿಸುತ ಶ್ರದ್ಧೆಯಿಂ ಸಕಲ ಕಾರ್ಯಗಳ। ಏರ್ಪಡಿಸೆ ಹರಿಯೊಲಿದು ಬಂದ ದುರಿತಗಳ ॥5॥

ನೀಗುವನು ಇಷ್ಟಾರ್ಥ ಕೈಗೂಡಲೆನುತ । ಯೋಗಿವರ ನಾಗಸ್ವರವನು ನುಡಿಸುತ್ತ ॥6॥

ಪೊರಡಲಾಕ್ಷಣ ಉಪ್ಪರಿಗೆಯಿಂದ ಕೂಗು । ಭರದಿಂದ ಕೇಳಿಸಿತು ಕರ್ಕಶದ ಗುಡುಗು ॥7॥

ಉರುಳುತಿರೆ ಪಾತ್ರೆಗಳು ಮನೆಯವರು ಬೆದರಿ। ವರಯತಿಗೆ ಮೊರೆಯಿಡಲು ಅಭಯವನು ತೋರಿ ॥8॥

ಮುಂದಿನ್ನು ಭಯವಿಲ್ಲಹೋಯ್ತೆಲ್ಲಕಾಟ । ಎಂದಂತೆ ಮಾಳ್ಪುದೆಂದ್ಯೆದೆ ಮುನಿನಾಥ ॥9॥

ವಾರ್ಧಕ

ಯತಿಯು ಪೇಳಿದತೆರದಿ ಷಣ್ಮುಖನಮಂದಿರವ। ನತಿಬೇಗ ಕಟ್ಟಿಸುತ ಛತ್ರಗಳ ನಿರ್ಮಿಸುತ। ಜತನದಿಂದನ್ನದಾನದವ್ಯವಸ್ಥೆಯಮಾಡಿ ಸುಮುಹೂರ್ತವನ್ನು ನೋಡಿ॥ ಕ್ಷಿತಿಸುರರ ನರ್ಚಿಸಲು ಕರೆತಂದು ಸ್ಥಾಪಿಸುತ। ಲತಿಶಯದಭಕ್ತಿಯಿಂದೆಲ್ಲ ಕೆಲಸಗಳನೆಸ ಗುತ ಪಾಪ ಭೀತಿಯಿಂ ಪುಣ್ಯಕಾರ್ಯವಮಾಡೆ ಗೃಹದಿ ಶಾಂತಿಯು ನೆಲಸಿತು ॥1॥

ರಾಗ ಸುರುಟಿ ಏಕತಾಳ

ಒಂದಿರುಳಲಿ ಮದನ। ಪಿಶಾಚರಿ। ಗೆಂದನು ನಿಮ್ಮನ್ನ॥ ಎಂದಿಗುಮರೆಯೆನೆ । ನ್ನಿಂದೇನುಪ ಕೃತಿ । ಯಿಂದು ಬಯಸುವಿರಿ । ಯೆಂದೆನಲೊರೆದರು ॥1॥

ನಿನ್ನಂಥವರಿಂಗೆ । ನೆರವಹ । ಉನ್ನತಕೃತಿಯೆಸಗೆ ॥ ಧನ್ಯತೆಯೊದಗುವು । ದೆನ್ನುವಸಂತಸ। ಮುನ್ನ ಮೋಕ್ಷವು ಬಹು । ದೆನ್ನುವ ಆಶಯ ॥2॥

ಅಣ್ಣಂದಿರಿಗಂತು । ಬುದ್ಧಿಯು । ಚೆನ್ನಾಗಿಯೆ ಬಂತು ॥ ನಿನ್ನನು ಬಳಲಿಸಿ। ಗನ್ನಗಾತಕ ಗೈ । ದನ್ಯಾಯಿಗಳಿಗೆ । ಚೆನ್ನಾಯಿತು ಕೃತಿ ॥3॥

ಬೇಡ ನಿನಗೆ ನಾಡು। ಎಮ್ಮೊಡ। ಗೂಡಿವಾಸವಮಾಡು ॥ ಕೇಡನುಗೈಯ್ಯೆವು। ಮಾಡೆವುದ್ರೋಹವ । ಬೇಡಿ ಕೊಂಬೆವು ದಯ । ಮಾಡಿಲ್ಲಿಯೆ ನಿಲು ॥4॥

ಕಂದ

ಎಂದಾ ಪಿಶಾಚರು ತಾ । ವಂದದಿ ಪ್ರಾರ್ಥಿಸುತ ತಮ್ಮ ವಾಸಕ್ಕೈದಲ್ ॥ ಮಂದಿರದಲಿ ಮದನನು ಸುಖ। ದಿಂದಿರೆ ಕೆಲಗಾಲ ಕಳೆಯ ಲಾನಂದದೊಳಂ॥1॥

ವಾರ್ಧಕ

ಒಂದಿರುಳು ಸ್ವಪ್ನದೊಳ್ ಮದನಂಗೆ ಕಾಣಿಸುತ । ನಂದಿವಾಹನನೆಂದ ನಿನ್ನ ಸಖ ಪೈಶಾಚ । ವೃಂದದೊಡನೈತಂದು ಪುಷ್ಕರಿಣಿ ಕ್ಷೇತ್ರದೊಳು ನೆಲೆಯಾದ ಬಳಿಕನಿಮಗೆ ॥ ಕುಂದದಿಷ್ಟಾರ್ಥಗಳ ಸಲಿಸುವೆ ಪಿಶಾಚಿಗಳಿ । ಗಂದದಿಂ ಮೋಕ್ಷಪ್ರಾಪ್ತಿಸುವುದದರಿಂಶೀಘ್ರ ಬಂದಪುದೆನುತ್ತಲಂತರ್ಧಾನ ನಾಗಲೆಚ್ಚರ ಗೊಂಡನಾ ಮದನನು ॥1॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅಂದಿರುಳು ನಡೆತಂದಸಖರಿಗೆ । ಚಂದ್ರಶೇಖರ ನಾಜ್ಞೆಯನು ತಾ । ನಂದು ಮದನನು ತಿಳುಹಿದನು ಸಾ । ನಂದದಿಂದ ॥1॥

ಕಾನನವ ಬಿಟ್ಟೈದಲೆಂತ್ಯೆ । ಮೀನಕೇತನ ವೈರಿಯಾಜ್ಞೆಯ । ಮಾನಿಸದೆ ಎಂತಿರುವುದೆಂದು ನಿ । ಧಾನಿಸಲ್ಕೆ ॥2॥

ಕಾಡಜೀವನವೇನು ಸಾರ್ಥಕ। ಮಾಡಲೇತಕೆಚಿಂತೆ ಕರುಣದಿ। ವ್ಯಾಡಭೂಷಣ ನೊಲಿದು ಮೋಕ್ಷವ । ನೀಡಲಿಹನು ॥3॥

ಅಲ್ಲಿಗೇನಾವ್ ಮಾತ್ರ ವೈದುವ। ರಲ್ಲ ನಿನ್ನನು ಬಿಟ್ಟು ಪೋಗೆವು। ಎಲ್ಲರೊಂದಿಗೆ ತೆರಳ್ವುದಾದರೆ । ಇಲ್ಲವಾದ ॥4॥

ನಿಮ್ಮ ಉಪಕೃತಿ ಮರೆಯಲಾರೆನು । ನಿಮ್ಮಬಿಟ್ಟೆನ್ನೆಲ್ಲು ಪೋಗೆನು । ಘಮ್ಮನೇಸುಕ್ಷೇತ್ರಕೈದುವ ಒಮ್ಮತದೊಳು ॥5॥

ವಾರ್ಧಕ

ಗೆಳೆಯರೇ ನಾವೆಲ್ಲರಲ್ಲಿ ಪೋಗುವಮೊದಲು। ಉಳಿದಿರ್ಪಕಾರ್ಯವೊಂದಿದೆ ನೀವು ಬುದ್ಧಿಯನು । ಕಲಿಸಿರ್ಪ ಸೋದರರರಿಗಾನುಸಹಿತೀ ಕೆಲಸಗಳನು ನಡೆಸಿರ್ಪೆನೆಂದು ॥ ತಿಳಿಯಪಡಿಸಲು ಬಾಕಿಯಾಗಿರ್ಪುದದಕಾಗಿ । ಕಳುಹುತೋರ್ವನನಲ್ಲಿಗೀ ಲಿಖಿತವನ್ನಿತ್ತು। ಘಳಿಲನೈತಹುದೆನಲ್ಕದರಂತೆ ನಡೆತಂದ ಶೂರವರ್ಮನ ನಿಳಯಕೆ ॥1॥

ಕಂದ

ಚಾರಕನೋರುವ ಬಂದಾ। ಶೂರವರ್ಮಗೆ ಓಲೆಯಿತ್ತು ತೆರಳಲ್ಕಾಗಂ॥ ಯಾರದು ಪತ್ರವೆನುತ್ತಲಿ । ಭೋರನೆವಾಚಿಸಿದನಧಿಕ ಕೌತುಕದಿಂದಂ ॥1॥

ರಾಗ ಕೇದಾರಗೌಳ ಅಷ್ಟತಾಳ

ಅಣ್ಣಂದಿರಲ್ಲಿ ನಾ। ಬಿನ್ನಹಗೈವೆನು। ಎನ್ನನು ಮರೆತಿರೇನು॥ ಅನ್ನದಾನವಗೈದು ಪುಣ್ಯಭಾಜನರಾದಿ । ರೆನ್ನುವುದಧಿಕ ತೋಷ ॥1॥

ಕಿರಿಯ ಸೋದರನನ್ನು। ಮರೆತಿರಾದರು ನಿಮ್ಮ। ಸ್ಮರಣೆಯು ಎನಗಿಹುದು॥ ಬರಲಾರೆನಲ್ಲಿಗೆ । ಮರಳಿ ಚಿಂತೆಯುಬೇಡ । ಇರುವುದು ಮನೆಯನೆಗೆ ॥2॥

ಕಾಡಿನ ಮಧ್ಯದಿ। ಮಾಡಿಹೆಗೃಹವಿದ। ನೀಡುವೆ ಶಶಿವರ್ಮಗೆ। ಬೇಡವೆನಗೆ ಮತ್ತೆ ಕಾಡೆನು ಬಂದು ನಾ । ಬೇಡಿವಂದಿಪೆ ನಿಮಗೆ ॥3॥

ಗುರುತಿಗಿಟ್ಟಿಹೆನಾಗ । ಸ್ವರವೊಂದ ಸದನದಿ । ಬರೆಪಿಶಾಚಗಳ ಬಾಧೆ ॥ ಸ್ಮರಿಸಿದೇವರನಿದ ಭರದೊಳೂದಲಿಕಾಗ । ಪರಿಹಾರವಪ್ಪುದೆಲ್ಲ ॥4॥

ಅರಸಬೇಡಿರಿ ಎಲ್ಲೂ। ದೊರಕಲಾರೆನು ನಾನು। ತೆರಳಿದಪೆನು ದೂರಕೆ॥ ಹರಿಯು ಸಲಹಲಿ ಎ। ಲ್ಲರನೆಂದು ಪ್ರಾರ್ಥಿಪ। ಕಿರುಸಹೋದರಮದನ ॥5॥

ಇನಿತು ಬರೆದ ಪತ್ರ । ವನುನೋಡಿ ತಮ್ಮಯ । ಮನೆ ಮಂದಿಯೆಲ್ಲರಿಗು ॥
ಅನುಜನ ವಿಷಯಗ । ಳನು ಪೇಳಲೆಲ್ಲರು । ಮನದೊಳು ಮರುಗಿದರು ॥6॥

ಮದನನಪೇಕ್ಷೆಯೊಲ್ । ವಿದುವರ್ಮತನ್ನಯ । ಸುದತಿ ಮಕ್ಕಳಕೂಡುತ ॥
ಮುದದಿಂದ ತಮ್ಮನ । ಸದನದಿ ನೆಲಸಿದ । ಪದುಮನಾಭನ ದಯದಿ ॥7॥

ಭಾಮಿನಿ

ಪತ್ರ ಕಳುಹಿದ ಮೇಲೆ ಮದನನು । ಮಿತ್ರ ಪೈಶಾಚರನುಕೂಡುತ ।
ಕೃತ್ತಿವಾಸನನುಜ್ಞೆಯಂದದಿ ಅರ್ಕಪುಷ್ಕರಿಣೀ ॥ ಕ್ಷೇತ್ರ ಕೈತಂದಲ್ಲಿ ಭಕ್ತಿಯೊಳ್ ।
ನಿತ್ಯಸೇವೆಯ ನೆಸಗುತಿರೆ ತ್ರೈ। ನೇತ್ರ ಕರುಣದೊಳಿತ್ತ ಮೋಕ್ಷವನೊಲಿದು ಸಕಲರಿಗೆ ॥1॥

ಪಾತ್ರವರ್ಗ

1. ನಂದಿವರ್ಮ, 2. ಶೂರವರ್ಮ, 3. ವೀರವರ್ಮ, 4. ಚಂದ್ರವರ್ಮ, 5. ಮದನವರ್ಮ, 6. ಪಿಶಾಚಿಗಳು, 7. ಜೋತಿಷ್ಕರು, 8. ಯತಿ, 9. ದೂತ, 10. ಪರಮೇಶ್ವರ, 11. ನಂದಿವರ್ಮನ ಪತ್ನಿ, 12. ಮಂತ್ರವಾದಿ.

9. ದುಷ್ಟರಾಜ

ರಾಗ ಸೌರಾಷ್ಟ್ರ ತ್ರಿವುಡೆತಾಳ

ದೊರೆ ಸುಬಲತಾ ಪಾಂಡ್ಯರಾಜ್ಯದಿ । ಅರಸುಗೈಯ್ಯುತಲಿರ್ದ ವಿಭವದಿ । ಸರಸಿಜಾಕ್ಷಿ ಮೀನಾಕ್ಷಿಯೆಂಬಳ । ವರಿಸಿ ಮುದದಿ ॥1॥

ಗತಿಸಿದರು ಕೆಲವತ್ಸರಂಗಳು । ಸುತವಿಹೀನರೆಂದೆನಿಸಿ ಬಾಳ್ದರು । ಅತಿದುಗುಡದಿಂದಿರಲು ವರಪುರೋ । ಹಿತರ ಮತದಿ ॥2॥

ವರ ರಾಮೇಶ್ವರ ಕ್ಷೇತ್ರಕ್ಕೈದುತ। ಲರಸತನ್ನಯ ಮಡದಿ ಸಹಿತಲಿ। ಧರಣಿಸುರ ರಭಿಮತದಿ ಸೇವೆಯ । ವಿರಚಿಸುತಲಿ ॥3॥

ದ್ವಿಪದಿ

ರಾಮಸೇತುವಿನಾದಿಯಲ್ಲಿ ಕಂಗೊಳಿಪ । ಆಮಹಾಚಕ್ರತೀರ್ಥದಿ ಪಾಂಡ್ಯಭೂಪ ॥1॥

ಹರಿಯುಪಾಸನೆಗೈದು ವ್ರತಧಾರಿಯಾಗಿ । ಅರಸಿ ಸಹ ಶ್ರದ್ಧೆಯಿಂದಿರಲು ಲೇಸಾಗಿ ॥2॥

ಇರುಳಿನೊಳು ಸುಸ್ವಪ್ನತೋರೆ ನೃಪವರಗೆ ॥
ಹರಿಯೊಲುಮೆಯಾಯ್ತು ತೆರಳಲುಬಹುದು ಮನೆಗೆ ॥3॥

ಅಂದು ಸಂತಸದಿಂದ ಹರಿಹರರ ಮನದಿ । ವಂದಿಸುತ ನಿಜನಗರಿ ಗೈತರಲು ಮುದದಿ ॥4॥

ವಾರ್ಧಕ

ಹರಿಹರರನುಗ್ರಹದಿ ಸುಬಲಭೂಮಿಪನಹಿರಿ । ಯರಸಿ ಮೂವರು ಪುತ್ರರಂಪಡೆಯಲಾನೃಪತಿ । ಹಿರಿಯವಂಧರ್ಮಮಿತ್ರನು ಬಳಿಕ ಧನಮಿತ್ರ

ಗುಣಮಿತ್ರನೆಂದೆನ್ನುತ ॥ ಹರುಷದಿಂ ಪೆಸರಿಡಲು ಕಿರಿಯಸತಿ ಅರುಣೆಯೊಳು । ತರಳಜನಿಸಲ್ಕವಗೆ ಕಲಿಮಿತ್ರನೆಂದೆನುತ । ಕರೆದೆಲ್ಲರಿಗೆ ಯೋಗ್ಯಗುರುಗಳಿಂ ಸಕಲ ವಿದ್ಯೆಗಳನ್ನು ಕಲಿಸಿ ನಲಿಸಿ ॥1॥

ರಾಗ ಭೈರವಿ ಝಂಪೆತಾಳ

ಇಂತು ಕೆಲಗಾಲ ಮಿಗೆ । ಸಂತಸದಿಕಳೆಯೆ ನೃಪ । ತಾಂತಿಳಿದ ವೃದ್ಧಾಪ್ಯ । ಬಂತು ತನಗೆನುತ ॥1॥

ವರ ಪುರೋಹಿತರು ನೃಪ । ಗರುಹಿದರು ಕಲಿಮಿತ್ರ । ನುರುದೋಷಕೃತ್ಯಗಳ । ಪರಿಹರಿಪುದೆಂದು ॥2॥

ಸರಿಯೆಂದು ಸುಬಲ ಭೂ । ವರನು ಕಲಿಮಿತ್ರಂಗೆ । ಅರುಹಿ ನೀತಿಯ ಬಳಿಕ । ಕರೆಸಿ ಮಂತ್ರಿಯನು ॥3॥

ವಾನಪ್ರಸ್ಥಕೆ ಪೋಪೆ । ಸೂನು ಧರ್ಮಾತ್ಮನಿಗೆ । ಈ ನೆಲನ ಅಧಿಕಾರ । ನಾನೀವೆ ನದಕೆ ॥4॥

ಪುರವ ಸಿಂಗರಿಸು ಸಕ । ಲರಕರೆಸೆನಲು ಸಚಿವ । ಅರಸನಾಣತಿಯಂತೆ । ಭರದೊಳಣಿಗೊಳಿಸೆ ॥5॥

ಭಾಮಿನಿ

ಹಿರಿಯನಂದನ ಧರ್ಮಮಿತ್ರಗೆ । ಧರಣಿಯೊಡೆತನವಿತ್ತು ಸುಬಲನು । ಹರುಷದಿಂಸತಿಸಹಿತ ವಾನಪ್ರಸ್ಥ ಕೈದಿದನು ॥ ವರಪ್ರಜಾರಂಜಕನೆನಿಸಿ ನವ । ಧೊರೆಯುಮಂತ್ರಿ, ಪುರೋಹಿತರ ಮತ । ವರಿದು ರಾಜ್ಯವನಾಳುತಿರ್ದನು ಧರ್ಮಮಾರ್ಗದಲಿ ॥1॥

ರಾಗ ಕೇದಾರಗೌಳ ಅಷ್ಟತಾಳ

ಅಣ್ಣನ ಆಳ್ವಿಕೆ । ಯನ್ನು ಹಾಳೆಸಗುತ । ಅನ್ಯಾಯ ಮಾಳ್ಪೆನೆಂದು । ಎಣ್ಣುತ ಕಲಿಮಿತ್ರ ದುರ್ನೀತಿಯುತ ಸಖ । ರನ್ನು ಕೂಡುತ ಜತೆಗೆ ॥1॥

ಸುಲಿಗೆಗಳಲ್ಲಲ್ಲಿ । ಲಲನೆಯರ್ಗುಪಟಳ । ಕಳವು ದುಷ್ಕಾರ್ಯಗಳ ॥ ಅಳವಡಿಸುತ ದಂಗೆ । ಗಳನೇರ್ಪಡಿಸುತಲಿ । ಕಲಿಮಿತ್ರ ಮೆರೆಯುತಿರೆ ॥2॥

ವಾರ್ಧಕ

ನೆಮ್ಮದಿಯನೇ ಕೆಡಿಸಿ ಪ್ರಜೆಗಳಂ ಪೀಡಿಸಲು । ತಮ್ಮ ರಕ್ಷಿಪುದೆಂದು ಅಳುತ ಬಳಲುತ ಬಂದು । ಧರ್ಮಮಿತ್ರನೊಳು ದೂರಿಡಲು ಪುರಜನರೆಲ್ಲ ಸಂತೈಸಿ ಕಳುಹುತವರ ॥

ವಾರ್ಧಕ

ನೆಮ್ಮದಿಯನೇ ಕೆಡಿಸಿ ಪ್ರಜೆಗಳಂ ಪೀಡಿಸಲು । ತಮ್ಮ ರಕ್ಷಿಪುದೆಂದು ಅಳುತ ಬಳಲುತ ಬಂದು । ಧರ್ಮಮಿತ್ರನೊಳು ದೂರಿಡಲು ಪುರಜನರೆಲ್ಲ ಸಂತೈಸಿ ಕಳುಹುತವರ ॥ ಧರ್ಮಾತ್ಮ ಪ್ರಾಜ್ಞರೊಳು ಚರ್ಚಿಸುತ್ತಲಿ ತನ್ನ। ತಮ್ಮ ನಿಂದಾಗುತಿಹ ಅನ್ಯಾಯ ಕೃತ್ಯಗಳ । ಒಮ್ಮೆಲೇ ನಿಲಿಸಲಾರದೆ ಮನದಿ ದುಃಖಿಸುತ ಮುಂದೇನಮಾಳ್ಪುದೆಂದ ॥1॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಗುರುವರನ ಮತದಿಂದ ಸಹಜನ। ಕರೆಸಿಬುದ್ಧಿಯ ಪೇಳಿದರು ದು। ಶ್ಚರಿತನದ ಲೆಕ್ಕಿಸದೆ ದುರ್ಜನ । ರೆರೆಯನಂದು ॥1॥

ಖೂಳಸಖರೊಡನೈದುತರಸಗೆ। ಪೇಳಿದನುಗದ್ದುಗೆಯ ನಿಳಿ ನೀ। ನಾಳಲರಿಯದ ಭೂಪನೆಂದು ಹೀ । ಯಾಳಿಸುತಲಿ ॥2॥

ರಾಗ ಭೈರವಿ ಏಕತಾಳ

ಅಣ್ಣನ ನಿಂದೆಯ ಕೇಳೀ ತಾ। ನುನ್ನತರೋಷವ ತಾಳಿ ॥ ಚೆನ್ನಿಗನಾ ಗುಣಮಿತ್ರ। ನಿ । ಲ್ಲೆನ್ನುತ ಬಳಿಸಾರುತ್ತ ॥1॥

ಇನಿತು ಸದ್ಧರ್ಮದಿ ನಡೆವ । ಈ । ಜನಪಗೆ ದ್ರೋಹವಬಗೆವ ॥ ಬಿನುಗೆ ನೀ ಸಾರಿಲ್ಲಿಂದ ಎಂ । ದೆನೆ ಕಡುಗವ ಕೈಗೊಂಡ ॥2॥

ಅನಿಬರು ಹೊರಲುಕಂಡು। ಆ। ಧನಮಿತ್ರನುಖತಿಗೊಂಡು॥ ದನುಜ ಬುದ್ಧಿಯ ಕಲಿಮಿತ್ರ । ಬಾ । ರೆನುತ ಮುನಿದು ಕರೆಯುತ್ತ ॥3॥

ಧುರಕನುವಾಗಲಿಕಂದು । ಆ । ದುರುಳನ ತಂಡವು ಬಂದು ॥ ಮೊರೆಯಲು ಕಾಣುತಲಾಗ । ನೃಪ । ವರತಡೆದೆಲ್ಲರ ಬೇಗ ॥4॥

ರಾಗ ಅಷ್ಟತಾಳ

ಅನುಜಾತರಿರಮಾತಕೇಳಿ । ಯುದ್ಧ। ಕಣಿಯಾದಿ ರೇತಕೆ ಪೇಳಿ ॥ ತನುವು ಶಾಶ್ವತವಲ್ಲ ವೆನುವುದ ತಿಳಿಯದೆ । ಮುನಿಯಲೇತಕೆ ಸಿಂಹಾ । ಸನದ ವ್ಯಾಮೋಹದಿ ॥1॥

ಅಧಿಕಾರದಾದಾಹವಿಲ್ಲ। ನೀವು । ಅದಕಾಗಿ ಹೋರ್ವುದು ಸಲ್ಲ॥ ಇದಕೋ ಬಿಟ್ಟೆನುಪಟ್ಟ ಮುದದಿಂದ ನಿಮಗಿಷ್ಟ। ಪದವಿಯ ಕೈಗೊಂಡು। ಮುದದೊಳಾಳಿರಿ ಮುಂದು ॥2॥

ಎನುತಕಿರೀಟವ ತೆಗೆದು । ಸಿಂಹಾ ಸನದ ಮೇಲಿಟ್ಟು ಕೈಮುಗಿದು ॥ ವಿನುತ ಪಟ್ಟದಕತ್ತಿ ಯನು ಮುದ್ರೆಯುಂಗುರ । ಅನುಮಾನಿಸದೆ ತೆಗೆ । ದನು ಕೊಳ್ಳಿರೆಂದನು ॥3॥

ವಾರ್ಧಕ

ನುಡಿಯ ಕೇಳುತಲಾಗ ಪೌರಜನ ತಮ್ಮೊಳಗೆ। ಚಡಪಡಿಸುತಿರಲು ಗುಣಮಿತ್ರ ಧನಮಿತ್ರರಾ । ಕಡೆಯ ಸೋದರನ ನೋಡುತಲಿ ಹಿರಿಯಣ್ಣನನ್ನನುಸರಿಸಿ ಸಂಪದಗಳ॥ ಒಡನೆ ತ್ಯಜಿಸುತ ಧರ್ಮಮಿತ್ರಗೆರಗುತ ನಿಲಲು । ದೃಢಮನದಿ ಮೂವರೊಂದಾಗಿ ಪೊರಟರು ತಮ್ಮ। ಪೊಡವಿಯನ್ನುಳಿದು ಗುರುವರಗೆ ಕೈಮುಗಿದು ಹರಿಯಂ ಧ್ಯಾನಿಸುತಲೆತ್ತಲೋ ॥1॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ತೊಲಗಿತ್ತೈಪೀಡೆಗಳು ನಮ್ಮಯ। ನಿಲಯದಿಂದ್ಯೆ ದಿದರು ಮೂವರು। ಇಳೆಯ ಒಡೆತನ ಸಾಧಿಸಿದೆ ಬಲು । ಸುಲಭವಾಗಿ ॥1॥

ವೃದ್ಧಮಂತ್ರಿ ಪುರೋಹಿತರಿಗಿಹ । ಹುದ್ದೆಗಳನೆಲ್ಲವನು ಕ್ಷಣದೊಳು । ತಿದ್ದುಪಡಿಯಾಗಿಸುತ ಹೊಸಬರ । ಹೊದ್ದಿಸುವುದು ॥2॥

ಎನ್ನುತಲಿ ಕಲಿಮಿತ್ರ ದೇಶದ। ಉನ್ನತೋನ್ನತ ಸ್ಥಾನಗಳಿಗೆ। ತನ್ನವರನೇ ನೇಮಿಸುತ ದೌ । ರ್ಜನ್ಯದಿಂದ ॥3॥

ಆಳುತಿರಲಾದುಷ್ಟರಾಜನ । ಮೇಳಸಖರುಪಟಳದಿ ಸುಖದಲಿ । ಬಾಳಲಾರದೆ ನಾಡತೊರೆದರು । ಗೋಳಿಡುತಲಿ ॥4॥

ಅಂದಗಾತಿಯರನ್ನುತರಿಸುತ । ಬಂಧುರದ ನೃತ್ಯಗಳನೆಸಗಿಸಿ । ಮಂದಮತಿತೋಷಿಸುತಲಿರ್ದನು । ಚಂದದಿಂದ ॥5॥

ರಾಗ ಕಾನಡ ಏಕತಾಳ

ಅರಸನನುಜ್ಞೆಯ । ತೆರದಿಂ ಕುಣಿದಳು । ಸರಸಿರುಹಾಂಬಕಿ ಬಲುವಿಧದಿ ॥ ಕೊರಳನು ಕೊಂಕಿಸಿ । ಕರಗಳ ತಿರುಗಿಸಿ । ಹರಿಕಟಿಬಳುಕಿಸಿ । ತರತರದಿ ॥1॥

ಕಾಲಿಗೆ ಕಟ್ಟಿದ। ಗೆಜ್ಜೆಯ ಕಿಣಿಕಿಣಿ। ಮೇಳವಿಸಿದ ನಾದಗಳಂದು॥ ಭೂಲೋಲನ ಸ್ತ್ರೀ । ಲೋಲನ ಮನವನು । ಶೀಲೆಸೆಳೆದಳು ನರ್ತಿಸುತಂದು ॥2॥

ಕಂದ

ದುರ್ಜನರೆಸಗುವ ಹಿಂಸೆಯ । ಸಜ್ಜನ ಬುಧಜನರು ತಾಳಲಾರದೆ ನರಳಲ್ ॥ ಆರ್ಜಿಸಿದಾ ಕಡುಪಾಪಕೆ । ಊರ್ಜಿತದಿಂದರಸಗಾಯ್ತು ಫಲವೆಂದೊರೆದರ್ ॥1॥

ಭಾಮಿನಿ

ದುರುಳ ಪಾತಕಿಯರಸನಿಗೆ ಮಹೀ । ಶ್ವರಿಯೆನುವ ಜ್ವರ ಬಾಧಿಸಲು ಪರಿ। ಹರಿಸಲಾರದೆ ಬಳಲಿದನು ಅಳಲಿದನು ಬಹುವಿಧದಿ ॥ ಪರಮ ಶ್ರುತಧೀಯೆಂಬ ಭೂಸುರ । ವರನ ಆದೇಶದೊಲು ತನ್ನಯ । ತರಳ ವಸುರಾಯನಿಗೆ ರಾಜ್ಯದ ಒಡೆತನವನಿತ್ತು ॥1॥

ರಾಗ ಕಾಂಬೋಧಿ ಝಂಪೆತಾಳ

ಶ್ರುತಧೀ ವಿಬುಧವರನ । ಹಿತನುಡಿಯ ತೆರದಿಂದ । ವ್ರತ ಉಪಾಸನೆಗಳನು ಮಾಡಿ॥ ಕ್ಷಿತಿಪಕಲಿಮಿತ್ರ ತ । ನ್ನತಿ ದೌಷ್ಟ್ಯದಿಂದಾದ ಧ ಸ್ಥಿತಿಯ ಮನಗಂಡು ಮಿಗೆ ಮರುಗಿ ॥1॥

ಪರಮಮುಹಿಮರೆ ನಾನು। ವಿರಚಿಸಿದ ಪಾಪಕ್ಕೆ। ಪರಿಹಾರವಿಹುದೇನೊ ತಿಳಿಯೆ॥
ಅರುಹಬೇಕೆನಲು ದಯ। ವಿರಿಸುತೆಂದನು ಭೂಮಿ। ವರಗೆ ದಿವ್ಯಜ್ಞಾನಿಯಂದು ॥2॥

ಪ್ರಾಯಶ್ಚಿತ್ತಗಳುಂಟು । ನೀಯೆಸಗಿರುವ ಸಕಲ । ಹೇಯಕೃತ್ಯಂಗಳಿಗು ಸಹಿತ ॥
ಬೇಯುತ್ತ ಮನದಿಪ। ಶ್ಚಾತ್ತಾಪಥಗೆಯಿಂದ। ನೋಯಲದು ಪರಿಹಾರ ಸತ್ಯ ॥3॥

ಆದರೂ ನಿನ್ನ ಮನ। ಕಾದ ಭೀತಿಯ ಕಳೆಯೆ। ಹಾದಿಯಿದೆ ಸುಲಭ ಸಾಧ್ಯವದು॥
ಮೋದದಿಂ ಕಾಶಿ ಮೊದ ।ಲಾದ ತೀರ್ಥಾಟನೆಯೊಳಾದಪುದು ಸಕಲ ಶುಭ ಮುಂದೆ ॥4॥

ವಾರ್ಧಕ

ಕರುಣನಿಧಿ ನಿಮ್ಮಾಜ್ಞೆಯದು ಶಿರೋಧಾರ್ಯವೆಂ। ದೆರಗಿ ಪೂಜ್ಯರೆ ಬಾಲಕನು ಅಜ್ಞನವನ ನೀವ್ । ವರ ರಾಜಗುರುವಾಗಿ ಆಡಳಿತ ಸೂತ್ರಮಂ ಕೈಗೊಂಡು ನಡೆಸಿವುಮುಂದೆ। ದುರಿತ ಭಾಜನನಾದ ಯೆನ್ನಾಳ್ವಿಕೆಯೊಳು ಪರಿ । ಪರಿಕಷ್ಟನಷ್ಟಕೊಳಗಾದವರ ನೋಡಿ ಕೃಪೆಯಿರಿಸಿ ಪರಿಹಾರವನ್ನಿತ್ತು ಸಂತೈಸುವೊಡೆ ಬಿನ್ನವಿಪೆ ತಮ್ಮೊಳೆನುತ ॥1॥

ಕಂದ

ಎಂದೆನ್ನುತ ಗುರುವರಗಂ । ವಂದಿಸುತಲಿ ತೀರ್ಥಯಾತ್ರೆ ಗೈದಲ್ಕಿತ್ತಂ ॥
ಮುಂದಾವಸುರಾಯನು ಮುದ। ದಿಂದಾಳಿದ ರಾಜಗುರುಗಳಾದೇಶದೊಳಂ ॥1॥

ರಾಗ ಕೇದಾರಗೌಳ ಝಂಪೆತಾಳ

ವಸುಮತಿಯ ತಾನಾಳುತ। ಗುರುಮತದಿ। ವಸುರಾಯನಿರಲಿಕ್ಕೆ॥ ಕುಶಲದಿಂ ಕಲಿಮಿತ್ರನು । ಯಾತ್ರೆಯಲಿ । ವಸುಧೆಯೆಲ್ಲೆಡೆ ಸಾರ್ದನು ॥1॥

ಗುರುವಚನದಚಲ ಭಕ್ತಿ । ಕ್ಷೇತ್ರಗಳ । ಪರಿಚಯುವನರಿವಾಸಕ್ತಿ ॥ ಮರೆದು ಸುಖಭೋಗಗಳನು । ಶ್ರದ್ಧೆಯಲಿ । ಚರಿಸಿದನು ಬಲು ನಾಡನು ॥2॥

ಕಳೆಯೆ ಕೆಲವತ್ಸರಗಳು। ಇರುಳಿನಲಿ। ಕಲಿಮಿತ್ರ ಪವಡಿಸಿರಲು॥ ಜಲಜನಾಭನು ಸ್ವಪ್ನದಿ । ಕಾಣಿಸುತ । ಒಲಿದು ಪೇಳಿದನು ಮುದದಿ ॥3॥

ಪೊಡವಿಯೊಳು ಹಲವು ಕ್ಷೇತ್ರ । ದರುಶನವ । ಪಡೆದಿರ್ದರೂ ಸಮೇತ ॥
ಎಡತೊರೆಯ ಪುಷ್ಕರಿಣಿಯ । ಸ್ನಾನವನು । ಬಿಡದೆಸಗಿ ಸೇರುಗತಿಯ ॥4॥
ಎನುತಲೆಚ್ಚರಿಸಲಾಗ । ಕಲಿಮಿತ್ರ । ಕನಸಿನಿಂದೆದ್ದು ಬೇಗ ॥
ವನಜಸಖನುದಯದಲ್ಲಿ ನದಿಸ್ನಾನ । ವನು ಮುಗಿಸುತಲಿ ಮುದದಲಿ ॥5॥

ಭಾಮಿನಿ

ಬೆಸಗೊಳುತ ಪುಷ್ಕರಿಣಿಯಾವೆಡೆ । ಯೆಸೆವುದೆನುತಲ್ಲಲ್ಲಿ ಚರಿಸುತ । ಬಿಸಜ ಬಾಂಧವ ಕ್ಷೇತ್ರವನು ಸೇರುತ್ತ ಸಂತಸದಿ ॥ ವಿಷಗಳನ ಭಕ್ತಿಯೊಳಗರ್ಚಿಸಿ । ಕುಸುಮನೇತ್ರನ ಕರುಣದಿಂದಲಿ ವಸುಮತೀಶನು ಪಡೆದ ಕಾಲಾಂತರಕೆ ದಿವ್ಯಪದ ॥1॥

ಪಾತ್ರವರ್ಗ

1. ಸುಬಲರಾಜ, 2. ಮೀನಾಕ್ಷಿ 3. ಅರುಣೆ, 4. ಧರ್ಮಮಿತ್ರ, 5. ಧನಮಿತ್ರ, 6. ಗುಣಮಿತ್ರ, 7. ಕಲಿಮಿತ್ರ, 8. ವಿಪ್ರರು, 9. ರಾಜಪುರೋಹಿತರು, 10. ದುಷ್ಟಕೂಟ, 11. ನೃತ್ಯಗಾತಿ, 12. ಶ್ರುತಧೀ, 13. ವಸುರಾಯ.

ಕಂದ

ತಪನನು ಸ್ಥಾಪಿಸಿರುವ ವರ । ತ್ರಿಪುರಾರಿಯಲಿಂಗ ಪುಷ್ಕರಿಣಿ ಮಹಿಮೆಗಳಂ ॥
ವಿಪುಲಭಕ್ತಿಯೊಳ್ ಕೇಳ್ದವರಿಗೆ । ಕಪಿಲಧ್ವಜನೊಲಿದು ಸಲಿಪನಿಷ್ಟಾರ್ಥಗಳಂ ॥1॥
ಮುಮ್ಮಡಿಯರಸರ ಕೃತಿಯಂ । ಸಮ್ಮತದಿಂದಿತ್ತರ್ ರಾಜಗೋಪಾಲರು ತಾಂ ॥
ಬೊಮ್ಮನರಾಣಿಯನುಗ್ರಹ । ವಮ್ಮಾಡಲು **"ಜಲಜಸಖ"**ನು ವಿರಚಿಸಿದನಿದಂ ॥2॥
ಅಂದದಿ ಬಹುಧಾನ್ಯ ಸಂವತ್ಸರ । ಚಾಂದ್ರಯುಗಾದಿಯೊಳು ಕೃತಿಯನಾರಂಭಿಸುತ॥ ಅಂದಾನಾಗರಪಂಚಮಿ । ಯಂದಿನೊಳ್ ಮಂಗಳವಗೈದೆ ವಾಣಿಯ ದಯದಿಂ ॥3॥

ಭಾಮಿನಿ

ಓದಿದವರಿಗೆ ಆಟಕೂಟವ । ನೋಡಿದವರಿಗೆ ಪಾಲುಗೊಂಡ ವು । ಹೋದಯರಿಗೆ ಶ್ರದ್ಧೆಯಿಂದಿದ ಕೇಳಿದರಿಗೆಲ್ಲ॥ ಆದಯಾಂಬುಧಿ ಲಿಂಗರೂಪಿ ಉ। ಮಾಧವನು ಸನ್ಮಂಗಲವ ನಿ।ತ್ತಾದರದಿ ಪಾಲಿಸುಗೆ ಸಂತತ **"ಜಲಜಸಖ"** ವಿನುತ ॥1॥

ಮಂಗಲಪದ

ರಾಗ ಝಂಪೆತಾಳ

ಮಂಗಲಂ ಮಧುಪುರೇಶನಿಗೆ ಅಘನಾಶನಿಗೆ। ಮಂಗಲಂ ಶರಣಜನ ಪರಿಪಾಲಗೆ॥ ಮಂಗಲಂ ರಜತ ಪೀಠೇಶನಿಗೆ ಈಶನಿಗೆ। ಮಂಗಲಂ ಅಜಪಿಲದ ಮಹಲಿಂಗೇ॥ ಮಂಗಲಂಜಯ ಮಂಗಲಂ ॥1॥

ಅಂಬುರುಹಮಿತ್ರನಿಗೆ । ಅಂಬುಜದಳಾಕ್ಷನಿಗೆ । ತುಂಬುರಾದಿಸಮಸ್ತ ಮುನಿವಂದ್ಯಗೆ॥ ಅಂಬಿಕೆಗೆ ವಾಗಧೀಶ್ವರಿಗ ಸಾಗರಸುತೆಗೆ । "ಅಂಬುರುಹಸಖ" ನುತಗೆ । ಶ್ರೀನಾಥಗೆ॥ ಮಂಗಲಂ ॥2॥

॥ ಮಂಗಲಂ ಜಯ ಜಯ ಮಂಗಲಂ ॥

॥ ಒಟ್ಟು ಪದ್ಯಗಳು 398ಕ್ಕಂ ಮಂಗಳಮಸ್ತು ॥

HE
ಹರೀಶ್ ಎಂಟರ್‌ಪ್ರೈಸಸ್
ಬೆಂಗಳೂರು-3

